ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ


ಸಂಪುಟ 3 ಸಂಚಿಕೆ 48

ನವೆಂಬರ್ 29, 2009

ರೂ. 5/-



ಅಕ್ಕಿ, ಬೇಳೆ, ಎಣ್ಣೆ, ಸಕ್ಕರೆ.....
ಎಲ್ಲರಿಗೂ ರೇಷನ್



ದರೋಡೆಕೋರ ಬಂಡವಾಳಶಾಹಿ ಮತ್ತು ಬಿಜೆಪಿ ರಾಜಕೀಯ ಅನೈತಿಕ ಬೆಸುಗೆ

ಆಹಾರದ ಜೂಜಾಟ ಜನರಿಗೆ ಪ್ರಾಣ ಸಂಕಟ

ಅನ್ನಕ್ಕಾಗಿ ನೆರೆಸಂತ್ರಸ್ಥರ ಪರದಾಟ

ಬೆಲೆ ಏರಿಕೆ ಬೆಂಕಿಯಲ್ಲಿ ಬೇಯುತ್ತಿರುವ ಬದುಕು

ಕಳೆದ ಲೋಕಸಭಾ ಚುನಾವಣೆಗಳೊಂದಿಗೆ ನಡೆದ ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಹಲವು ಅಧಿಕಾರಸ್ಥ ಪಕ್ಷಗಳನ್ನು ಜನ ಮರಳಿ ಚುನಾಯಿಸಿದರು. ಇದಕ್ಕೆ ಬೇರೆ ಬೇರೆ ಕಾರಣಗಳ ಜೊತೆಗೆ ಪಡಿತರ ವ್ಯವಸ್ಥೆಯನ್ನು ಬಲಗೊಳಿಸಿ, ಕಡಿಮೆ ಬೆಲೆಗೆ ಜನರಿಗೆ ಅಕ್ಕಿ, ಗೋಧಿ ನೀಡಿದ್ದು ಕಾರಣ ಎನ್ನುತ್ತದೆ ಅಧ್ಯಯನ.

ಓದಿ ಪಿ.ಸಾಯಿನಾಥರ ಲೇಖನ




ಅಕ್ಕಿಯ ಬೆಲೆ ಅಧಿಕಾರದ ಬೆಲೆ

ಅನೇಕ ಅಂಶಗಳಿಂದ ಪ್ರೇರಿತವಾದ ಒಂದು ಸಂಕೀರ್ಣ ಜನಾದೇಶ ಒಂದನ್ನಂತು ಸ್ಪಷ್ಟಗೊಳಿಸುತ್ತದೆ. ಅದೆಂದರೆ ಅನೇಕ ಸರ್ಕಾರಗಳು ಪ್ರಮುಖವಾಗಿ ಅಗ್ಗದ ಅಕ್ಕಿ ಮತ್ತು ಉದ್ಯೋಗದಂತಹ ಕಲ್ಯಾಣ ಕಾರ್ಯಕ್ರಮಗಳ ಮೇಲೆ ಒತ್ತು ನೀಡಿ ಕಳೆದ (ಮೇ) ತಿಂಗಳ ಚುನಾವಣೆಯಲ್ಲಿ ಸಾಕಷ್ಟು ಲಾಭ ಮಾಡಿಕೊಂಡಿವೆ. ಯಾವ ಪಕ್ಷ- ಕಾಂಗ್ರೆಸ್, ಬಿಜೆಪಿ, ಬಿಜೆಡಿ, ಡಿಎಂಕೆ ಅಥವಾ ಇನ್ನಾವುದೇ-ತಮ್ಮನ್ನು ಮುನ್ನಡೆಸಿತು ಎಂಬುದು ಮುಖ್ಯವಾಗಲಿಲ್ಲ. ಈ ಕೆಲವು ಕ್ರಮಗಳು ದೊಡ್ಡ ಸಂಖ್ಯೆ ಮತದಾರರನ್ನು ಮನೆಯಿಂದ ಹೊರತಂದು ಮತ ಹಾಕುವಂತೆ ಮಾಡದಿರಬಹುದು. ಆದರೆ ಒಂದು ಹಸಿವಿನ ದೇಶದಲ್ಲಿ ಮತದಾರರ ಕೋಪವನ್ನಂತೂ ಕಡಿಮೆ ಮಾಡಲು ಅವು ಯಶಸ್ವಿಯಾದವು. ಮಧುರಾ ಸ್ವಾಮಿನಾಥನ್ ಹೇಳುವಂತೆ, ಎಫ್ಎಓ ಅಂಕಿ ಅಂಶಗಳ ಪ್ರಕಾರ 'ದೊಡ್ಡ ಸಂಖ್ಯೆಯ ಜನರು ತೀವ್ರ ಹಸಿವಿನಲ್ಲಿ ಬದುಕುತ್ತಿರುವುದರಲ್ಲಿ ಬೇರಾವುದೇ ದೇಶ ಭಾರತದ ಸಮೀಪ ಸುಳಿಯಲು ಕೂಡ ಸಾಧ್ಯವಿಲ್ಲ'.

ಹಸಿವು ತನ್ನದೇ ಆದ ಕೆಟ್ಟ ಲಾಲಿತ್ಯವನ್ನು ಹೊಂದಿದೆ. ಕಳೆದ 5 ವರ್ಷಗಳಲ್ಲಿ ಆಹಾರ ವಸ್ತುಗಳ ಬೆಲೆ ಹೆಚ್ಚಳವೂ ವಿಪರೀತವಾಗಿತ್ತು. ಕಳೆದ ಹಲವು ದಶಕಗಳಲ್ಲೇ ಈ ಅವಧಿಯು ಅತ್ಯಂತ ಪ್ರತಿಕೂಲವಾದದ್ದು. 2004 ಮತ್ತು 2008ರ ನಡುವೆ ಅಕ್ಕಿಯ ಬೆಲೆ ಶೇ. 45ರಷ್ಟು ಹೆಚ್ಚಳವಾದರೆ, ಗೋಧಿಯ ಬೆಲೆ ಹೆಚ್ಚಳ ಶೇ. 60. ಮೈದಾ, ಅಡುಗೆ ಎಣ್ಣೆ, ಬೇಳೆ, ಹಾಲು ಮತ್ತು ಉಪ್ಪು ಕೂಡ ಶೇ. 30ರಿಂದ 40ರಷ್ಟು ಬೆಲೆ ಹೆಚ್ಚಳ ಕಂಡವು. ಶೂನ್ಯ ಅಥವಾ ನಕಾರಾತ್ಮಕ ಹಣದುಬ್ಬರ ಕೂಡ ಬೆಲೆ ಏರಿಕೆಯ ಮೇಲೆ ಯಾವುದೇ ಪರಿಣಾಮ ಉಂಟು ಮಾಡಲಿಲ್ಲ. ಆದರೆ ಮಾಧ್ಯಮಗಳು ಮಾತ್ರ ಹಸಿವು ಮತ್ತು ಅಗ್ಗದ ಆಹಾರ ಚುನಾವಣೆಯಲ್ಲಿ ಪ್ರಮುಖ ಅಂಶಗಳಾಗುತ್ತವೆ ಎಂದು ಮನಗಾಣಲಿಲ್ಲ.

ಇ.ಎಂ.ಎಸ್. ಭವನ ನಿಧಿ




ಸಿಪಿಐ(ಎಂ) ಶಿವಮೊಗ್ಗ ಜಿಲ್ಲಾ ಸಮಿತಿ	1350.00
ಸಿಪಿಐ(ಎಂ) ತುಮಕೂರು ಜಿಲ್ಲಾ ಸಮಿತಿ	10,000.00
ಐ.ಟಿ. ಹಿತೈಷಿಗಳು	5000.00
ಸಿಪಿಐ(ಎಂ)ದಕ್ಷಿಣ ಕನ್ನಡ ಜಿಲ್ಲಾ ಸಮಿತಿ	40,000.00
ಹಿಂದಿನ ಮೊಬಲಗು	8,85,000.00
ಒಟ್ಟು	9,41,350.00

ಮಾತ್ರವಲ್ಲ, ಇವುಗಳನ್ನು ಅನಗತ್ಯವಾಗಿ ದೊಡ್ಡದು ಮಾಡಲಾಗುತ್ತಿದೆ ಎಂದು ಹೇಳಿದವು.

ಡಿಎಂಕೆಯು ನೀಡಿದ ಬಣ್ಣದ ಟಿ.ವಿ. ಸೆಟ್, ಸೆಪ್ಟಂಬರ್ 2008ರಿಂದ ಕೆ.ಜಿ.ಗೆ 1 ರೂ. ದರದಲ್ಲಿ 20 ಕೆ.ಜಿ. ಅಕ್ಕಿ ನೀಡಿದ್ದರಲ್ಲಿ ಒಂದು ಸಣ್ಣ ಅಂಶದಷ್ಟು ಪ್ರಾಮುಖ್ಯತೆ ಪಡೆಯಲಿಲ್ಲ. ಆದರೆ ಮಾಧ್ಯಮಗಳು ಬಣ್ಣದ ಟಿ.ವಿ.ಗೆ ಹೆಚ್ಚು ಪ್ರಚಾರ ನೀಡಿದವು. ಎಪಿಎಲ್, ಬಿಪಿಎಲ್ ಎಂಬ ಯಾವ ಭೇದವನ್ನು ಮಾಡದೆ ಪಡಿತರ ಚೀಟಿ ಹೊಂದಿದ್ದ ಎಲ್ಲರಿಗೂ ಅಕ್ಕಿ ನೀಡಲಾಯಿತು. ಈಗಾಗಲೇ ತಮಿಳುನಾಡಿನಲ್ಲಿ ಕೆ.ಜಿ.ಗೆ 2ರೂ. ನಂತೆ ಅಕ್ಕಿ ನೀಡಲಾಗುತ್ತಿದೆ. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಕೂಡ ಗಂಭೀರವಾಗಿ ತೆಗೆದುಕೊಳ್ಳಲಾಗಿದೆ. ಈ ಎರಡು ಕಾರಣಗಳಿಂದ ರಾಜ್ಯ ಸರ್ಕಾರ ಚುನಾವಣೆಯಲ್ಲಿ ಲಾಭ ಪಡೆದುಕೊಂಡಿತು.

ತಮಿಳುನಾಡಿನಂತೆ ಆಂಧ್ರಪ್ರದೇಶದಲ್ಲಿ ಕೂಡ ವೈ.ಎಸ್. ರಾಜಶೇಖರ ರೆಡ್ಡಿರವರ ಕಾಂಗ್ರೆಸ್ ಪಕ್ಷ ಲಾಭ ಹೊಡೆಯಿತು. ಅಲ್ಲಿ ಚಿರಂಜೀವಿಯವರ ಪ್ರಜಾರಾಜ್ಯಂ ಎಂಬ ಮೂರನೇ ಶಕ್ತಿ ಕಾಂಗ್ರೆಸ್ ವಿರೋಧಿ ಮತಗಳನ್ನು ಬಹಳಷ್ಟು ಪಡೆದುಕೊಂಡು ಕಾಂಗ್ರೆಸ್‌ಗೆ ಸಹಾಯ ಮಾಡಿತು. ಇದರಿಂದ ವಿರೋಧಿ ತೆಲಗುದೇಶಂ ನಲುಗಿಹೋಯಿತು. ವೈ.ಎಸ್.ಆರ್.ರವರ ಸರ್ಕಾರ ಕೂಡ ತನ್ನ ಮೊದಲ ವರ್ಷದಲ್ಲೇ ಆ ಹಿಂದೆ ರದ್ದಾಗಿದ್ದ ಲಕ್ಷಾಂತರ ಬಿಪಿಎಲ್ ಕಾರ್ಡ್‌ಗಳನ್ನು ಪುನರುಜ್ಜೀವನಗೊಳಿಸಿದ್ದು ಮಾತ್ರವಲ್ಲದೆ ಹೊಸದಾಗಿ ಕೂಡ ಲಕ್ಷಾಂತರ ಕಾರ್ಡ್ ನೀಡಿತು (ದಿ ಹಿಂದೂ ಸೆ. 29, 2005). 9 ವರ್ಷಗಳಲ್ಲಿ, ಚುನಾವಣೆಯ ಸ್ವಲ್ಪ ಮೊದಲು ಹೊರತುಪಡಿಸಿ, ಚಂದ್ರಬಾಬು ನಾಯ್ಡು ಸರ್ಕಾರ ಒಂದೇ ಒಂದು ಬಿಪಿಎಲ್ ಕಾರ್ಡ್ ನೀಡಿರಲಿಲ್ಲ ನಗರ ಪ್ರದೇಶಗಳನ್ನು ಒಳಗೊಂಡಂತೆ ಹಸಿವು ಮತ್ತು ಆಹಾರ ಅತ್ಯಂತ ಪ್ರಮುಖ ವಿಷಯಗಳಾದ ಆಂಧ್ರಪ್ರದೇಶದಂತ ಈ ರಾಜ್ಯದಲ್ಲಿ,

ನಾಯ್ಡುರವರ ಮಾವ ಎನ್.ಟಿ. ರಾಮರಾವ್ ಮುಖ್ಯಮಂತ್ರಿಯಾಗಿದ್ದಾಗಲೇ 2ರೂ.ಗೆ ಅಕ್ಕಿ ನೀಡಲು ಆರಂಭಿಸಿದ್ದ ರಾಜ್ಯ ಆಂಧ್ರಪ್ರದೇಶ. ಎನ್.ಟಿ.ಆರ್.ರವರ ಜನಪ್ರಿಯತೆಯನ್ನು ಯಾರೂ ಪ್ರಶ್ನಿಸುವಂತಿರಲಿಲ್ಲವಾದರೂ 2ರೂ.ನ ಅಕ್ಕಿ



ಬೇರಾವುದೇ ಅಂಶಗಳಿಂತ ಮತಗಳನ್ನು ಪರಿವರ್ತಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿತು. ಏಪ್ರಿಲ್ 2008ರಲ್ಲಿ ಅಂದರೆ ಲೋಕಸಭಾ ಚುನಾವಣೆಗೆ ಸ್ವಲ್ಪ ಮೊದಲು 2ರೂ.ಗೆ ಅಕ್ಕಿ ಯೋಜನೆ ಆರಂಭಿಸುವ ಮೂಲಕ ಟಿಡಿಪಿಯ ಉಡುಪುಗಳನ್ನು ವೈ.ಎಸ್.ಆರ್. ಕದ್ದರು. ತಲಾ ವ್ಯಕ್ತಿಗೆ 4 ಕೆ.ಜಿ. ಅಕ್ಕಿ ನೀಡಲಾಯಿತು. ಎನ್.ಟಿ.ಆರ್.ರವರು ಈ ಯೋಜನೆಯನ್ನು ಆರಂಭಿಸಿದಾಗ ಈ ಮುಂಚಿನ ತಲೆಮಾರಿನ ಕಾಂಗ್ರೆಸ್ ನಾಯಕರು ಇದನ್ನು 'ದುಬಾರಿ ಗಿಮಿಕ್' ಎಂದು ಜರೆದಿದ್ದರು. ಆದರೆ ಡಾ|| ರೆಡ್ಡಿಯವರು ಸೂಕ್ಷ್ಮ ಕಾರ್ಯ ಕೈಗೊಂಡು ಅದರಿಂದ ಗಳಿಸಿಕೊಂಡರು.

ನಾಯ್ಡುರವರು ತಮ್ಮ ಅಧಿಕಾರದ ಅವಧಿಯಲ್ಲಿ, ತನ್ನ ಸುಧಾರಣೆಗಳಿಗಾಗಿ ವಿಪರೀತ ಹೊಗಳಿಸಿಕೊಂಡರು, ವಿದ್ಯುತ್ ದರಗಳಲ್ಲಿ ತೀವ್ರ ಹೆಚ್ಚಳ, ನೀರಿನ ದರ, ಆಹಾರ ಮತ್ತಿತರೆ ದರ ಹೆಚ್ಚಳಗಳಿಂದ ಜನತೆ ಅಪಾರ ಬಾಧಿಸಲ್ಪಟ್ಟಿದ್ದರು. 2009ರಲ್ಲಿ ಕೂಡ ಆತ ಈ ಕಳಂಕದಿಂದ ಹೊರಬರಲಾಗಲಿಲ್ಲ ಅಥವಾ ಜನತೆಯ ವಿಶ್ವಾಸಗಳಿಸಲಾಗಲಿಲ್ಲ. ಆದರೆ ಆತನ ಪ್ರತಿಸ್ಪರ್ಧಿ ಉದ್ಯೋಗ ಖಾತ್ರಿ ಯೋಜನೆಯನ್ನು ಅಚ್ಚುಕಟ್ಟಾಗಿ ಜಾರಿಗೊಳಿಸಿದರು. ರೇಗಾದಲ್ಲಿ ಕೆಲಸ ಸಿಕ್ಕಿದ್ದರಿಂದ ಹಿಂದುಳಿದ ಮೆಹಬೂಬ್ ನಗರ ಜಿಲ್ಲೆಯಿಂದ ಕೆಲಸಕ್ಕಾಗಿ ವಲಸೆ ಹೋಗುವವರ ಪ್ರಮಾಣ ತುಂಬಾ ಕಡಿಮೆಯಾಯಿತು. ಅದೂ ಆಹಾರ ವಸ್ತುಗಳ ಬೆಲೆ ಹೆಚ್ಚಳ ಕಾಡುತ್ತಿದ್ದ ಸಮಯದಲ್ಲಿ. ಬೆಲೆ ಹೆಚ್ಚಳದಿಂದಾಗಿ ಅವರ ತಿಂ... ಪಿಂಚಣಿ 200/- ರೂ. ಯಾವುದಕ್ಕೂ ಸಾಲದ್ದರಿಂದ 70 ವರ್ಷದ ಮುದುಕರು ಕೂಡ ರೇಗಾ ಸೈಟುಗಳತ್ತ ಕೆಲಸಕ್ಕಾಗಿ ಮುಖಮಾಡಿದ್ದರು. ಪಿಂಚಣಿ ವಿಷಯದಲ್ಲಿ ಕೂಡ ಆಂಧ್ರಪ್ರದೇಶ ಸರ್ಕಾರ ಕೆಲವೊಂದು ಸಾಧನೆ ಮಾಡಿತು. ಅದು ಅಧಿಕಾರಕ್ಕೆ ಬಂದಾಗ ರಾಜ್ಯದಲ್ಲಿ 1.8 ದಶಲಕ್ಷ ಜನರು ವೃದ್ಧಾಪ್ಯ, ವಿಧವೆ, ಅಂಗವಿಕಲ ಪಿಂಚಣಿ ಹೀಗೆ ತಿಂಗಳಿಗೆ 75/- ರೂ. ಪಡೆಯುತ್ತಿದ್ದರು. ಇದನ್ನು ಅಂಗವಿಕಲರಿಗೆ 500/-ರೂ.ಗೆ ಹೆಚ್ಚಿಸಿ ಉಳಿದವರಿಗೆ 200/-ಗೆ ಹೆಚ್ಚಿಸಲಾಯಿತು. ಈ ಯೋಜನೆಯ ಫಲಾನುಭವಿಗಳ ಸಂಖ್ಯೆ 4 ಪಟ್ಟು ಹೆಚ್ಚಾಗಿ 7.2 ದಶಲಕ್ಷಕ್ಕೇರಿತು. ಈ ರಾಜ್ಯ ದೇಶದಲ್ಲೇ ಉತ್ತಮವಾದ ಮಹಿಳಾ ಪಿಂಚಣಿ ಯೋಜನೆಯನ್ನು ಸಹ ಹೊಂದಿದೆ.

ಒರಿಸ್ಸಾದಲ್ಲಿ ಕೂಡ ನವೀನ್ ಪಟ್ನಾಯಕ್‌ರವರು ತಮ್ಮ ಆಟವನ್ನು ಚಾಕಚಕ್ಯತೆಯಿಂದ ಆಡಿ ಬಿಜೆಪಿಯನ್ನು ಗಟಾರಕ್ಕೆ ಹಾಕಿ ಕಾಂಗ್ರೆಸ್‌ನ್ನು ಲಾಯಕ್ಕೆ ಕಟ್ಟಿದರು. ಅವರು ಕೂಡ ಜನರಿಗೆ ಅಗ್ಗದ ಅಕ್ಕಿ ನೀಡುವ ಮೂಲಕ ತುಂಬಾ ಗಳಿಸಿಕೊಂಡರು. ಕಿತ್ತುತಿನ್ನುವ ಹಸಿವಿನ ಕಾಳಹಂಡಿ-ಬೋಲಾಂಗೀರ್-ಕೊರಾಪುಟ್ ಪ್ರದೇಶದಲ್ಲಿ 2008ರ ಮಧ್ಯದಿಂದಲೇ ಕೆ.ಜಿ.ಗೆ 2 ರೂ.ನಂತೆ 25 ಕೆ.ಜಿ. ಅಕ್ಕಿಯನ್ನು ಎಲ್ಲಾ ಕುಟುಂಬಗಳಿಗೆ ನೀಡಲು ಆರಂಭಿಸಿದರು. ರಾಜ್ಯದ ಉಳಿದ ಭಾಗಗಳಲ್ಲಿ ಇದನ್ನು ಕೇವಲ ಬಿಪಿಎಲ್ ಕುಟುಂಬಗಳಿಗೆ ಸೀಮಿತಗೊಳಿಸಲಾಯಿತು. ಮೇಲಿನ ಹಸಿವಿನ ಪ್ರದೇಶಗಳಲ್ಲಿನ ಅತ್ಯಂತ ಬಡಕುಟುಂಬಗಳಿಗೆ 10 ಕೆ.ಜಿ.ಅಕ್ಕಿಯನ್ನು ಮುಕ್ತಟೆಯಾಗಿ ಕೂಡ ನೀಡಲಾಯಿತು. ಹಸಿವಿನ ಸಾವುಗಳನ್ನು ತಡೆಯುವಲ್ಲಿ ಇದು ಪ್ರಮುಖ ಪಾತ್ರ ವಹಿಸಿತು. ಪಿಂಚಣಿ ಸೌಲಭ್ಯದ ಕೆಳಗೆ ಬರುವವರ ಸಂಖ್ಯೆಯನ್ನು ಹೆಚ್ಚಿಸಿದ ಪಟ್ನಾಯಕ್ ಬಡವರಿಗೆ ವಸತಿ ಯೋಜನೆಯನ್ನು ಕೈಗೊಂಡರು. (ಆದ...

ಪುಟ 16ಕ್ಕೆ

ಸಂಪಾದಕೀಯ

ಸಿಬಿಐ ವಿಚಾರಣೆಗೆ ಗಣಿಗಳ್ಳತನ ಬಿಜೆಪಿ ಸರ್ಕಾರ ಏನು ಮಾಡಲಿದೆ ?

'ಗಣಿಗಳ್ಳತನದ ಕುಖ್ಯಾತಿಯ ಸಚಿವ ಜನಾರ್ಧನರೆಡ್ಡಿ, ಕಂಪನಿಯ ಓಬಳಿಪುರಂ ಮೈನಿಂಗ್ ಕಂಪನಿಯು ಎಸಗಿರುವ ಅಕ್ರಮಗಳ ಬಗ್ಗೆ ತನಿಖೆ ನಡೆಸಲು ಆಂಧ್ರಪ್ರದೇಶದ ರಾಜ್ಯ ಸರ್ಕಾರ ಸಿ.ಬಿ.ಐ.ಗೆ ಕೋರಿರುವುದು ಸ್ವಾಗತಾರ್ಹವಾದುದು. ಇಂತಹ ಕ್ರಮಕ್ಕೆ ವಿರೋಧಪಕ್ಷಗಳಾದ ತೆಲುಗುದೇಶಂ, ಉಭಯ ಕಮ್ಯುನಿಸ್ಟ್ ಪಕ್ಷಗಳು, ಪ್ರಜಾರಾಜ್ಯಂ ಸತತವಾಗಿ ಪ್ರತಿಭಟನೆ ನಡೆಸಿದ ಬೆನ್ನಲ್ಲಿ ವಿಚಾರಣೆಗೆ ಒಪ್ಪಿಸಲಾಗಿದೆ. ಇದಕ್ಕೆ ಅಧಿಕಾರದಲ್ಲಿರುವ ಕಾಂಗ್ರೆಸ್ಸಿನ ರಾಜಕೀಯ ಕಾರಣಗಳೇನೇ ಇದ್ದರೂ ಅಕ್ರಮಗಳು-ಹೊರಬರಲು ಈ ವಿಚಾರಣೆ ಮಹತ್ವದ ಪಾತ್ರ ವಹಿಸಬಲ್ಲದು.

ಈಗಿನ ಪ್ರಶ್ನೆ ಎಂದರೆ ಆಂಧ್ರದಂತೆ ಕರ್ನಾಟಕ ಸರ್ಕಾರವೂ ಅಂತಹ ವಿಚಾರಣೆಗೆ ಕೋರುವುದೇ ಎನ್ನುವುದು, ಮಾತ್ರವಲ್ಲ ನಿಜಕ್ಕೂ ಗಣಿಗಳ್ಳರ ಹಣ-ರಾಜಕೀಯ- ಅಧಿಕಾರದ ಮದವಡಗಿಸಬೇಕೆಂದರೆ ಆಂಧ್ರ ಸರ್ಕಾರದ ಕ್ರಮವನ್ನೇ ಸೂಕ್ತವಾಗಿ ಬಳಸಿದರೂ ಗಣಿ ಮಾಫಿಯಾಗಳನ್ನು ಮಣಿಸಿ, ದಂಡಿಸಲೂ ಸಾಧ್ಯವಿದೆ. ಸಿಬಿಐ ತನಿಖೆಯ ವೇಳೆ ಕರ್ನಾಟಕ ಸರ್ಕಾರವೂ ಸಹ ಎಲ್ಲಾ ರೀತಿಯ ಸಹಕಾರ ನೀಡಬೇಕು. ಆಂದರೆ ಬಿಜೆಪಿ ಸರ್ಕಾರದಿಂದ ಅಂತಹ ಲಕ್ಷಣಗಳು ಕಾಣುತ್ತಿಲ್ಲ.

ಇದರಲ್ಲಿ ಕರ್ನಾಟಕ-ಆಂಧ್ರಗಳ ಗಡಿಕಲ್ಲು ಸ್ಫೋಟವೂ ತನಿಖೆಗೆ ಒಳಪಡಲಿದೆ. ಹಾಗೆಯೇ ಕರ್ನಾಟಕದ ಗಡಿಯನ್ನು 65 ಮೀಟರ್‌ನಷ್ಟು ಹಿಂದೆ ಒತ್ತುವರಿ ಮಾಡಲಾಗಿದೆ. ರಾಜ್ಯದಿಂದ ಸುಮಾರು 37 ಲಕ್ಷ ಟನ್ ಅದಿರನ್ನು ಅಕ್ರಮವಾಗಿ ಆಂಧ್ರದ 'ಸುರಕ್ಷಿತ' ಪ್ರದೇಶಕ್ಕೆ ಸಾಗಿಸಿದ ಪ್ರಕರಣವಿದೆ. ಅಂದರೆ ರಾಜ್ಯದ ಸಾವಿರಾರು ಕೋಟಿ ರೂಪಾಯಿಗಳ ಆದಾಯ ಸೋರಿ ಹೋಗಿದೆ. ಆಂಧ್ರದಿಂದ ಕರ್ನಾಟಕಕ್ಕೆ ಪ್ರವೇಶಿಸುವ ಗಡಿಯಲ್ಲಿ ರಾಜ್ಯದ ಭಾಗದಲ್ಲಿ ಚೆಕ್‌ಪೋಸ್ಟನ್ನೇ ರಾಜ್ಯ ಸರ್ಕಾರ ಸ್ಥಾಪಿಸಿಲ್ಲ. ಅಲ್ಲದೇ ಗುತ್ತಿಗೆ ಪಡೆದಿರುವ ಬಳ್ಳಾರಿ ಕಬ್ಬಿಣ ಅದಿರುನಿಗಮವು (BIOL) ಗುತ್ತಿಗೆ ಪಡೆದಿರುವ ಗಣಿ ಪ್ರದೇಶದಲ್ಲಿ ಅವರ ಸುಮಾರು 68.5 ಹೆಕ್ಟೇರ್ (ಸುಮಾರು 171.25 ಎಕರೆ) ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಲಾಗಿದೆ ಎಂದು ದೂರಿದೆ. ಉಳಿದ BIOL ಪ್ರದೇಶ ಬಿಟ್ಟರೆ ಉಳಿದಂತೆ ಮನಸೋ ಇಚ್ಛೆ ಅಕ್ರಮವಾಗಿ ಗಣಿಲೂಟಿಯನ್ನು ಓಬಳಾಪುರಂ ಮೈನ್ಸ್ ನಡೆಸಿದೆ. ಅಂದರೆ ಆಂಧ್ರದ ಹಿಂದಿನ ಕರ್ನಾಟಕದ ಇಂದಿನ ಸರ್ಕಾರಗಳು ಗಣಿ ಮಾಫಿಯಾದ ಲೂಟಿಗೆ ಮುಕ್ತ ಅವಕಾಶ ಕಲ್ಪಿಸಿರುವುದು, ತಾನೂ ಕೈ ಜೋಡಿಸಿರುವುದು ಮತ್ತೊಮ್ಮೆ ನಿಚ್ಚಳವಾಗಿದೆ.

ಬಹುತೇಕ ಈ ಎಲ್ಲಾ ಅಕ್ರಮಗಳ ಬಗ್ಗೆ ಕಾಲದಿಂದ ಕಾಲಕ್ಕೆ ಧ್ವನಿ ಎತ್ತಲಾಗಿದೆ. ವಿವರ ಮಾಹಿತಿಗಳನ್ನು ಸರ್ಕಾರಕ್ಕೆ ನೀಡಲಾಗಿದೆ. ಪ್ರಮುಖವಾಗಿ ಇಂತಹ ಅಕ್ರಮಗಳ ಬಗ್ಗೆ ಕರ್ನಾಟಕ ಲೋಕಾಯುಕ್ತರಾದ ನ್ಯಾ.ಎನ್. ಸಂತೋಷ್ ಹೆಗಡೆಯವರ ನೇತೃತ್ವದಲ್ಲಿ ಸಮಿತಿಯು ವಿವರವಾದ ವರದಿಯನ್ನು ಸರ್ಕಾರಕ್ಕೆ ನೀಡಿತ್ತು. ಸ್ವತಂತ್ರವಾದ ಸಂಸ್ಥೆಯಿಂದ ತನಿಖೆ ನಡೆಸಲು ಸೂಚಿಸಿತ್ತು. ಮುಖ್ಯಮಂತ್ರಿ ಯಡಿಯೂರಪ್ಪನವರು ಆರಂಭದಲ್ಲೆ ವೀರಾವೇಶ ಮಾತನಾಡಿದ್ದು ಬಿಟ್ಟರೆ ಒಂದು ವರ್ಷವಾದರೂ ಏನೊಂದು ಕ್ರಮವಹಿಸದೇ ಧೂಳು ಹಿಡಿಯಲು ಬಿಟ್ಟಿದ್ದು ಯಾಕೆ? ರಾಜ್ಯ ಹೈಕೋರ್ಟ್-ಸುಪ್ರಿಂಕೋರ್ಟ್‌ಗಳು ಕೇಂದ್ರ-ರಾಜ್ಯಗಳ ಜಂಟಿ ಸಮೀಕ್ಷೆಗೆ ಸೂಚಿಸಿದ್ದರೂ ಅಸಹಕಾರವನ್ನು ತೋರಿಸುತ್ತಾ ಬಂದಿದ್ದು ಯಾಕೆ? ಈ ಎಲ್ಲವೂಗಳಲ್ಲಿಯೂ ಬಿಜೆಪಿ ಸರ್ಕಾರ ಅಪರಾಧಿ ಸ್ಥಾನದಲ್ಲಿದೆ.ಭಿನ್ನಮತದ ಬಂಡಾಯ-ಬಲಪ್ರದರ್ಶನ ಮಾಡಿ ಹಿಡಿತ ಹೆಚ್ಚಿಸಿಕೊಂಡಿರುವ (ಆಂಧ್ರದಲ್ಲಿ ತಮಗೆ ವ್ಯತಿರಿಕ್ತ ಸ್ಥಿತಿ ಬಂದರೂ ಕರ್ನಾಟಕ ಸರ್ಕಾರವನ್ನು ಬಳಸುವ ಯೋಚನೆಯಿಂದ) ಸ್ಥಿತಿಯಲ್ಲಿ ಬಿಜೆಪಿ ಏನು ಮಾತನಾಡಲಿದೆ ಎಂಬುದು ಮುಖ್ಯವಾಗಿದೆ.

ಈ ಹಿನ್ನೆಲೆಯಲ್ಲಿಯೂ ರಾಜ್ಯದ -ದೇಶದ ಒಟ್ಟು ಹಿತಾಸಕ್ತಿ ಗಮನದಲ್ಲಿರಿಸಿ ಕರ್ನಾಟಕ ಸರ್ಕಾರ ಏನೊಂದಿಷ್ಟು ವಿಳಂಬ ಮಾಡದೇ ಸಿ.ಬಿ.ಐ.ನ ತನಿಖೆಗೆ ರೆಡ್ಡಿಗಳ ಗಣಿಹಗರಣವನ್ನು ಒಪ್ಪಿಸಬೇಕು. ಇನ್ನೂ ಒಂದು ಪ್ರಮುಖ ಅಂಶವೆಂದರೆ ರೆಡ್ಡಿ ಅಂಡ್ ಕಂಪನಿಗೆ ನೀಡಲಾಗಿರುವ ಗುತ್ತಿಗೆಯನ್ನು ತತ್‌ಕ್ಷಣದಲ್ಲಿಯೇ ರದ್ದು ಮಾಡಬೇಕು. ಈಗ ಸಾಗಿಸುತ್ತಿರುವ ಕಬ್ಬಿಣ ಅದಿರನ್ನು ಕೂಡಲೇ ಮುಟ್ಟುಗೋಲು ಹಾಕಿಕೊಳ್ಳಬೇಕು. ಮನಸೋ ಇಚ್ಛೆ ಅದಿರು ರಫ್ತನ್ನು ನಿರ್ಬಂಧಿಸಿ ನಮ್ಮ ಆಂತರಿಕ ಉತ್ಪಾದನೆ ಆಧರಿಸಿ ಗಣಿಗಾರಿಕೆ ನಡೆಸಬೇಕು. ಇದನ್ನು ಕೇಂದ್ರ -ರಾಜ್ಯ ಸರ್ಕಾರಗಳ ಒಡೆತನದ ಕಂಪನಿಗಳಲ್ಲಿ ಮಾಡಬೇಕು.

ಇನ್ನೂ ಒಂದು ಪ್ರಮುಖ ಅಂಶವೆಂದರೆ ಗಣಿಗಾರಿಕೆಗೆ ಸಂಬಂಧಿಸಿ ಹೊಸ ನೀತಿಯನ್ನು ತರಲಾಗುವುದೆಂದು ಕೇಂದ್ರ ಪ್ರಕಟಿಸಿದ್ದರೂ ಅಂತಹ ಒಂದು ನೀತಿ ನಿರೂಪಿತವಾಗಿಲ್ಲ. ಆದ್ದರಿಂದ ಒಂದು ರಾಷ್ಟ್ರೀಯ ನೀತಿಯನ್ನು ತುರ್ತಾಗಿ ನಿರೂಪಿಸುವುದು ಅತ್ಯಗತ್ಯವಿದೆ.


ಈಗಿನ ವಿದ್ಯಮಾನ ನೋಡಿದರೆ ಅದು ಹಾಗೇ ಆಗುವುದಿಲ್ಲ. ಇದಕ್ಕೆ ಒಂದು ಪ್ರಬಲ ಜನಾಂದೋಲನವೇ ರೂಪುಗೊಳ್ಳುವುದು, ನಮ್ಮ ಅಮೂಲ್ಯ ಸಂಪನ್ಮೂಲ, ಪರಿಸರ ಬದುಕು ಉಳಿಸಿಕೊಳ್ಳಲು ರಾಜಕೀಯ-ಸಾಮಾಜಿಕ, ಆರ್ಥಿಕ ನೀತಿಗಳನ್ನು ಜನಪರವಾಗಿ ಉಳಿಸಿಕೊಳ್ಳಲು, ಹೊಸತು ಪಡೆಯಲು ಸಂಘರ್ಷಕ ಅತ್ಯಗತ್ಯವಾಗಿದೆ.

ಆಹಾರ : ರಾಜಕೀಯ ಇಚ್ಛಾ ಶಕ್ತಿ ಇಲ್ಲದ ಸರ್ಕಾರಗಳು

'ಏರಿದ ಬೆಲೆಗಳು ಎಂದಾದರೂ ಇಳಿದದ್ದುಂಟೆ? 'ಹೀಗೆ ಸಾಗುತ್ತವೆ ಧವಸ- ಧಾನ್ಯಗಳ ಅಂಗಡಿ ಮುಂದೆ ನಿಂತವರ ಮಾತುಗಳು. ನೆನ್ನೆ ಇದ್ದದ್ದು ಇಂದಿಗಿಲ್ಲ, ಇಂದಿನದು ನಾಳೆಗಿಲ್ಲ. ಎಲ್ಲವೂ ಅನಿಶ್ಚಿತತೆ, ಆತಂಕ, ಆಹಾರಧಾನ್ಯಗಳ ಖರೀದಿ, ಪೂರೈಕೆಯಲ್ಲಿ ಜೂಜಾಟ ಮೇಲುಗೈ ಪಡೆಯುತ್ತಿರುವಂತೆ ಜನರ ಜೀವನವೂ ಜೂಜಾಟದ ಹೊಯ್ದಾಟದಲ್ಲೇ ಸಾಗುತ್ತಿದೆ.


ಬೆಲೆ ಏರಿಕೆಯ ಬಾಣ

ಈ ವಾರವಂತೂ ಬೆಲೆ ಏರಿಕೆಯದ್ದೇ ಮಾತು. ಕಳೆದ ವರ್ಷದ ಹಿಂದೆ ಅಕ್ಕಿ ಉತ್ತಮದ್ದು 28 ರಿಂದ 32 ರೊಳಗಿದ್ದರೆ ಅದೇ ಈಗ 35 ರಿಂದ 42 ರ ಗಡಿ ತಲುಪಿದೆ. ಸಕ್ಕರೆ 18 ರಿಂದ 34 ಇದ್ದದ್ದು 38 ರೂ. ತೊಗರಿಬೇಳೆ 55 - 60 ರಿಂದ 80ರಿಂದ 88. ಕೆಲವೆಡೆ 105, ಗೋಧಿ 14, 26 ರೂ.ದಿಂದ 18-22 ಸೀಮೆ ಎಣ್ಣೆ ರೂ.30 ರವರೆಗೆ ತರಕಾರಿಗಳು ಹಾಗೆಯೇ. ಟೊಮ್ಯಾಟೋ ರೂ.10 ಇದ್ದರೂ 24ಕ್ಕೆ. ಈರುಳ್ಳಿ 16 ರಿಂದ 24, ಬೆಳ್ಳುಳ್ಳಿ 80, ಬೆಂಡೆಕಾಯಿ 20- 24. ಬಿನ್ಸ್ 20 ರಿಂದ 30.... ಹೀಗೆ ಚುಚ್ಚುತ್ತಾ ಸಾಗುತ್ತದೆ ಏರಿಕೆಯ ಬಾಣ.



ಅಸಹನೀಯತೆ

ಹೆಚ್ಚದ ಆದಾಯ, ಹೆಚ್ಚಿದ ಬೆಲೆಗಳು ಪರಿಣಾಮ? ಆಹಾರಧಾನ್ಯಗಳ ಬಳಕೆಯನ್ನು ಕಡಿಮೆ ಮಾಡಿಕೊಳ್ಳಬೇಕು. ಆದರೆ ಅಷ್ಟೇ ಸಾಲದು ಹಾಲು, ಮೊಟ್ಟೆ, ಮಾಂಸ ನಿಲ್ಲಿಸಬೇಕು ಅಥವಾ ನೆನಪಾದಾಗ ನಂಜಿಕೊಳ್ಳುವ ನೆಲ್ಲಿಕಾಯಿಯಾಗಿಸಬೇಕು. ಬಟ್ಟೆ ಖರೀದಿಗೆ ಕತ್ತರಿ, ಅಡುಗೆ ಐಟಂಗಳು ಸಿಂಪಲ್-ಸಾದಾ, ಒಂದು ಬಾರಿ ಮಾಡಿದ ಸಾರು ಮೂರು ಹೊತ್ತಿಗೆ, ಶಾಲೆಗೆ ಕಳುಹಿಸುತ್ತಿದ್ದ ಆಟೋ ಬದಲು ಬಸ್‌ನತ್ತ ಮುಖ, ಮಕ್ಕಳಿಗೆ ತಿಂಡಿ ಕೇಳಿದರೆ ಏಟು ಖಾಯಂ.........ಹೀಗೆ ಹೊಟ್ಟೆಯನ್ನು, ಈ ಬದುಕನ್ನು ಬೆಲೆ ಏರಿಕೆಯ ಬಾಧೆಯ ಬೆಲ್ಟ್‌ನಿಂದ ಬಿಗಿಗೊಳಿಸುತ್ತಿರುವ ಅಸಹನೀಯತೆಯನ್ನು ಬೆಂಗಳೂರಿನಂತೆ ರಾಜ್ಯದ ಹಲವೆಡೆಗಳ ಗೃಹಿಣಿಯರು, ಜನಸಾಮಾನ್ಯರು ಚಡಪಡಿಕೆ ವ್ಯಕ್ತಪಡಿಸುತ್ತಿದ್ದಾರೆ.



ಇನ್ನು ಸರ್ಕಾರದ ರೇಷನ್ ನೀಡಿಕೆಯ ಉದ್ಧಾರದ ಮಾತುಗಳಿಗೆ ಬರವಿಲ್ಲ. ಎಲ್ಲೂ ಸಮರ್ಪಕವಾಗಿ ಆಹಾರಧಾನ್ಯಗಳು, ಪಡಿತರ ಅಂಗಡಿಗಳಲ್ಲಿ ಸಿಗುವುದಿಲ್ಲ. ಆದರೆ ವಿವಿಧ ಬಗೆಯ ರೇಷನ್ ಕಾರ್ಡ್ ಪಡೆಯಲು ಜನರನ್ನು ಕ್ಯೂ ನಿಲ್ಲಿಸಲು ಸರ್ಕಾರ ಮರೆತಿಲ್ಲ.

ಆಹಾರದ ಅಭಾವ

ದೇಶದ ಒಟ್ಟು ಜನಸಂಖ್ಯೆಯ ಶೇ.80 ರಷ್ಟು ಜನರ ದಿನದ ಆದಾಯ ಕೇವಲ ರೂ.20 ಕ್ಕಿಂತಲೂ ಕಡಿಮೆ ಇರುವಾಗ, ಸರಿಯಾದ ಆಹಾರವಿಲ್ಲದೆ ಶೇ.56 ರಷ್ಟು ತಾಯಂದಿರು ರಕ್ತಹೀನತೆಯಿಂದ ಬಳಲುತ್ತಿರುವಾಗ, ಲಕ್ಷಾಂತರ ಹಸುಳೆಗಳು ಅಪೌಷ್ಟಿಕತೆಯಿಂದ ಸಾಯುತ್ತಿರುವಾಗ, ನಾಗರೀಕ ಸರ್ಕಾರಗಳು ಬಡವ ಬಲ್ಲಿದನೆಂದೂ, ಬಡವರನ್ನೇ ಇನ್ನೂ ವಿಂಗಡಿಸಿ ರೇಷನ್ ನೀಡಿಕೆಯಲ್ಲಿಯೂ, ಕಾರ್ಡ್ ನೀಡಿಕೆಯಲ್ಲಿಯೂ ತಾರತಮ್ಯ ಎಸಗುತ್ತಿವೆ. ದೊಡ್ಡ ಬಂಡವಾಳಗಾರರಿಗೆ 4 ಲಕ್ಷ 18,000 ಕೋಟಿಯಷ್ಟು ರೂ.ಗಳ ಸಬ್ಸಿಡಿ ನೀಡುವ ಸರ್ಕಾರ ಜನರ ಆಹಾರಧಾನ್ಯಕ್ಕೆ ವರ್ಷಕ್ಕೆ 1 ಲಕ್ಷ 20 ಸಾವಿರ ಕೋಟಿ ನೀಡಲು ನಿರಾಕರಿಸಿ ಹಸಿವು ಹಾಹಾಕಾರ ಸೃಷ್ಟಿಸಿ ಅಮಾನವೀಯತೆ ತೋರುತ್ತಿದೆ. ಇಂತಹುದೇ ಉದಾರೀಕರಣದ ನೀತಿ ಅನುಸರಿಸಿದ ಜಗತ್ತಿನಲ್ಲಿ ಸುಮಾರು 30ರಷ್ಟು ದೇಶಗಳು ಜನತೆಯ ಆಹಾರದ ವಿಷಯದಲ್ಲಿ ಅತ್ಯಂತ ಧಾರುಣ ಸ್ಥಿತಿ ತಲುಪಿ ಆಹಾರದ ತುರ್ತುಸ್ಥಿತಿ ಘೋಷಿಸಿವೆ. ಇವುಗಳಿಂದ ಸರ್ಕಾರ ಎಚ್ಚೆತ್ತುಕೊಂಡಿಲ್ಲ. ಬದಲಾಗಿ ಅದೇ ವಿನಾಶದ ಹಾದಿ ಹಿಡಿದಿದೆ.

ವಂಚಿಸಿದ ಬಿಜೆಪಿ

ರಾಜ್ಯದಲ್ಲಿ ಅಧಿಕಾರಕ್ಕೆ ಬರುವ ಮೊದಲೇ 2 ರೂ.ಗಳಿಗೆ ಒಂದು ಕೆ.ಜಿ. ಅಕ್ಕಿ ಕೊಡುವುದಾಗಿ ಹೇಳಿದ್ದ ಬಿಜೆಪಿಯ ಯಡಿಯೂರಪ್ಪನವರ ಸರ್ಕಾರ ಅದನ್ನು ಸಂಪೂರ್ಣ ನಿರ್ಲಕ್ಷಿಸಿದೆ. ಕೇಂದ್ರದಂತೆ ಅಂತ್ಯೋದಯ ಕಾರ್ಡ್‌ಗಳಿಗೆ ಕೆ.ಜಿ.ಗೆ ರೂ.3 ರಂತೆ 35 ಕೆ.ಜಿ. ಕೊಡುತ್ತಿದ್ದ ಧಾನ್ಯವನ್ನು ಕಡಿತ ಮಾಡಿ 25 ಕೆ.ಜಿ.ಗೆ ಇಳಿಸುತ್ತಿದೆ. ಅಲ್ಲದೆ ರಾಜ್ಯ ಸರ್ಕಾರ ರೂ.3.00 ರ ದರದಲ್ಲಿ ಒಬ್ಬರಿಗೆ 4 ಕೆ.ಜಿ ರೇಷನ್ ಎಂಬ ಯೂನಿಟ್ ಪದ್ಧತಿ ಜಾರಿಗೆ ತರುತ್ತಿದೆ. ಬಿ.ಪಿ.ಎಲ್ ಕಾರ್ಡುದಾರರ ಸಂಖ್ಯೆ ಕಡಿಮೆ ಮಾಡುತ್ತಿದೆ. ಇದರ ನಡುವೆ ನೆಮ್ಮದಿ ಕೇಂದ್ರಗಳ ಮೂಲಕ ಈಗಲೂ ತಾತ್ಕಾಲಿಕ ರೇಷನ್ ಕಾರ್ಡ್‌ಗಳೇ. ಇಲ್ಲೂ ಕಾರ್ಡ್‌ಗಳು ಭರಪೂರ ಕೊಡಲಾಗಿದೆಯಂತೆ. ಆದರೆ ಅವು ಎಲ್ಲಿವೆ? ಯಾರ ಕೈಲಿವೆ? ಈಗಲೂ ಕಾರ್ಡ್ ವಂಚಿತರು ಸಹಸ್ರಾರು :

ಇಂದಿನ ಗಂಭೀರ ಸ್ಥಿತಿಯಲ್ಲಿ

ಪುಟ ೬ ಕ್ಕೆ

ಬೆಂಗಳೂರು

ಮೂರು ತಿಂಗಳಿಂದ ಸಂಬಳವಿಲ್ಲ ಅತಂತ್ರರಾದ 'ಕೊನೇಗಾ' ಗಾರ್ಮೆಂಟ್ಸ್ ಕಾರ್ಮಿಕರು

"ಕಳೆದ 3 ತಿಂಗಳುಗಳಿಂದ ಸಂಬಳವಿಲ್ಲದೆ ಕಷ್ಟಕ್ಕೀಡಾದ ಕೊನೇಗಾ ಇಂಟರ್‌ನ್ಯಾಷನಲ್ ಪ್ರೈ.ಲಿ., ಗಾರ್ಮೆಂಟ್ಸ್ ಫ್ಯಾಕ್ಟರಿಯ ಕಾರ್ಮಿಕರು ಸಂಬಳವೂ ಇಲ್ಲ, ಕೆಲಸವೂ ಇಲ್ಲದ ಅತಂತ್ರ ಸ್ಥಿತಿಯಲ್ಲಿ ಪ್ರತಿಭಟನೆಯ ಹಾದಿ ತುಳಿದಿದ್ದಾರೆ."

"ಮೂರು ತಿಂಗಳಿಂದ ಸಂಬಳ ಇಲ್ಲ ಸಾರ್. ಮನೆ ಬಾಡಿಗೆ ಕಟ್ಟೋಕಾಗ್ದೆ ಜೀವನ ನಡೆಸೋದೆ ತೀರ ಕಷ್ಟ ಆಗಿ ಒದ್ದಾಡುತ್ತಿದ್ದೀವಿ ಸಾರ್" ಇದು ಈ ಫ್ಯಾಕ್ಟರಿಯಲ್ಲಿ ಕಳೆದ 7 ವರ್ಷಗಳಿಂದ ದುಡಿಯುತ್ತಿರುವ ರವಿ ಎಂಬ ಕಾರ್ಮಿಕನ ಅಳಲು.

ಬೆಂಗಳೂರಿನ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿರುವ ಕೊನೇಗಾ ಇಂಟರ್‌ನ್ಯಾಷನಲ್ ಪ್ರೈ.ಲಿ. ಎಂಬ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ಕಳೆದ 15 ವರ್ಷಗಳಿಂದ ಕೆಲಸ ಮಾಡುತ್ತಿರುವ ಸುಮಾರು 950 ಕ್ಕೂ ಹೆಚ್ಚು (ಬಹುತೇಕ ಮಹಿಳಾ ಕಾರ್ಮಿಕರು) ಕಾರ್ಮಿಕರು ಕಳೆದ 3 ತಿಂಗಳುಗಳಿಂದ ಸಂಬಳವಿಲ್ಲದೆ ಜೀವನ ನಡೆಸುವುದು ದುಸ್ತರವಾದಾಗ ಅನಿವಾರ್ಯವಾಗಿ ಸಿ.ಐ.ಟಿ.ಯು. ನೇತೃತ್ವದಲ್ಲಿ ಪ್ರತಿಭಟನೆಗಿಳಿದಿದ್ದಾರೆ. ಫ್ಯಾಕ್ಟರಿಯ ಮಾಲೀಕ ಮನೋಜ್ ಗೊಯೆಂಕಾ ಎಂಬಾತ ಇದ್ದಕ್ಕಿದ್ದಂತೆ ರಾತ್ರೋರಾತ್ರಿ ಫ್ಯಾಕ್ಟರಿ lockout ಮಾಡಿ ಪರಾರಿಯಾಗಿದ್ದಾನೆ.

ಕಾರಣವೇನು.....?

ಕಳೆದ (ಆಗಸ್ಟ್, ಸೆಪ್ಟೆಂಬರ್ ಹಾಗೂ ಅಕ್ಟೋಬರ್) 3 ತಿಂಗಳುಗಳು ಕಷ್ಟಪಟ್ಟು ದುಡಿದ ಕಾರ್ಮಿಕರಿಗೆ ಸಂಬಳ ನೀಡಿಲ್ಲ. ಅದೂ ಕೊಡುವ ಸಂಬಳವಾದರೂ ಎಷ್ಟು? ಗರಿಷ್ಠ ರೂ. 3,500. 7 ರಿಂದ 8 ವರ್ಷಗಳಿಂದ ಕೆಲಸ ಮಾಡುತ್ತಿದ್ದವರಿಗೂ ಗರಿಷ್ಠ 3500 ರೂ ಸಂಬಳ. ಬೋನಸ್ ಅಂತು ಇಲ್ಲವೇ ಇಲ್ಲ. ಕಳೆದ ಮೂರು ವರ್ಷಗಳಿಂದ ಪಿ.ಎಫ್. ಹಣವನ್ನೂ ಕಟ್ಟಿಲ್ಲ. ಆದರೆ ಕಾರ್ಮಿಕರಿಂದ ಮಾತ್ರ ಹಣ ಮುರಿದುಕೊಳ್ಳಲಾಗಿದೆ. ಇದರ ಜತೆಗೆ ದಿನಾಲು ಒ.ಸಿ. ಕೆಲಸ ಬೇರೆ ಮಾಡಬೇಕು. ಪ್ರೊಡಕ್ಷನ್ ಕಡಿಮೆ ಎನ್ನುವ ಸುಲಭವಾದ ಕಾರಣ. ಬೈಗುಳ, ದೌರ್ಜನ್ಯ, ಮಾಮೂಲಾಗಿ ಇದ್ದದ್ದೆ.

ಪಿ.ಎಫ್. ಹಣ ಕಟ್ಟದಿರುವುದರ ಸಂಬಂಧ ಪಿ.ಎಫ್ ಕಛೇರಿಗೆ ದೂರು ನೀಡಲಾಗಿದ್ದರೂ ಕೂಡ ಯಾವುದೇ ಪ್ರಯೋಜನವಾಗಿಲ್ಲ. ಕಾನೂನು ರೀತ್ಯ ಕ್ರಮ ಜರುಗಿಸುವ ಬೊಗಳೆ ಭರವಸೆಗಳು. ಕ್ರಮ ಮಾತ್ರ ದೂರದ ಮಾತು.

ಇದರಿಂದ ಬೇಸತ್ತ ಕಾರ್ಮಿಕರು ಪ್ರತಿಭಟನೆಗೆ ಇಳಿದಿದ್ದಾರೆ. ಸದ್ಯ ಕಾರ್ಮಿಕರು ಕೇಳುತ್ತಿರುವುದು 3 ತಿಂಗಳ ಬಾಕಿ ಸಂಬಳ ನೀಡಬೇಕು ಎಂಬ ಒಂದೇ ಬೇಡಿಕೆ. ಆದರೆ ಮಾಲಿಕ ಏಕಾಏಕಿ ಯಾವುದೇ ಮುನ್ಸೂಚನೆ ನೀಡದೆ ರಾತ್ರೋರಾತ್ರಿ ಲಾಕೌಟ್ ಮಾಡಿ ಪರಾರಿಯಾಗಿದ್ದಾನೆ.

ತೀವ್ರಗೊಂಡ ಪ್ರತಿಭಟನೆ

ಮಾಲೀಕನ ಈ ವಂಚನೆಯಿಂದ ರೋಸಿಹೋದ ಕಾರ್ಮಿಕರು ಪ್ರತಿಭಟನೆಯನ್ನು ತೀವ್ರಗೊಳಿಸಿದ್ದಾರೆ. ಅಕ್ಟೋಬರ್ 7 ರಂದು ಫ್ಯಾಕ್ಟರಿ ಎದುರು ಪ್ರತಿಭಟನೆ ಆರಂಭಿಸಿದ ಕಾರ್ಮಿಕರು ಪ್ರತಿಭಟನೆಯನ್ನು ಇಂದಿಗೂ ಮುಂದುವರಿಸಿದ್ದಾರೆ. ಮಾಲೀಕ ಬೇಡಿಕೆ ಕುರಿತು ಯಾವುದೇ ಮಾತುಕತೆ ಸಿದ್ಧವಿಲ್ಲ. ನಂತರ ಒಂದು ದಿನ ಇದ್ದಕ್ಕಿದ್ದಂತೆ ಫ್ಯಾಕ್ಟರಿ ಲಾಕೌಟ್. ಕಾರ್ಮಿಕರು ಕಾರ್ಮಿಕ ಆಯುಕ್ತರ ಕಛೇರಿ ಎದುರು ಅಹೋರಾತ್ರಿ ಧರಣಿ ನಡೆಸಿದ್ದಾರೆ. ಆದರೆ ಅಧಿಕಾರಿಗಳು ಯಾವುದೇ ಪರಿಹಾರಕ್ಕೆ ಮುಂದಾಗಿಲ್ಲ ಮಾತ್ರವಲ್ಲ ಕಾರ್ಮಿಕರ ಈ ಹೋರಾಟವನ್ನು ಕಾನೂನುಬಾಹಿರ (Illegal Strike) ವೆಂದು ನೋಟಿಸ್ ನೀಡಿದೆ. ಇಲ್ಲಿ ಅಧಿಕಾರಿಗಳು ಮಾಲೀಕರೊಂದಿಗೆ ಶಾಮೀಲಾಗಿದ್ದಾರೆಂದು ಪ್ರತಿಭಟನಾಕಾರರು ಹೇಳುತ್ತಿರುವುದು ನಿಜವೆಂದು ಕಾಣುತ್ತಿದೆ. ಪ್ರತಿಭಟನೆ ತೀವ್ರವಾದ ಹಿನ್ನೆಲೆಯಲ್ಲಿ ಬಿಲ್ಡಿಂಗ್ ಮಾಲೀಕ ಹಾಗೂ ಮಲ್ಲೇಶ್ವರಂ ಎ.ಸಿ.ಪಿ ಅಜ್ಜಪ್ಪ ಅವರ ಮೂಲಕ ಕಾರ್ಮಿಕರು ರಾಜಿನಾಮೆ ಪತ್ರ ಕೊಡುವುದಾದರೆ ಎರಡೂವರೆ ತಿಂಗಳ ಸಂಬಳ ಕೊಡುವುದಾಗಿ ರಾಜಿಗೆ ಮುಂದಾಗಿದ್ದಾರೆ. ಆದರೆ ಕಾರ್ಮಿಕರು ಇದನ್ನು ತಿರಸ್ಕರಿಸಿದ್ದಾರೆ. ಫ್ಯಾಕ್ಟರಿಯ ಪುನರಾರಂಭಿಸಬೇಕು. 3 ತಿಂಗಳ ಸಂಬಳ ನೀಡಬ ಎಂಬ ಬೇಡಿಕೆಯಿಂದ ಹಿಂದೆ ಸರಿಯಲು ಸಾಧ್ಯ ಎಂದು ದೃಢ ತೀರ್ಮಾನ ಮಾಡಿದ್ದಾರೆ. ಕಾರ್ಮಿ ಪಿ.ಎಫ್, ಇ.ಎಸ್.ಐ. ಹಣವನ್ನು ನುಂಗಿ ನ ಕುಡಿದದ್ದಲ್ಲದೆ ಕಾರ್ಮಿಕರಿಗೆ ನ್ಯಾಯಯುತವ ಕೊಡಬೇಕಿರುವ ಗ್ರಾಚ್ಯುಯಿಟಿ ರಜಾದಿನ ಸಂಬ ಬೋನಸ್ ಇತರೆ ಸವಲತ್ತುಗಳನ್ನು ನೀಡದೆ ತ ಇದನ್ನು ನುಂಗುವ ದುರ್ಬುದ್ಧಿಯಲ್ಲಿದ್ದಾನೆ. ಕಾಮಿ ಆಯುಕ್ತರ ಕಛೇರಿಯ ಅಧಿಕಾರಿಗಳಿಂದ ಉದಾಸಿ ಪ್ರತಿಕ್ರಿಯೆಯಿಂದ ಆಕ್ರೋಶಗೊಂಡ ಕಾರ್ಮಿ ಕಾರ್ಮಿಕ ಸಚಿವ ಬಚ್ಚೇಗೌಡರ ನಿವಾಸದ ಎದು ಧರಣಿ ನಡೆಸಲಾಗಿ, ಇನ್ನು 2 ರಿಂದ 3 ದಿನಗ ಅಧಿಕಾರಿಗಳನ್ನು ಕರೆಸಿ ಮಾತನಾಡುತ್ತೇನ ಭರವಸೆ ನೀಡಿದರಾದರೂ ಸಮ ಪರಿಹಾರ ಹುಡುಕುವ ಪ್ರಯತ್ನ ಮಾಡದಿ ಸಚಿವರ ಕ್ರಮದಿಂದ ಪ್ರತಿಭಟನೆ ಸ ಕಾರ್ಮಿಕರು ತೀವ್ರವಾಗಿ ನೊಂದಿದ ಜೊತೆಗೆ ಸಮಸ್ಯೆ ಬಗೆಹರಿಯುವ ಹೋರಾಟದಿಂದ ಹಿಂದೆ ಸರಿಯುವು ಎಂದು ದೃಢ ನಿಶ್ಚಯ ಮಾಡಿದ್ದಾರೆ. ಸಂದರ್ಭದಲ್ಲಿ ಜನವಾದಿ ಮಹಿ ಸಂಘಟನೆಯ ಅಖಿಲ ಭಾರತ ಅಧ್ಯಕ್ಷ ಆದ ಸುಭಾಷಿಣಿ ಅಲಿಯವರು ಕಾಮಿ

ಈ ಹೋರಾಟದಲ್ಲಿ ಪಾಲ್ಗೊ ಸೌಹಾರ್ದ ಬೆಂಬಲ ವ್ಯಕ್ತಪಡಿಸಿದ್ದಾರೆ. ಹೋರಾ ನೇತೃತ್ವವನ್ನು ಸಿಐಟಿಯು ಜಿಲ್ಲಾಧ ಹೆಚ್.ಎನ್.ಗೋಪಾಲಗೌಡ, ಕಾರ್ಯದ ಕೆ.ಎನ್. ಉಮೇಶ್, ಮುಖಂಡರಾದ ರಾಮ ಮುಂತಾದವರು ನೇತೃತರವ ವಹಿಸಿದ್ದಾರೆ. ಸಂಘಟನೆಗಳು ಗಾರ್ಮೆಂಟ್ಸ್ ಕಾರ್ಮಿಕರ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿವೆ.



ಕಾರ್ಮಿಕ ಆಯುಕ್ತರ ಕಛೇರಿಯಲ್ಲಿ ಕಾರ್ಮಿಕರ ಹಗಲು ರಾತ್ರಿ ಹೋರಾಟ

■ ಲಿಂಗರಾ

ಅಳಬ್ಯಾಡ್ ಕಣೋ ಸುಮ್ಕಿರೋ.....

ಕ್ಯಾತೆ

ತ್ರೀ

ಸನ್ಮಾನ್ಯ ಯಡ್ಯೂರಪ್ಪನವರು ಈಗ ಬರೀ ಮುಖ್ಯಮಂತ್ರಿಯಾಗಿ ಉಳಿದಿಲ್ಲ. ಅವರೀಗ ಅಮುಖ್ಯ ಮಂತ್ರಿ ಯಾನೆ ಮುಖ್ಯವಲ್ಲದ ಮಂತ್ರಿ! ಮುಖ್ಯ ಮಂತ್ರಿ ಸ್ಥಾನವನ್ನು ಇಷ್ಟು ಅಮುಖ್ಯ ಮಾಡಿದ ಯಡ್ಯೂರಪ್ಪನವರ ಕೀರ್ತಿ ಇತಿಹಾಸದಲ್ಲಿ ದಾಖಲೆಯಾಗಿ ಉಳಿಯಲಿದೆ. ರೆಡ್ಡಿಗಳ, ಭಿನ್ನಮತೀಯರ ಶರತ್ತುಗಳನ್ನು ಈಡೇರಿಸುವ ಖಾತೆಯನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ.

ನಗುನಗುತ್ತಾ ಇರ್ತೀನಿ ಕಣ್ರಪಾ ನನ್ನನ್ನ ತೆಗೀಬೇಡಿ ಅಂತ ಗೋಗರಿಯುತ್ತಿದ್ದವರು ಗಳ ಗಳ ಅಳುತ್ತಾ ನಗೆಪಾಟಲಿಗೆ ಈಡಾಗಿದ್ದಾರೆ. ರೈತರು ಆತ್ಮಹತ್ಯೆ ಮಾಡಿಕೊಂಡಾಗ ಅಳಲಿಲ್ಲ. ರೈತರಿಗೆ ಗುಂಡು ಹೊಡೆದಾಗ ಅಳಲಿಲ್ಲ. ಚರ್ಚುಗಳು ಹಾಗೂ ಹೆಣ್ಣುಮಕ್ಕಳ ಮೇಲೆ ಧಾಳಿಯಾದಾಗ ಅಳಲಿಲ್ಲ. ಮಹಾ ಮಳೆ ಬಂದು ಊರೂರು ಕೊಚ್ಚಿಕೊಂಡು ಹೋದಾಗಲೂ ಒಂದು ಹನಿ ಕಣ್ಣೀರು ಬೀಳಲಿಲ್ಲ. ಇಂಥ ಧೈರ್ಯಶಾಲಿ ಪುರುಷ ಅತ್ತಿದ್ದಾದರೂ ಯಾಕೆ? ಹಿಂದೊಮ್ಮೆ ಕುರ್ಚಿ ಸಿಗದೆ ಕೈತಪ್ಪಿ ಹೋದಾಗ ಅತ್ತೂ ಅತ್ತೂ ಕುರ್ಚಿ ಹಿಡಿದರು. ಈಗ ಕುರ್ಚಿ ಕೈ ತಪ್ಪಿ ಹೋಗುವ ಭಯದಿಂದ ಅಳುತ್ತಿದ್ದಾರೆ.

ಹಿಂದೆ ವಿಜ್ಞಾನಿಗಳು ಒಂದು ಕೋತಿ ಹಾಗೂ ಕೋತಿ ಮರಿಯ ಮೇಲೆ ಒಂದು ಪ್ರಯೋಗ ಮಾಡಿದ್ದರಂತೆ. ಕೋತಿಯನ್ನೂ ಅದರ ಮರಿಯನ್ನೂ ಒಂದು ದೊಡ್ಡ ಗಾಜಿನ ಜಾಡಿಯಲ್ಲಿ ಹಾಕಿ ಸ್ವಲ್ಪ ಸ್ವಲ್ಪವೇ ನೀರು ಹಾಕುತ್ತಿದ್ದರು. ನೀರಿನ ಮಟ್ಟ ಮೇಲೇರಿದಂತೆಲ್ಲ ಕೋತಿ ಮರಿಯನ್ನು ಮೇಲಕ್ಕೆತ್ತಿಕೊಳ್ಳುತ್ತಿತ್ತು. ಹೆಗಲಮೇಲೆ ಕೂರಿಸಿಕೊಂಡಿತು. ಹೆಗಲವರೆಗೂ ನೀರು ಬಂದಾಗ ತಲೆಯಮೇಲೆ ಕೂಡಿಸಿಕೊಂಡಿತು. ನೀರಿನ ಮಟ್ಟ ಇನ್ನೂ ಏರಿದಾಗ ಕಡೆಗೆ ಕೋತಿ ಏನುಮಾಡಿತಂತೆ ಗೊತ್ತೇ? ಮರಿಯನ್ನು ಕೆಳಗೆ ಹಾಕಿ ಅದರ ಮೇಲೆ ತಾನು ನಿಂತು ಪ್ರಾಣ ಉಳಿಸಿಕೊಳ್ಳುವ ಪ್ರಯತ್ನ ಮಾಡಿತಂತೆ! ಈ ಪ್ರಯೋಗಕ್ಕೂ ಯಡಿಯೂರಪ್ಪನವರು ತಮ್ಮ ಅತಿ ವಿಶ್ವಾಸದ ಮಂತ್ರಿಗಳನ್ನು ಅಧಿಕಾರಿಗಳನ್ನೂ ಕೈ ಬಿಟ್ಟು ಅಧಿಕಾರ ಉಳಿಸಿಕೊಂಡಿದ್ದಕ್ಕೂ ಯಾವುದೇ ರೀತಿಯ ಸಂಬಂಧವಿಲ್ಲ ಎಂದು ವಿಜ್ಞಾನಿಗಳು ಸ್ಪಷ್ಟ ಪಡಿಸಿದ ಬಗ್ಗೆ ವರದಿಯಾಗಿಲ್ಲ!

ಬಿಜೇಪಿ ಭಿನ್ನಮತದ ಸ್ಟೋರಿ ಇಟ್ಟುಕೊಂಡು ಒಳ್ಳೆ ಸಿನಿಮಾ ಮಾಡಬಹುದು ಅಂತ ನಿರ್ಮಾಪಕರುಗಳು ಯೋಚಿಸುತ್ತಿದ್ದಾರೆ ಎಂದು ಗೊತ್ತಾಗಿದ್ದೇ ತಡ ನಮ್ಮ ಕವಿ ಪುಂಗವ ರೀಮಿಕ್ಸ್ ಹಾಡುಗಳನ್ನು ಆಗಲೇ ರೆಡಿಮಾಡಿಟ್ಟು ಕೊಳ್ಳುತ್ತಿದ್ದಾನಂತೆ. ಕೆಲವು ಸ್ಯಾಂಪಲ್‌ಗಳು ಇಲ್ಲಿವೆ:

• • •

ನಗುವುದೋ ಅಳುವುದೋ ನೀವೇ ಹೇಳಿ,
ಇರುವುದೋ, ಮೆರೆವುದೋ ಈ ಕುರ್ಚಿಯಲಿ,
ರೆಡ್ಡಿಗಳಾ ನಡುವೆ ನಾನು ಹೇಗೆ ಬಾಳಲಿ,
ಈಗ ಏನು ಮಾಡಲಿ, ಈಗ ಏನು ಮಾಡ

• • •

ಕಣ್ಣೀರ ಧಾರೆ ಇದೇಕೆ? ಇದೇ..ಕೆ?
ಅಧಿಕಾರ ಜಾರುತಲಿ ಈ ಶೋಕವೇಕೆ?

• • •

ರೆಡ್ಡಿಯಾಟವೇನು ಬಲ್ಲವರು ಯಾರು?
ಭಿನ್ನಮತೀಯರನ್ನು ಹಿಡಿಯುವವರ್ಯಾರು?
ಹೋದರೆ ಹೋಗಲೆಂದು ಬಿಡುವುದಕೆ ಸಾಧ್ಯ
ನಿರಾಶೆ ವಿಷಾದ ಇದೇಕೆ ಇದೇ..ಕೆ?
ಕಣ್ಣೀರ ಧಾರೆ ಇದೇಕೆ? ಇದೇ..ಕೆ?


• • •

ಅಳಬ್ಯಾಡ್ ಕಣೋ ಸುಮ್ಕಿರೋ..,
ನಮ್ಮ ಯಡ್ಯೂರಪ್ಪ,
ಅಳಬ್ಯಾಡ್ ಕಣೋ ಸುಮ್ಕಿರೋ,

• • •

ಶೋಭಕ್ಕ ಹೋದರೇನು,
ನಿನ್ಕುರ್ಚಿ ಇಲ್ಲವೇನು
ಸುಮ್ಕಿರು ಮತ್ತೆ, ನೀ
ಸುಮ್ಕಿರು ಮತ್ತೆ....,
ಹೋ ... ಹೋಹೋ....ಹೋ....
ಅಳಬ್ಯಾಡ್ ಕಣೋ ಸುಮ್ಕಿರೋ..,

• • •



ಇತ್ತೀಚಿನ ಕರ್ನಾಟಕ ರಾಜ್ಯ ಬಿಜೆಪಿಯೊಳಗಿನ ಭಿನ್ನಮತ, ಬಿಕ್ಕಟ್ಟು ರಾಷ್ಟ್ರದ ರಾಜಕೀಯದ ಗಮನ ಸೆಳೆದಿದೆ. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ಅವರು ಈ ನೀತಿಗೆಟ್ಟ ರಾಜಕಾರಣದ ಕುರಿತ ತಮ್ಮ ಒಳನೋಟವನ್ನು ಇಲ್ಲಿ ಬಿಡಿಸಿಟ್ಟಿದ್ದಾರೆ.

ಕರ್ನಾಟಕದಲ್ಲಿ ಬಿಜೆಪಿ

ದರೋಡೆಕೋರ ಬಂಡವಾಳಶಾಹಿ ಮತ್ತು ರಾಜಕೀಯ ಅನೈತಿಕ ಬೆಸುಗೆ

ಪ್ರಕಾಶ್ ಕಾರಟ್

ರ್ನಾಟಕದ ಬಿಜೆಪಿ ಸರಕಾರದಲ್ಲಿ ಇತ್ತೀಚಿಗೆ ಸುಗಿಲೆದ್ದ ಬಿಕ್ಕಟ್ಟು ಬಿ.ಎಸ್.ಯಡ್ಯೂರಪ್ಪ ಮುಖ್ಯಮಂತ್ರಿಯಾಗಿ ಮುಂದುವರಿಯುವರೇ ಅಥವಾ ಡುಕೋರರು ಮೇಲುಗೈ ಸಾಧಿಸುವರೇ ಎಂಬ ಪ್ರಮುಖ ಪ್ರಶ್ನೆಯನ್ನು ಹುಟ್ಟುಹಾಕಿತ್ತು. ಅಥವಾ ರಾಜಿ ಸೂತ್ರವೊಂದನ್ನು ರೂಪಿಸಲು ಬಿಜೆಪಿಯ ಕೇಂದ್ರ ನಾಯಕತ್ವ ಸಫಲವಾಗುವುದೇ ಎಂಬ ವಿಚಾರವೂ ಪ್ರಮುಖವಾಗಿ ಚರ್ಚಿತವಾಗಿತ್ತು.

ದೊಡ್ಡ ವ್ಯಾಪಾರ, ರಾಜಕೀಯದ ನಂಟು

ಆದರೆ ವಾಸ್ತವವಾಗಿ ಈ ಬಿಕ್ಕಟ್ಟಿನ ಮಹತ್ವ ಬೇರೆಲ್ಲೋ ಅಡಗಿದೆ. ಕರ್ನಾಟಕದಲ್ಲಿನ ಇತ್ತೀಚಿನ ವಿದ್ಯಮಾನಗಳು, ಭಾರತೀಯ ಜನತಾ ಪಕ್ಷ ರಾಜ್ಯದಲ್ಲಿ ಹುಟ್ಟುಹಾಕಿದ ರಾಜಕೀಯ ಮತ್ತು ಬೃಹತ್ ವ್ಯಾಪಾರೋದ್ಯಮದ ಅಪವಿತ್ರ ನಂಟನ್ನು ಅನಾವರಣಗೊಳಿಸಿದವು. ರೆಡ್ಡಿ ಸೋದರರ ಮಾಲಿಕತ್ವದ ಬಳ್ಳಾರಿಯ ಗಣಿಧಣಿಗಳ ಕೂಟವನ್ನು ಬಿಜೆಪಿ ತನ್ನ ಸರಕಾರದ ತೆಕ್ಕೆಗೆ ಸೇರಿಸಿಕೊಳ್ಳುವ ಕ ಈ ನಂಟು ಹೊಸ ಆಯಾಮವನ್ನು ದುಕೊಂಡಿತ್ತು. ಅತ್ಯಂತ ಲಾಭಕೋರ ವ್ಯಾಪಾರಿಕೂಟದ ಹೆಗಲೇರಿ ಕುಳಿತುಕೊಂಡು ಅವರನ್ನೂ ಸರಕಾರದ ಅಂಗವನ್ನಾಗಿ ಮಾಡಿಕೊಂಡ ನಂತರ, ಬಿಜೆಪಿ ಇದೀಗ ಸರಕಾರದ ನೀತಿಗಳ ಮೇಲೆ ಹಿಡಿತ ಸಾಧಿಸುವ ಹಾಗೂ ಪಕ್ಷವನ್ನೇ ಬ್ಲಾಕ್‌ಮೇಲ್ ಮಾಡುವ ಗಣಿಧಣಿಗಳ ಮಹತ್ವಾಕಾಂಕ್ಷೆಯ ತಂತ್ರಗಾರಿಕೆಯನ್ನು ಎದುರಿಸುವಂತಾಗಿದೆ.

ತನ್ನ ಈಗಿನ ಸಂದಿಗ್ಧ ಪರಿಸ್ಥಿತಿಗೆ ಬಿಜೆಪಿ ತನ್ನನ್ನೇ ತಾನು ಹಳಿದುಕೊಳ್ಳಬೇಕಾಗಿದೆ: 2008 ರ ವಿಧಾನಸಭೆ ಚುನಾವಣೆಗಳಲ್ಲಿ ಬಿಜೆಪಿ ತಿದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತಾದರೂ ಅದಕ್ಕೆ ಮತ ಲಭ್ಯವಾಗಿರಲಿಲ್ಲ. ಬಿಜೆಪಿಯ ನಾವಣೆ ಯಶಸ್ಸಿಗೆ ಬಳ್ಳಾರಿಯ ಗಣಿ ಮಾಲಿಕರ ಮಧ್ಯಪ್ರವೇಶವೂ ಭಾಗಶಃ ವಾಗಿತ್ತು. ಯಾಕೆಂದರೆ ನಾಲ್ಕು ಲ್ಲೆಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಲ್ಲುವಂತೆ ಅವರು ನೋಡಿಕೊಂಡಿದ್ದರು. ನಂತರ ಐದು ಪಕ್ಷೇತರ ಶಾಸಕರು ಸರಕಾರಕ್ಕೆ ಬೆಂಬಲ ನೀಡುವುದರಲ್ಲಿಯೂ ಅವರು ಪಾತ್ರ ವಹಿಸಿದರು. ಈ ಪಕ್ಷೇತರ ಶಾಸಕರಿಗೆ ಭಾರೀ ಇನಾಮು ನೀಡಲಾಯಿತು. ಬಳ್ಳಾರಿ ಸಿಂಡಿಕೇಟ್‌ನ ಮೂವರು ಸಚಿವರಾದರು. ಅವರಲ್ಲಿ ಬ್ಬರು ರೆಡ್ಡಿ ಸೋದರರು (ಜಿ.ಕರುಣಾಕರರೆಡ್ಡಿ ಮತ್ತು ಜನಾರ್ಧನ ರೆಡ್ಡಿ) ಹಾಗೂ ಒಬ್ಬರು ಅವರ ಕಟವರ್ತಿ (ಶ್ರೀರಾಮುಲು) ಕಂದಾಯ, ವಾಸೋದ್ಯಮ ಮತ್ತು ಆರೋಗ್ಯ ಖಾತೆಗಳನ್ನು ವರಿಗೆ ನೀಡಲಾಯಿತು. ಬಿಜೆಪಿ ಅಷ್ಟಕ್ಕೇ ಮ್ಮನಾಗಲಿಲ್ಲ, ರೆಡ್ಡಿ ಸೋದರರು ಹರಿಸಿದ ಹಣದ ಹೊಳೆಯ ಮೂಲಕ ವಿಧಾನಸಭೆಯಲ್ಲಿನ ತನ್ನ ಅತಂತ್ರ ಬಹುಮತವನ್ನು ಇನ್ನಷ್ಟು ಗಟ್ಟಿಗೊಳಿಸಲಿಕ್ಕಾಗಿ ಅದು 'ಪರೇಷನ್ ಕಮಲ' ಎಂಬ ಅನೈತಿಕ ದುರ್ನಾಚರಣೆಗೆ ಮುಂದಾಯಿತು. ಈ ಯೋಜನೆ ಕಾರ ಜೆಡಿಎಸ್ ಮತ್ತು ಕಾಂಗ್ರೆಸ್‌ನ ಹಲವು ಶಾಸಕರಿಂದ ರಾಜಿನಾಮೆ ನೀಡಿಸಿ ಪಕ್ಷಾಂತರ ಮಾಡಿಸಿತು. ಈ ಮೂಲಕ ವಿಧಾನಸಭೆಯಲ್ಲಿ ಸ್ಪಷ್ಟ ಬಹುಮತವನ್ನು ಸಾಧಿಸಿತು.

ರೆಡ್ಡಿ ಸೋದರರ ಗಣಿ ವ್ಯಾಪಾರದ ಪ್ರಗತಿ ಸ್ನೇಹಿ ಬಂಡವಾಳಶಾಹಿ (Crony Capitalism) ಮತ್ತು ರಾಜಕಾರಣಿಗಳು ಹಾಗೂ 'ವಿನಮ್ರ' ಅಧಿಕಾರಶಾಹಿ ನಡುವಿನ ನಿಕಟ ಮೈತ್ರಿಯ ಕತೆಯಾಗಿದೆ. ಚೀನಾದಲ್ಲಿ ಕಬ್ಬಿಣದ ಅದಿರಿಗೆ ಭಾರೀ ಬೇಡಿಕೆ ಬಂದ



ಹಿನ್ನೆಲೆಯಲ್ಲಿ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಬ್ಬಿಣದ ಅದಿರಿನ ಬೆಲೆ ಗಗನಕ್ಕೇರಿತು. ಟನ್ ಒಂದರ ಬೆಲೆ 200 ರೂಪಾಯಿಗಳಿಂದ 2000 ರೂಪಾಯಿಗೆ ಏರಿತು. ತಮ್ಮ ಪರವಾಗಿ ಕಾನೂನುಗಳನ್ನು ಪರಿವರ್ತಿಸುವ ಹೊಸ ನಿಯಮಾವಳಿಗಳನ್ನು ರೂಪಿಸುವ ಮೂಲಕ ಹಾಗೂ ಅರಣ್ಯ ಮತ್ತು ಪರಿಸರ ಕಾನೂನುಗಳನ್ನು ಎಗ್ಗಿಲ್ಲದೆ ಉಲ್ಲಂಘಿಸುವ ಮೂಲಕ ರೆಡ್ಡಿ ಸೋದರರು ಕಬ್ಬಿಣದ ಅದಿರು ರಫ್ತಿನಿಂದ ಬರುವ ವಾರ್ಷಿಕ 4000 ಕೋಟಿ ರೂಪಾಯಿಗಳಷ್ಟು ಬೃಹತ್ ಲಾಭದ ಪ್ರಮುಖ ಫಲಾನುಭವಿಗಳಾದರು.

ಈ ಲೂಟಿಯಲ್ಲಿ ಸರಕಾರವೇ ಶಾಮೀಲಾಗಿದ್ದರಿಂದ, ಟನ್ ಒಂದಕ್ಕೆ 2000 ರೂ.ನಂತೆ ಮಾರಾಟವಾದರೂ ಪ್ರತಿ ಟನ್‌ಗೆ ಸರಕಾರ ಪಡೆಯುವ ರಾಯಧನ (ರಾಯಲ್ಟಿ) ಕೇವಲ 27 ರೂಪಾಯಿ. 2005, 2006 ಸಾಲಿನಲ್ಲೇ 35 ಗಣಿ ಮಾಲಿಕರು 3600 ಕೋಟಿ ರೂಪಾಯಿ ಲಾಭ ಗಳಿಸಿದ್ದಾರೆ.

ಈ ರೀತಿ ಅಕ್ರಮವಾಗಿ ಗಳಿಸಿದ ಸಂಪತ್ತನ್ನು ರೆಡ್ಡಿ ಸೋದರರು ಬಿಜೆಪಿಗಾಗಿ ಪರಿಣಾಮಕಾರಿಯಾಗಿ ಬಳಸಿಕೊಂಡರು. ತಮ್ಮ ಸಂಪತ್ತು ಮತ್ತು ಪ್ರಭಾವವನ್ನು ದುರುಪಯೋಗ ಮಾಡಿಕೊಳ್ಳಲು ರೆಡ್ಡಿ ಸೋದರರಿಗೆ ಒಂದಿಷ್ಟೂ ನಾಚಿಕೆಯಿಲ್ಲ. ಕಳೆದ ವರ್ಷ ವಿಧಾನಸಭೆಯಲ್ಲಿ ನಡೆದ ಬಿಸಿ ವಾಗ್ವಾದದ ಸಂದರ್ಭದಲ್ಲಿ ಅವರಲ್ಲೊಬ್ಬರು ಹೀಗೆಂದಿದ್ದರು. "ನಮ್ಮಲ್ಲಿ 100 ಕೋಟಿ ರೂಪಾಯಿ ಆಸ್ತಿಪಾಸ್ತಿಯಿದೆ ಎಂದು ಜನರು ಆಡಿಕೊಳ್ಳುತ್ತಿದ್ದಾರೆ. ಆ ಮಾತನ್ನು ತಿದ್ದಲು ನಾನು ಬಯಸುತ್ತೇನೆ... ನಾವು 1000 ಕೋಟಿ ರೂಪಾಯಿ ಆಸ್ತಿಯ ಒಡೆಯರು." ಅನೇಕ ಅಧಿಕಾರಿಗಳು ಮತ್ತು ಪೊಲೀಸ್ ಅಧಿಕಾರಿಗಳನ್ನು ಕಾನೂನು ವಿರೋಧಿ ಕೃತ್ಯಗಳಿಗೆ ಪ್ರೇರೇಪಿಸುವ ಮೂಲಕ ತಮ್ಮ ವ್ಯಾಪಾರ ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡ ಗಣಿಧಣಿಗಳು ಕರ್ನಾಟಕದಲ್ಲಿ ಬಿಜೆಪಿ, ಆರ್‌ಎಸ್‌ಎಸ್ ಕೂಟದ ಕೋಮುವಾದಿ ರಾಜಕೀಯ ತಳವೂರಲು ದೊಡ್ಡ ಕೊಡುಗೆ ನೀಡಿದ್ದಾರೆ.

ಖಾಸಗಿ ಹಿತಕ್ಕಾಗಿ ಸಾರ್ವಜನಿಕ ನೀತಿಯ ಅಪಹರಣ

ತಾನೇ ಬೆಳೆಸಿ ಸರಕಾರದಲ್ಲಿ ಸೇರಿಸಿಕೊಂಡ ದುರಾಸೆಯ ಸುಲಿಗೆಕೋರ ವ್ಯಾಪಾರಿಕೂಟದಿಂದ ಸ್ವತಃ ತಾನೇ ನಾಶವಾಗುವ ಅಪಾಯಕ್ಕೆ ಕರ್ನಾಟಕ ಬಿಜೆಪಿ ಸಿಲುಕಿದೆ. ಈಗಾಗಲೇ, ಬಿಜೆಪಿ ಸರಕಾರದ ಒಂದೂವರೆ ವರ್ಷದ ಆಡಳಿತ ಅವಧಿಯಲ್ಲಿ ರೆಡ್ಡಿ ಸೋದರರು ಭಾರೀ ವಿನಾಯಿತಿಗಳನ್ನು ಪಡೆದಿದ್ದಾರೆ. ಮಾತ್ರವಲ್ಲದೆ ಅವರ ವಿರುದ್ಧದ ಕ್ರಿಮಿನಲ್ ಮೊಕದ್ದಮೆಗಳನ್ನು ವಾಪಸ್ ಪಡೆಯಲಾಗಿದೆ. ಅವರೀಗ ರಾಜ್ಯ ಬಿಜೆಪಿಯಲ್ಲಿನ ಒಡಕಿನಿಂದ ಇನ್ನೂ ಭಾರೀ ಲಾಭ ಪಡೆಯುವ ಹವಣಿಕೆಯಲ್ಲಿದ್ದಾರೆ. ಗಣಿಧಣಿಗಳ ಜತೆ ಸಮಾಲೋಚಿಸಿಯೇ ಬಳ್ಳಾರಿ ಜಿಲ್ಲೆಗೆ ಅಧಿಕಾರಿಗಳನ್ನು ನೇಮಿಸಬೇಕೆಂಬುದು ರಾಜಿಸೂತ್ರಕ್ಕೆ ಅವರ ಷರತ್ತುಗಳಲ್ಲಿ ಒಂದಾಗಿದೆ.

ವ್ಯಾಪಾರ ಮತ್ತು ರಾಜಕೀಯವನ್ನು ಬಿಜೆಪಿ ಮಿಶ್ರ ಮಾಡುತ್ತಿರುವುದು ದೇಶದ ರಾಜಕೀಯ ವ್ಯವಸ್ಥೆಯನ್ನು ಈಗ ಒಟ್ಟಾರೆಯಾಗಿ ವ್ಯಾಪಿಸುತ್ತಿರುವ ವ್ಯಾಧಿಯ ಒಂದು ಭಾಗವಾಗಿದೆ. ಆಳುವ ವರ್ಗದ ರಾಜಕಾರಣಿಗಳು ದರೋಡೆಕೋರ ಬಂಡವಾಳಶಾಹಿ ಮೂಲಕ ಅಕ್ರಮವಾಗಿ ಹಣ ಕೂಡಿ ಹಾಕುತ್ತಿದ್ದಾರೆ ಹಾಗೂ ಖಾಸಗಿ ಹಿತಕ್ಕಾಗಿ ಸಾರ್ವಜನಿಕ ನೀತಿಗಳನ್ನು ಅಪಹರಣ ಮಾಡುತ್ತಿದ್ದಾರೆ. ನವ ಉದಾರವಾದದಡಿ ಬಂಡವಾಳಶಾಹಿಗಳು ಮತ್ತು ರಾಜಕಾರಣಿಗಳ ಸಹಜೀವನ ಒಂದು ಹೊಸ ಘಟ್ಟವನ್ನು ತಲುಪಿದೆ. ರಾಜಕಾರಣಿಗಳು ಮತ್ತು ವಾಣಿಜ್ಯೋದ್ಯಮದ ಮೈತ್ರಿಯ ನೇರ ಪರಿಣಾಮ ಹಿಂದೆಂದಿಗಿಂತಲೂ ಹೆಚ್ಚಾಗಿ ರಾಜಕೀಯ ವ್ಯವಸ್ಥೆಯನ್ನು ಈಗ ಕಾಡುತ್ತಿದೆ.

ಗಡಿಯಾಚೆಗೂ ಚಾಚಿದ ಕರಾಳ ಹಸ್ತ

ಕರ್ನಾಟಕದ ರೀತಿಯಲ್ಲೇ ಉದ್ಯಮಿ, ರಾಜಕಾರಣಿಗಳ ನಂಟು ಬೆಳೆದು ನಿಂತಿರುವ ಗಡಿಯಾಚೆಗಿನ ಆಂಧ್ರಪ್ರದೇಶದ ಅತ್ಯಂತ ಪ್ರಭಾವಿ ಕಾಂಗ್ರೆಸ್ ಕುಟುಂಬದ ಜತೆಯಲ್ಲೂ ರೆಡ್ಡಿ ಸೋದರರು ಜಂಟಿ ಹಿತಾಸಕ್ತಿ ಹೊಂದಿದ್ದಾರೆ. 2005 ರಲ್ಲಿ ರೆಡ್ಡಿ ಸೋದರರು ಸ್ಥಾಪಿಸಿದ ಕಂಪನಿಯೊಂದಕ್ಕೆ ಅಂದಿನ ವೈಎಸ್ ರಾಜಶೇಖರರೆಡ್ಡಿ ಸರ್ಕಾರ ಅನಂತಪುರ ಜಿಲ್ಲೆಯಲ್ಲಿ ಕಬ್ಬಿಣದ ಅದಿರು ಗಣಿಗಾರಿಕೆಗಾಗಿ 400 ಎಕರೆ ಜಮೀನನ್ನು ಲೀಸ್‌ಗೆ ನೀಡಿತ್ತು. ದಿವಂಗತ ಮುಖ್ಯಮಂತ್ರಿಯ ಪುತ್ರ ಜಗನ್‌ಮೋಹನ ರೆಡ್ಡಿ ಕಡಪದಲ್ಲಿನ ಬ್ರಾಹ್ಮಿಣಿ ಉಕ್ಕು ಯೋಜನೆಯಲ್ಲಿ ಹಿತಾಸಕ್ತಿ ಹೊಂದಿದ್ದಾರೆ ಎನ್ನಲಾಗಿದೆ. ಜಗನ್ ರೆಡ್ಡಿಯ ಉದ್ಯಮ ಸಾಮ್ರಾಜ್ಯ ಕ್ಷಿಪ್ರಗತಿಯಲ್ಲಿ ವಿಸ್ತಾರವಾಗುತ್ತಿದೆ. ಮುಖ್ಯಮಂತ್ರಿ ಆಗಬೇಕೆಂಬ ಆತನ ಆಶೆ ಹಾಗೂ ಅದಕ್ಕಾಗಿ ನಡೆಯುತ್ತಿರುವ ಲಾಬಿಗಳು ಉದ್ಯಮ ಮತ್ತು ರಾಜಕಾರಣ ಹಾಗೂ ಲೂಟಿಕೋರ ಬಂಡವಾಳಶಾಹಿ ನಡುವಣ ಅಂತರ ಸಂಬಂಧ ಹೆಚ್ಚಾಗುತ್ತಿರುವುದಕ್ಕೆ ಇನ್ನೊಂದು ಸ್ಪಷ್ಟ ದೃಷ್ಟಾಂತವಾಗಿದೆ.

ನೀತಿಭ್ರಷ್ಟತೆ

ರಾಜಕೀಯ ವ್ಯವಸ್ಥೆಯ ಮಲಿನತೆ ಮತ್ತು ಪ್ರಜಾಪ್ರಭುತ್ವ ನೀತಿ (ಪಥ) ಭ್ರಷ್ಟತೆ ದೇಶದ ನಾಗರಿಕರ ಮುಂದಿರುವ ಗಂಭೀರ ಹಾಗೂ ಕಳವಳಕಾರಿ ಸಂಗತಿಯಾಗಿದೆ. ಅಕ್ರಮ ಮಾರ್ಗಗಳ ಮೂಲಕ ಅತಿ ಶ್ರೀಮಂತ ಜನರ ಹಿತಗಳನ್ನು ಕಾಯುವುದು ಹಾಗೂ ಅವರ ಲಾಭಕ್ಕಾಗಿ ಕಾನೂನುಸಮ್ಮತ ಸರಕಾರಿ ನೀತಿಗಳನ್ನು ರೂಪಿಸುವುದು ಕಾಂಗ್ರೆಸ್ ನೇತೃತ್ವದ ಯು.ಪಿ.ಎ. ಸರಕಾರದ ನಿಯಮವಾಗಿಬಿಟ್ಟಿದೆ. ಅದಕ್ಕೂ ಮುಂಚೆ ಅಧಿಕಾರದಲ್ಲಿದ್ದ ಬಿಜೆಪಿ ಕೂಡ ಈ ರೀತಿಯ ಕೃತ್ಯಕ್ಕೆ ಕೈಹಾಕಿತ್ತು. ಜಾರ್ಖಂಡ್‌ನಲ್ಲಿ ಕೋಡಾ ಸರಕಾರ ಮಾಡಿದ ಪ್ರಮಾದವನ್ನು ಕಾಂಗ್ರೆಸ್

ಪುಟ 12ಕ್ಕೆ

ವಿದ್ಯಾರ್ಥಿಗಳ ಮರ್ಮಾಂಗ ತುಳಿದ ಭಜರಂಗಿಗಳು

ಮಂಗಳೂರಿನಲ್ಲಿ ಮೊನ್ನೆ ಏನು ನಡೆದಿದೆ. ಅದು ನಿಜಕ್ಕೂ ನಾಗರೀಕ ಸಮಾಜ ತಲೆ ತಗ್ಗಿಸಬೇಕಾದಂತಹ ಘಟನೆ



ಕಡಲ ತಡಿ

ದ.ಕ.ಜಿಲ್ಲೆಯಲ್ಲಿ ಭಜರಂಗಿಗಳ ಅಟ್ಟಹಾಸ ನಿಯಂತ್ರಣವಿಲ್ಲದೆ ಸಾಗುತ್ತಿದೆ. ದಿನಾ ಒಂದಲ್ಲ ಒಂದು ಘಟನೆ ನಡೆಯುತ್ತಿದೆ. ಶಿಕ್ಷಕರ ಸೂಚನೆ ಮೇರೆಗೆ ಕ್ರೀಡಾ ತರಬೇತಿ ಪಡೆಯಲು ಮಂಗಳೂರಿನ ಸಂತ ಅಲೋಸಿಯಸ್ ಕಾಲೇಜಿಗೆ ಬಸ್ಸಿನಲ್ಲಿ ತೆರಳುತ್ತಿದ್ದ ವಿದ್ಯಾರ್ಥಿಗಳ ಮೇಲೆ ಭಜರಂಗಿಗಳು ಮಂಗಳೂರು ನಗರದ ವಾಮಂಜೂರು ಎಂಬಲ್ಲಿ ಮಾರಣಾಂತಿಕ ಹಲ್ಲೆ ನಡೆಸಿರುವುದು ಕೋಮು ಗಲಭೆಯತ್ತ ತಿರುಗುವ ಸ್ಥಿತಿ ನಿರ್ಮಾಣವಾಗಿತ್ತು. ಡಿವೈಎಸ್‌ಪಿ ಗಿರೀಶ್‌ರವರ ಸಮರ್ಥ, ನಿಷ್ಪಕ್ಷಪಾತ ಮಧ್ಯಪ್ರವೇಶದಿಂದ ಗಲಭೆ ಶಾಂತ ರೂಪಕ್ಕೆ ಬರುವಂತಾಯಿತು.

ಎಡಪದವು ಎಂಬಲ್ಲಿನ ಸ್ವಾಮಿ ವಿವೇಕಾನಂದ ಪದವಿ ಪೂರ್ವ ಕಾಲೇಜಿನ 5 ಮಂದಿ ವಿದ್ಯಾರ್ಥಿಗಳಲ್ಲಿ ಮೂರು ಮಂದಿ ಮುಸ್ಲಿಂ ವಿದ್ಯಾರ್ಥಿಗಳು, ಇಬ್ಬರು ವಿದ್ಯಾರ್ಥಿನಿಯರು ಹಾಸನದಲ್ಲಿ ನಡೆಯಬೇಕಾಗಿದ್ದ ರಾಜ್ಯಮಟ್ಟದ ಕ್ರೀಡಾ ಕೂಟದಲ್ಲಿ ಪಾಲ್ಗೊಳ್ಳಲು ಹೆಚ್ಚಿನ ತರಬೇತಿಗಾಗಿ ಶಾಲೆ ಬಳಿಯಿಂದ 28 ಕಿ.ಮೀ. ದೂರದಲ್ಲಿರುವ ಮಂಗಳೂರು ನಗರಕ್ಕೆ ಜೈನ್ ಟ್ರಾವಲ್ಸ್ ಎಂಬ ಎಕ್ಸ್‌ಪ್ರೆಸ್ ಬಸ್ಸಿನಲ್ಲಿ ಪ್ರಯಾಣಿಸಿ ಮಂಗಳೂರಿನಲ್ಲಿ ಸಿಗಲಿರುವ ಶಾರೀರಿಕ ಶಿಕ್ಷಕರೊಂದಿಗೆ ಸಂತ ಅಲೋಸಿಯಸ್ ಕಾಲೇಜಿಗೆ ತರಬೇತಿಗಾಗಿ ಪಾಲ್ಗೊಳ್ಳಲು ಪ್ರಯಾಣಿಸುತ್ತಿದ್ದರು. ಮುಸ್ಲಿಂ ವಿದ್ಯಾರ್ಥಿಗಳು ಹಿಂದೂ ವಿದ್ಯಾರ್ಥಿಗಳೊಂದಿಗೆ ಪ್ರಯಾಣಿಸುತ್ತಿದ್ದುದೇ ಕೋಮುವಾದಿ ಭಜರಂಗಿಗಳಿಗೆ ಸಹಿಸಲು ಅಸಾಧ್ಯವಾದ ಕೃತ್ಯವಾಗಿ ವಾಮಂಜೂರು ಎಂಬಲ್ಲಿ ಬಸ್ಸನ್ನು ತಡೆದು ನಿಲ್ಲಿಸಿ ವಿದ್ಯಾರ್ಥಿಗಳ ಮರ್ಮಾಂಗದ ಮೇಲೆ ಹಲ್ಲೆ ನಡೆಸಿ ಬಸ್ಸಿನ ತಗಡಿಗೆ ಅವರ ತಲೆಯನ್ನು ಜಜ್ಜಿ ಕ್ರೌರ್ಯ ಮೆರೆದಿದ್ದಾರೆ. ವಿದ್ಯಾರ್ಥಿನಿಯರ ಕೂದಲು ಹಿಡಿದು ಮುಖವನ್ನು ಬಸ್ಸಿಗೆ ಜಜ್ಜಿ ಹಿಂಸಿಸಲಾಯಿತು. ಈ ರೀತಿ ಹಲ್ಲೆಯನ್ನು ಸಿನಿಮೀಯ ಮಾದರಿಯಲ್ಲಿ ನಡೆಸಿ ವಿಕೃತ ಸುಖ ಕಾಣುತ್ತಿರುವ ಭಜರಂಗಿಗಳ ಅಟ್ಟಹಾಸಕ್ಕೆ ಕೊನೆ ಇಲ್ಲದಂತಾಗಿದೆ. ಬಸ್ಸಿಗಾಗಿ ವಿದ್ಯಾರ್ಥಿಗಳು ಗುರುಪುರ ಕೈಕಂಭ ಬಳಿ ನಿಂತಿದ್ದಾಗ ಮೋಹನ್ ಎಂಬಾತ ಬಂದು ವಿಚಾರಿಸಿದ್ದ. ಬಸ್ಸು ವಾಮಂಜೂರು ಬಳಿಯಲ್ಲಿ ಸಂಚರಿಸುತ್ತಿದ್ದಾಗ ಸುಮಾರು 50 ಮಂದಿ ಭಜರಂಗಿಗಳು ಹತ್ತಾರು ವಾಹನದಲ್ಲಿ ಬಂದು ಬಸ್ಸಿನ ಮೇಲೆ ದಾಳಿ ನಡೆಸಿದರು. ಬಸ್ಸನ್ನು ನಿಲ್ಲಿಸಿದ ತಂಡವು ಅವರಲ್ಲಿದ್ದ ಮೂವರು ಹುಡುಗರು ಮತ್ತು ಇಬ್ಬರು ಹುಡುಗಿಯರನ್ನು ಬಸ್ಸಿನಿಂದ ಎಳೆದು ಹೊರ ಹಾಕಿದೆ. 'ನಿಮಗೆ ಹಿಂದೂ ಹುಡುಗಿಯರೇ ಬೇಕಾ?' ಎಂದು ರಶೀದ್ ಎಂಬ ವಿದ್ಯಾರ್ಥಿಯನ್ನು ಪ್ರಶ್ನಿಸಿದ್ದಾರೆ. ಒಟ್ಟು ಮೂವರು ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಮರ್ಮಾಂಗವನ್ನು ಕಾಲಿನಿಂದ ತುಳಿದಿದ್ದಾರೆ. ಹತ್ತರಷ್ಟು ಮಂದಿ ಭಜರಂಗಿಗಳು ವಿದ್ಯಾರ್ಥಿನಿಯರ ತಲೆಕೂದಲನ್ನು ಎಳೆದು ಹಿಡಿದು 'ನಿಮಗೆ ಮುಸ್ಲಿಂ ಹುಡುಗರೇ ಬೇಕಾ?' ಎಂದು ಪ್ರಶ್ನಿಸಿ ಮುಖವನ್ನು ಬಸ್ಸಿಗೆ ಜಜ್ಜಿದ್ದಾರೆ. ಮರ್ಮಾಂಗಕ್ಕೆ ಪೆಟ್ಟು ಬಿದ್ದು ಒದ್ದಾಡುತ್ತಿದ್ದ ವಿದ್ಯಾರ್ಥಿಗಳನ್ನು ತಕ್ಷಣ ನಗರದ ಎಸ್‌ಸಿಎಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಘಟನೆ ನಡೆಯುತ್ತಿದ್ದಾಗ ಜನ ನೂರಾರು ಸಂಖ್ಯೆಯಲ್ಲಿ ಜಮಾವಣೆಗೊಂಡು ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು. ತಕ್ಷಣ ಸ್ಥಳಕ್ಕೆ ಆಗಮಿಸಿದ ಪಣಂಬೂರು ಡಿವೈಎಸ್‌ಪಿ ಗಿರೀಶ್‌ರವರು ಹೆಚ್ಚುವರಿ ಪೋಲೀಸರನ್ನು ನಿಯೋಜಿಸಿ, ಬಸ್ಸುಗಳಿಗೆ ಕಲ್ಲು ತೂರುತ್ತಿರುವವರ ಮೇಲೆ ಲಾಠಿ ಪ್ರಹಾರ ಮಾಡಿ ಹಿಂಸೆಯನ್ನು ನಿಯಂತ್ರಣಕ್ಕೆ ತಂದರು.



ಹಲ್ಲೆ ನಡೆಸಿರುವವರೂ ಆಸ್ಪತ್ರೆಯಲ್ಲಿ ದಾಖಲು

ಪೋಲೀಸರಿಂದ ಬಂಧನಕ್ಕೊಳಗಾಗುವ ಭಯದಿಂದ 4 ಮಂದಿ ಹಲ್ಲೆಕೋರ ಭಜರಂಗಿಗಳು ಜಿಲ್ಲಾ ಸರ್ಕಾರಿ ವೆನ್‌ಲಾಕ್ ಆಸ್ಪತ್ರೆಯಲ್ಲಿ ಒಳರೋಗಿಗಳಾಗಿ ದಾಖಲಾದರು. ಡಿವೈಎಫ್‌ಪಿ ಗಿರೀಶ್‌ರವರು 4 ಮಂದಿಯನ್ನು ಬಂಧಿಸಬೇಕೆಂದು ಕಂಕನಾಡಿ ಪೋಲೀಸ್ ಠಾಣಾಧಿಕಾರಿಗಳಿಗೆ ನಿರ್ದೇಶನ ನೀಡಿದರು. ಕಂಕನಾಡಿ ಪೋಲೀಸರು ಆಸ್ಪತ್ರೆಯಲ್ಲಿ ಹಲ್ಲೊಕೋರ ಭಜರಂಗಿಗಳನ್ನು ಬಂಧಿಸಿ ಠಾಣೆಗೆ ಕೊಂಡೊಯ್ದರು. ಭಜರಂಗದಳ ಮ
ಬಿಜೆಪಿ ಮುಖಂಡರು ಆಸ್ಪತ್ರೆಯ
ಒಳರೋಗಿಗಳಾಗಿದ್ದ ತಮ್ಮವರು ಆಸ್ಪತ್ರೆಯ
ಕಾಣದಿರುವುದನ್ನು ಕಂಡು ವೈದ್ಯಾಧಿಕಾರಿಗಳ
ತರಾಟೆಗೆ ತೆಗೆದುಕೊಂಡು, ವೈದ್ಯಾಧಿಕಾರಿಗ
ಪೋಲೀಸ್ ಠಾಣೆಗೆ ಫೋನ್ ಮಾಡಿ ಒಪ್ಪಿಗೆ ಇಲ್ಲ
ಒಳರೋಗಿಗಳಾಗಿದ್ದ ಭಜರಂಗಿಗಳನ
ಕೊಂಡೊಯ್ದಿರುವ ಬಗ್ಗೆ ಪೋಲೀಸರನ್ನು ಗದರಿಸಿದು
ಪುಕ್ಕಲು ಪೋಲೀಸರು ಅವರನ್ನು ಠಾಣೆಯಿಂ
ಆಸ್ಪತ್ರೆಗೆ ತಂದು ಬಿಟ್ಟು ಹೋದರು. ಅಲ್ಲಿ
ಎಲ್ಲಾ ಆರೋಪಿಗಳೂ ಪರಾರಿ. ಈ ರೀತಿ
ಕೃತ್ಯಗಳು ನಡೆಯುತ್ತಿರುವುದು ರಾಜ್ಯ ಸರ್ಕಾರ
ಬೆಂಬಲದಿಂದ ಎಂಬುದನ್ನು ಮರೆಯಬಾರದ

ಈ ಮಧ್ಯೆ ಕಾಲೇಜಿನ ಆಡಳಿತ ಮಂಡಳಿ
ಕೆಲವು ಮಂದಿ ವಿದ್ಯಾರ್ಥಿಗಳು ಘಟನೆ
ಖಂಡಿಸಿ ತರಗತಿಗೆ ಹಾಜರಾಗದೆ ಕಾಲೇಜ
ಆವರಣದಲ್ಲಿ ಮೆಟ್ಟಲುಗಳ ಮೇಲೆ ಕುಳಿತಿದ್ದ
ಎಂದು ಆರೋಪಿಸಿ 8 ಮಂದಿ ವಿದ್ಯಾರ್ಥಿಗಳ
ಅಮಾನತು ಮಾಡಿರುವ ಹೇಯ ಘಟನೆಯ
ನಡೆದಿರುತ್ತದೆ.

ಬಿಜೆಪಿ ಮತ್ತು ಭಜರಂಗದಳ
ಗೂಂಡಾಗಿರಿಯನ್ನು ಸಮರ್ಥವಾಗಿ ಎದುರಿಸ
ಪೋಲೀಸರು ವಿಫಲರಾಗಿರುವುದು ಆರೋಪಿ
ಆಸ್ಪತ್ರೆಯಿಂದಲೇ ಕಣ್ಮರೆಯಾಗುವ
ಪರ್ಯಾಸನಗೊಂಡಿರುತ್ತದೆ.

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್
ದ.ಕ. ಜಿಲ್ಲಾ ಸಮಿತಿ ಮಧ್ಯೆ ಪ್ರವೇಶಿಸಿ ವಿದ್ಯಾರ್ಥಿ
ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರು
ಭಜರಂಗದಳದ ಆರೋಪಿಗಳನ್ನು ಬಂಧಿಸಬೇ
ವಿದ್ಯಾರ್ಥಿಗಳ ನ್ಯಾಯೋಚಿತ ಸಹಜ ಕ್ರೀ
ಚಟುವಟಿಕೆಗೆ ತಡೆಯೊಡ್ಡುವ ಕೋಮುವಾದಿ ಶಕ್ತಿ
ಮೇಲೆ ಕಾನೂನು ಕ್ರಮ ಜರುಗಿಸಬೇಕೆಂ
ಒತ್ತಾಯಿಸಿದೆ.

ಆಹಾರ : ಇಚ್ಛಾ ಶಕ್ತಿ ಇಲ್ಲದ ಸರ್ಕಾರಗಳು...

ಪುಟ 3 ರಿಂದ

ಎ.ಪಿ.ಎಲ್, ಬಿ.ಪಿ.ಎಲ್ ತಾತ್ಕಾಲಿಕ ಯೂನಿಟ್ ಎಂಬಂತಹ ತಾರತಮ್ಯ ನೀತಿಗಳನ್ನು ಕೈಬಿಟ್ಟು 'ಎಲ್ಲರಿಗೂ ರೇಷನ್ ಕಾರ್ಡ್ ನೀಡುವಂತಾಗಬೇಕು, ಹಾಗೆಯೇ ರೇಷನ್ ಕಾರ್ಡ್‌ದಾರರೆಲ್ಲರಿಗೂ ರೇಷನ್ ಸಿಗಬೇಕು.

ಇದೇ ಸಂದರ್ಭದಲ್ಲಿ ನೆರೆಹೊರೆ ರಾಜ್ಯಗಳ ಪದ್ಧತಿಯನ್ನಾದರೂ ಸರ್ಕಾರ ಗಮನಿಸಬೇಕು. ವಿಶೇಷವಾಗಿ ಎಡಪ್ರಜಾಸತ್ತಾತ್ಮಕ ರಂಗದ ನೇತೃತ್ವದ ಕೇರಳ ಸರ್ಕಾರ ಒಂದು ಮಾದರಿಯಾದ ರೀತಿಯಲ್ಲಿ ರೇಷನ್ ಪೂರೈಕೆ ವ್ಯವಸ್ಥೆಯನ್ನು ಹೊಂದಿದೆ.. ಜೀವನಾವಶ್ಯಕ 14 ವಸ್ತುಗಳು ಅತ್ಯಂತ ಕಡಿಮೆ ದರದಲ್ಲಿ ಪಡಿತರ ಸ್ಟೋರ್ಸ್‌ಗಳಿಂದ ದೊರಕಿಸುವ ಮೂಲಕ ತನ್ನ ಪ್ರಜೆಗಳಿಗೆ ಆಹಾರದ ಭದ್ರತೆ ಒದಗಿಸಿದೆ. ಇದು ಅಭಿನಂದನಾರ್ಹವಾದುದು. ಅಲ್ಲಿ ಸಾಧ್ಯವಿರುವುದು ಇಲ್ಲೇಕಿಲ್ಲ? ಅಂದರೆ ನಮ್ಮ ಸರ್ಕಾರಕ್ಕೆ ರಾಜಕೀಯ ಇಚ್ಛಾಶಕ್ತಿ ಇಲ್ಲ. ಅದು ಜನಪರವಾಗಿಲ್ಲ. ಬದಲಾಗಿ ಗಣಿಗಳ್ಳರು, ಭೂಮಾಫಿಯಾಗಳೂ, ಕಾಳಸಂತೆಖೋರರುಗಳ ಪರವಾಗಿದೆ.

ಆದ್ದರಿಂದ ಆಹಾರದ ಹಕ್ಕು ಮೂಲಭೂತ ಹಕ್ಕು ಎಂದು ಸಂವಿಧಾನ, ಸುಪ್ರಿಂ ಕೋರ್ಟ್ ಮತ್ತು ವಿಶ್ವಸಂಸ್ಥೆಗಳು ಮತ್ತೆ ಮತ್ತೇ ಸಾರಿವೆ. ಈ ಹಕ್ಕು ಹಾಗೆ ಬರುವುದಿಲ್ಲ. ಅದಕ್ಕಾಗಿ ಆಹಾರದ ಸ್ವಾತಂತ್ರ್ಯದ ಹಕ್ಕಿಗಾಗಿ ಮಹಾ ಆಂದೋಲನವೇ ಸಾಗಬೇಕು. ಆಡಳಿತ, ಅಧಿಕೃತ ವಿರೋಧ ಪಕ್ಷಗಳು ಮೈಮರೆಯುತ್ತಿರುವಾಗ ಇಂತಹ ಹೋರಾಟವನ್ನು ಎಡಪಕ್ಷಗಳು ದೇಶದಲ್ಲಿ ಕೈಗೆತ್ತಿಕೊಂಡಿವೆ. ಅದನ್ನು ಬಲಗೊಳಿಸಿ ವಿಸ್ತರಿಸಬೇಕು. ಆಹಾರದ ಹಕ್ಕು-ಭದ್ರತೆ ಪೂರೈಕೆ ಇಲ್ಲದೆ ಪ್ರಜಾಪ್ರಭುತ್ವವೆಂಬುದು ಅಸ್ತಿತ್ವದಲ್ಲಿ ಇರಲು ಸಾಧ್ಯವಿಲ್ಲ. ಅದನ್ನು ಹೋರಾಡಿಯೇ ದಕ್ಕಿಸಿಕೊಳ್ಳಬೇಕು.

ಪ್ರವಾಹ: ಪರಿಹಾರ, ಪುನರ್ವಸತಿಗಾಗಿ ಒತ್ತಾಯ

ಪ್ರವಾಹ ಸಂತ್ರಸ್ತರಿಗೆ ಸೂಕ್ತ ಪರಿಹಾರ, ಪುನರ್ವಸತಿಗಾಗಿ ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ನೇತೃತ್ವದಲ್ಲಿ ಬೆಂಗಳೂರಿನಲ್ಲಿ ನಡೆದ ಪ್ರತಿಭಟನೆ, ರಾಜಭವನದ ಸಮೀಪ



ಆರೆಸ್ಸೆಸ್-ಬಿಜೆಪಿ ರಾಜಕೀಯದ ಹೊಲಸು ಮುಖ

ರಾಜ್ಯದ ಜನರ ಮುಂದೆ ತೆರೆದುಕೊಂಡ ಬಿಜೆಪಿಯ ಭಿನ್ನಮತವು ಬಿಜೆಪಿಯ ಮತ್ತು ಅದನ್ನು ನಿಯಂತ್ರಿಸುವ ಆರೆಸ್ಸೆಸ್‌ನ ಅಸಹ್ಯಕರ, ಅನೈತಿಕ ರಾಜಕೀಯುವನ್ನು ನಗ್ನಗೊಳಿಸಿದೆ.

ಜಿ.ವಿ. ಶ್ರೀರಾಮರೆಡ್ಡಿ
ಮಾಜಿ ಶಾಸಕರು

"ತಪ್ಪು ನಿಂದಲ್ಲಾ ರಾಘವ ದುಡ್ಡುಕೊಟ್ಟು ನಿನ್ನ ನಾಟಕ ನೋಡಿದ್ದು ನಂದು" ಇದು ಸುಪ್ರಸಿದ್ಧ ಕನ್ನಡದ ಲೇಖಕ ಟಿ.ಪಿ. ಕೈಲಾಸಂ ಅಂದಿನ ಕರ್ನಾಟಕ ಮತ್ತು ಆಂಧ್ರದ ಎರಡು ರಾಜ್ಯಗಳಲ್ಲಿ ಪ್ರಸಿದ್ದಿ ಹೊಂದಿದ್ದ ಬಳ್ಳಾರಿ ರಾಘವ ಎಂದೇ ಪ್ರಸಿದ್ದಿ ಹೊಂದಿದ್ದ ಹೆಸರಾಂತ ನಾಟಕಕಾರ ಮತ್ತು ನಿರ್ದೇಶಕ ರಾಘವರಿಗೆ ಕೈಲಾಸಂ ಹೇಳಿದ ಮಾತು ಇದು. ಸಂದರ್ಭ ಬಳ್ಳಾರಿ ರಾಘವ ಮತ್ತು ಟಿ.ಪಿ. ಕೈಲಾಸಂ ಇಬ್ಬರು ಆಪ್ತ ಸ್ನೇಹಿತರು. ಒಬ್ಬರು ಮೇರು ಸಾಹಿತಿ ಮತ್ತು ಒಬ್ಬರು ಮೇರು ಕಲಾವಿದ. ಬಳ್ಳಾರಿ ರಾಘವರು. ಬಳ್ಳಾರಿಯಲ್ಲಿ ನಾಟಕವಾಡಿಸುತ್ತಿದ್ದರು. ತನ್ನ ಸ್ನೇಹಿತ ಟಿ.ಪಿ. ಕೈಲಾಸಂ ರವರಿಗೆ ನನ್ನ ನಾಟಕ ನೋಡುಬಾ ಎಂದು ಸದಾ ಒತ್ತಾಯ ಮಾಡುತ್ತಿದ್ದರಂತೆ. ಹಾಗಾಗಿ ಕೈಲಾಸಂ ರವರು ಒಂದು ದಿವಸ ರಾಘವರಿಗೆ ಗೊತ್ತಿಲ್ಲದೆ ಬಳ್ಳಾರಿಗೆ ಹೋಗಿ ಎಲ್ಲರಂತೆ ತಾನು ದುಡ್ಡುಕೊಟ್ಟು ನಾಟಕ ನೋಡಲು ಕುಳಿತು ನಾಟಕ ನೋಡುತ್ತಿದ್ದರಂತೆ. ನಾಟಕದ ಕಡೆಯ ಅಂಕದಲ್ಲಿ ಒಂದು ಪಾತ್ರ. ಆ ಪಾತ್ರದಾರಿಯದು ಒಂದೇ ಒಂದೇ ಮಾತು. ಅದೇನೆಂದರೆ "ತಪ್ಪು ನಂದಲ್ಲ" "ತಪ್ಪು ನಂದಲ್ಲ" ಎಂದು ಹೇಳಬೇಕಿತ್ತು. ಆ ದಿವಸ ಪ್ರತಿದಿನ ಆ ಪಾತ್ರ ಮಾಡುತ್ತಿದ್ದ ಕಲಾವಿದನಿಗೆ ಕಾಯಿಲೆ ಆಗಿ ಅವನು ಆ ದಿವಸದ ನಾಟಕಕ್ಕೆ ಬಂದಿರಲಿಲ್ಲವಂತೆ ಹಾಗಾಗಿ ರಾಘವರು ಹೊಸಬರೊಬ್ಬರನ್ನು ಆ ಪಾತ್ರ ಮಾಡಲು ಹೇಳಿ ಆ ಡೈಲಾಗ್ ಹೇಗೆ ಹೇಳಬೇಕು ಯಾವಾಗ ಹೇಳಬೇಕೆಂದು ತರಬೇತಿ ನೀಡಿದ್ದರಂತೆ. ಆ ಹೊಸಕಲಾವಿದ ನನ್ನ ಪಾತ್ರ ನಾಟಕದ ಕಡೆಯ ಅಂಕ ಹಾಗಾಗಿ ಅಷ್ಟರವರಿಗೂ ತಾನು ನಿದ್ದೆ ಮಾಡಬಹುದೆಂದು ಭಾವಿಸಿ ನಿದ್ದೆ ಹೋಗಿದ್ದಾನೆ. ನಾಟಕದ ಕಡೆಯ ಹಂತ ಬಂದಾಗ ನಿರ್ದೇಶಕ ರಾಘವರವರು ಈ ಕಲಾವಿದನಿಗೆ ಕರೆದರು. ಇವನು ನಿದ್ದೆ ಹೋಗಿದ್ದ. ನಿರ್ದೇಶಕರು ಗಾಬರಿಯಿಂದ ಇವನನ್ನು ಎಬ್ಬಿಸಿ ರಂಗಸ್ಥಳಕ್ಕೆ ಕಳುಹಿಸಿದರಂತೆ. ಆದರೆ ಆ ಕಲಾವಿದ ನಿದ್ದೆಯ ಮಂಪರಿನಲ್ಲಿ ತಾನು ಯಾವ ಡೈಲಾಗ್ ಹೇಳ ಬೇಕಿತ್ತೋ ಅದನ್ನು ಮರೆತುಹೋಗಿ ರಂಗಸ್ಥಳಕ್ಕೆ ಒಂದು ಕಕ್ಕಾಬಿಕ್ಕಿಯಾಗಿ ಮಿಕಮಿಕ ಸುತ್ತಲು ನೋಡಲಾರಂಬಿಸಿದಾಗ ತೆರೆಹಿಂದೆ ಇದ್ದ ನಿರ್ದೇಶಕ ರಾಘವರು "ತಪ್ಪು ನಂದಲ್ಲಾ" ಎಂದು ಹೇಳಿ ಕೊಡಲು ಪ್ರಾರಂಬಿಸಿದರಂತೆ. ಅದು ಆ ಕಲಾವಿದನಿಗೆ ಅರ್ಥವಾಗದೆ ತಬ್ಬಿಬ್ಬಾಗಿ ನೋಡಿದಾಗ ಜನರ ಮಧ್ಯೆ ಕೂತು ನಾಟಕ ನೋಡುತ್ತಿದ್ದ ಕೈಲಾಸಂರವರು ಎದ್ದು "ತಪ್ಪು ನಿಂದಲ್ಲವೋ ರಾಘವ ದುಡ್ಡು ಕೊಟ್ಟು ನಿನ್ನ ನಾಟಕ ನೋಡಿದ್ದು ನನ್ನ ತಪ್ಪು" ಎಂದು ಹೇಳಿದರಂತೆ. ಇದು ಇಂದಿಗೂ ಕನ್ನಡ ಸಾಹಿತ್ಯದಲ್ಲಿ ಒಂದು ವಿಶಿಷ್ಟ ತಮಾಷೆಯಾಗಿ (ಜೋಕ್) ಇದೆ. ಇಂದು ಕರ್ನಾಟಕದ ಜನತೆಯ ಸ್ಥಿತಿ ಟಿ.ಪಿ. ಕೈಲಾಸಂ ಹೇಳಿದ ಆ ಮಾತಿನ ಅರ್ಥದಂತೆ ಆಗಿಲ್ಲವೇ? 2008 ರಲ್ಲಿ ನಡೆದ ಚುಣಾವಣೆಯಲ್ಲಿ 'ನನಗೊಂದು ಸಲ ಅವಕಾಶ ಕೊಡಿ. ನನಗೆ ಕುಮಾರಸ್ವಾಮಿ ಮೋಸ ಮಾಡಿದ್ದಾರೆ' ಎಂದು ರಾಜ್ಯದ ಜನತೆಯ ಮುಂದೆ ಗೋಗೆರೆದು ಮತ ಯಾಚನೆ ಮಾಡಿದ ಯಡಿಯೂರಪ್ಪ ಮತ್ತು ಬಿ.ಜಿ.ಪಿ.ಗೆ ಮತಕೊಟ್ಟು ನಾವು ಕ್ಷಮಿಸಲಾರದಂತಹ ತಪ್ಪು ಮಾಡಿದ್ದೀವೇನೋ ಎಂದು ಪಶ್ಚಾತ್ತಾಪ ಪಡುವ ಸ್ಥಿತಿ ನಿರ್ಮಾಣವಾಗಿರುವುದು ಒಂದು ದುರಂತವೆ ಸರಿ. ಯಾಕೆಂದರೆ ಬಿ.ಜಿ.ಪಿ.ಯಲ್ಲಿನ ಭಿನ್ನಮತ ಭುಗಿಲೆದ್ದ ರೀತಿ ಮತ್ತು ಕಾರಣ, ಅದನ್ನು ಪರಿಹಾರ ಮಾಡಿದ ರೀತಿ ಮತ್ತು ಅದರ ಪರಿಣಾಮಗಳು ಕೇವಲ



ಕರ್ನಾಟಕಕ್ಕೆ ಸೀಮಿತವಾಗುವುದಿಲ್ಲ. ಇದು ದೇಶದ ಪ್ರಜಾತಂತ್ರ ವ್ಯವಸ್ಥೆಗೆ ಬಿದ್ದ ಕೊಡಲಿ ಪೆಟ್ಟು ಮತ್ತು ಸಂಸದೀಯ ವ್ಯವಸ್ಥೆಯ ಅವಹೇಳನ ಮತ್ತು ಅಣಕವಾಗಿ ಇತಿಹಾಸದಲ್ಲಿ ದಾಖಲಾಗಿಹೋಯ್ತು. ಪ್ರಜಾತಂತ್ರ ವ್ಯವಸ್ಥೆಯ ಜೀವನಾಡಿಗಳಾದ ರಾಜಕೀಯ ಪಕ್ಷಗಳು ಸಂಸದೀಯ ವ್ಯವಸ್ಥೆಯ ಆಧಾರ ಸ್ಥಂಭಗಳಾದ ಮತದಾರರು ಮತ್ತು ಜನತೆ ಅಸಹಾಯಕರಾಗಿ ಮೂಕ ಪ್ರೇಕ್ಷಕರಂತೆ ಬಿ.ಜೆ.ಪಿ. ಎಂಬ ಅತ್ಯಂತ ಅಪಾಯಕಾರಿ ರಾಜಕೀಯ ಪಕ್ಷ ಒಂದರ ಅಸಹ್ಯ ನಡುವಳಿಕೆಗಳನ್ನು ನೋಡುವಂತಹ ದುಸ್ಥಿತಿ ಒದಗಿ ಬಂದಿದ್ದನ್ನ ಪ್ರಜಾಪ್ರಭುತ್ವದ ಅದಃ ಪತನದ ಸಂಕೇತವೆನ್ನಬೇಕೆ? ಅಥವಾ ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಅಣಕವೆನ್ನಬೇಕೆ? ಅಥವಾ ಭಾರತದ ರಾಜಕಾರಣದ ಅಧೋಗತಿಯನ್ನಬೇಕೆ ಎಂಬುದನ್ನು ಜನತೆ ಚಿಂತಿಸಬೇಕಿದೆ.

ಎಲ್ಲಿಯು ಶಿಸ್ತು, ದೇಶಪ್ರೇಮ?

ಬಿ.ಜೆ.ಪಿ. ಇಡೀ ಭಾರತದೇಶದಲ್ಲಿ ತಾನೊಂದೇ ಅಪ್ಪಟ ಮತ್ತು ನಿಜವಾದ ದೇಶಪ್ರೇಮ ಪಕ್ಷವೆಂದು ಈ ದೇಶದ ಸಂಸ್ಕೃತಿ ಮತ್ತು ಭವ್ಯ ಪರಂಪರೆಯು ಏಕೈಕವಾರಸುದಾರನೆಂದು, ಸಭ್ಯತೆ, ಸಂಸ್ಕೃತಿ ಮತ್ತು ಶೀಲಕ್ಕೆ ತಾನೆ ಪ್ರತಿರೂಪವೆಂದು, ಶಿಸ್ತು ನಮ್ಮ ಹುಟ್ಟು ಗುಣವೆಂದು ಡಂಗೂರ ಭಾರಿಸುತ್ತಿರುತ್ತದೆ. ಇಂತಹ ಪಕ್ಷವೊಂದು ಕ್ರಿಮಿನಲ್ ದಂಧೆ ಮತ್ತು ಅಕ್ರಮಗಳಿಂದ ಹಣ ಗಳಿಸಿದ ಮೂರನೇ ದರ್ಜೆಯ ರಾಜಕಾರಣಿಗಳ ಕುಟುಂಬವೊಂದರ ಕೈಗೊಂಬೆಯಾಗಿದ್ದು ಬಿ.ಜೆ.ಪಿ. ಎಂಬ ಪ್ಯಾಸಿಸ್ಟ್ ಪಕ್ಷದ ತಾತ್ವಿಕ ದಿವಾಳಿಕೋರತನವಲ್ಲವೇ? ಮತ್ತು ಫ್ಯಾಸಿಸ್ಟ್ ಮನೋಭಾವದ ಮುಸುಕಿನಲ್ಲಿ ಶಿಸ್ತನ್ನು ಹೇಳುತ್ತಿದ್ದ ಪಕ್ಷವೊಂದರ ಅರಾಜಕತೆಯ ಪರಮಾವಧಿಯನ್ನು ತೋರಿಸಿಕೊಟ್ಟಿತಲ್ಲವೇ? ತನಗೆ ಸ್ವಂತ ಬಲವಿದ್ದು, ಏಕ ಪಕ್ಷದ ಸರ್ಕಾರವಾಗಿದ್ದು ಸುಮಾರು 20 ದಿವಸಗಳ ಕಾಲ ಇಡೀ ರಾಜ್ಯದಲ್ಲಿ ಸರ್ಕಾರವನ್ನೇ ಸ್ಥಬ್ಧಗೊಳಿಸಿ ಕರ್ನಾಟಕದ ಐದೂವರೆ ಕೋಟಿ ಜನರಿಗೆ ಕ್ರಿಮಿನಲ್ ಅಪರಾಧವನ್ನು ಎಸೆಗಿತು. ಇಡೀ ಆಡಳಿತ ಯಂತ್ರಾಂಗ ಕುಸಿದು ಬಿತ್ತು. ಕರ್ನಾಟಕದ ಅರ್ಧದಷ್ಟು ಜನಸಂಖ್ಯೆಯ ಜನ ಅತಿವೃಷ್ಟಿಯಿಂದಾಗಿ ನಿರ್ಗತಿಕರಾಗಿ ಚಳಿ, ಗಾಳಿಯಲ್ಲಿ ಬೀದಿಯಲ್ಲಿ ನಿಂತಿದ್ದರೆ, ಸುಮಾರು 10 ಲಕ್ಷ ಮನೆಗಳು ಕುಸಿದು ಬಿದ್ದು 10 ಲಕ್ಷ ಕುಟುಂಬಗಳು ಬೀದಿಪಾಲಾಗಿ ರಸ್ತೆಯ ಇಕ್ಕೆಲಗಳಲ್ಲಿ ಅರ್ಧಂಬರ್ಧ ಹರಿದ ಟೆಂಟುಗಳಲ್ಲಿ ತನ್ನ ಇಡೀ ಕುಟುಂಬವನ್ನು ಹಾಕಿಕೊಂಡು ಆದಿವಾಸಿಗಳಂತೆ ಬದುಕು ಸಾಗಿಸುತ್ತಿದ್ದರೆ ತಾವೇ ಮತವನ್ನು ಹಾಕಿ ಗೆಲ್ಲಿಸಿದ ರಾಜಕೀಯ ಪಕ್ಷದ ಸರ್ಕಾರವೊಂದು ಸ್ಥಬ್ದವಾದರೆ ತಾವೆ ನಂಬಿಕೆ ಇಟ್ಟು ಗೆಲ್ಲಿಸಿದ ತಮ್ಮ ಪ್ರತಿನಿಧಿಗಳು ಪರರಾಜ್ಯಗಳ ರೆಸಾರ್ಟ್‌ಗಳಲ್ಲಿ ಮೋಜುಮಾಡುತ್ತಿದ್ದಾರೆ.

ಮುಖ್ಯಮಂತ್ರಿಯ ದೈನೇಸಿ ಸ್ಥಿತಿ

ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮುಖ್ಯಮಂತ್ರಿ ಮತ್ತು ಪ್ರಧಾನ ಮಂತ್ರಿಗಳು ಪಾರ್ಲಿಮೆಂಟ್ ಮತ್ತು ಅಸೆಂಬ್ಲಿಯಲ್ಲಿ ಸಭಾ ನಾಯಕರು ಅಂದರೆ ಚುನಾವಣೆಗಳ ಮುಖಾಂತರ ಜನತೆ ಪರಮೋಚ್ಛ ಅಧಿಕಾರವನ್ನು ಈ ಸದನಗಳಿಗೆ ಕೊಡುತ್ತಾರೆ ಇಂತಹ ಅತ್ಯುನ್ನತ ಸದನ ನಾಯಕರು ಪ್ರಧಾನ ಮಂತ್ರಿ ಮತ್ತು ಮುಖ್ಯ ಮಂತ್ರಿ ಇಂತಹ ಪರಮೋಚ್ಛ ಅಧಿಕಾರವನ್ನು ಸಂವಿಧಾನ ಬದ್ಧವಾಗಿ ಪಡೆದಿರುವ ಮುಖ್ಯಮಂತ್ರಿಯೊಬ್ಬನನ್ನು ಬಿಕ್ಷುಕನ ಸ್ಥಿತಿಗೆ ತಳ್ಳಿದಂತಹ 'ಹೆಮ್ಮೆ' ಬಿಜೆಪಿಯದ್ದು. ಹೌದು ಇದು ಬಿ.ಜೆ.ಪಿ. ಯ ನಿಜ ಸ್ವರೂಪ ಯಾಕೆಂದರೆ ಹೇಳಿ ಕೇಳಿ ಇದೊಂದು ಫ್ಯಾಸಿಸ್ಟ್ ಪಕ್ಷ. ಫ್ಯಾಸಿಸ್ಟ್ ಸಂಘಟನೆಯೊಂದು ಎಂದೂ ಪ್ರಜಾಪ್ರಭುತ್ವವನ್ನು ಮತ್ತು ಪಾರ್ಲಿಮೆಂಟರಿ ವ್ಯವಸ್ಥೆಯನ್ನು ಗೌರವಿಸಲಾರದು ಮತ್ತು ಪ್ರಜಾಪ್ರಭುತ್ವವನ್ನು ಸಹಿಸಲಾರದು. ಜರ್ಮನಿಯ ಹಿಟ್ಲರ್ ಎರಡನೆ ಮಹಾ ಪ್ರಪಂಚ ಯುದ್ಧದ ಸಂದರ್ಭದಲ್ಲಿ ತನ್ನ ಪೈಶಾಚಿಕ ಕೃತ್ಯಗಳನ್ನು ನಡೆಸಲು ಹೇಗೆ ಜರ್ಮನಿಯ ಪಾರ್ಲಿಮೆಂಟನ್ನು ಉಪಯೋಗಿಸಿದ ಎಂಬುದು ಜಗತ್ತಿಗೆ ಗೊತ್ತಿದೆ. ಅಂತಹ ಪರಂಪರೆಯಿಂದಲೇ ಸ್ಪೂರ್ತಿಯನ್ನು ಪಡೆದಿರುವ ಪಕ್ಷವೊಂದರಿಂದ ಇದಕ್ಕಿಂತಹ ಒಳ್ಳೆಯದನ್ನು ನಿರೀಕ್ಷಿಸಿದರೆ ನಿರೀಕ್ಷಿಸಿದವರದೇ ತಪ್ಪಾಗುತ್ತದೆ. ಇಂತಹ ಅಸಹ್ಯಕರವಾದ ಅವಮಾನವನ್ನು ಸಹಿಸಿಕೊಂಡು ಮುಖ್ಯಮಂತ್ರಿ ಸ್ಥಾನಕ್ಕೆ ಅಂಟಿ ಕುಳಿತಿರುವ ಯಡಿಯೂರಪ್ಪನವರ ಬಂಡತನಕ್ಕೆ ಈ ದೇಶದ ರಾಜಕಾರಣದಲ್ಲಿ ಬೇರೆ ಒಂದಾದರು ಉದಾಹರಣೆ ಸಿಕ್ಕುವುದು ಸಾಧ್ಯವೇ? ತನ್ನ ಪಕ್ಷದಲ್ಲಿ ಬುಗಿಲೆದ್ದ ಭಿನ್ನ ಮತವನ್ನು ನಿವಾರಿಸಿದ ರೀತಿ ನೋಡಿದರೆ ಬಿ.ಜೆ.ಪಿ. ಅಸಹ್ಯಕರ ರಾಜಕೀಯದ ಬಗೆಗೆ ವಾಕರಿಕೆ ಬರುತ್ತದೆ. ನಿಮ್ಮ ಭಿನ್ನ ಮತವನ್ನು ಬಿದಿಗಿಟ್ಟು ಮೊದಲು ರಾಜ್ಯದ ಜನತೆಯ ಸಂರಕ್ಷಣೆಗೆ ಸ್ಪಂದಿಸಿ ಇಲ್ಲದಿದ್ದರೆ ನಿಮ್ಮ ಮೇಲೆ ಶಿಸ್ತಿನ ಕ್ರಮ ಜರುಗಿಸುತ್ತೇವೆಂಬ ಒಂದೇ ಒಂದೇ ಮಾತನ್ನು ಭಿನ್ನಮತೀಯರಿಗೆ ಹೇಳು ಧೈರ್ಯವನ್ನು ತೋರಳಿಲ್ಲವೆಂದರೆ ಅಪಕ್ಷ ನೈತಿಕವಾಗಿ ಎಷ್ಟು ಅಧಃಪತನಕ್ಕೆ ಹೋಗಿದೆಯಂದು ತಿಳಿಯುತ್ತದೆ. ಬದಲಿಗೆ ಭಿನ್ನಮತೀಯರು ಇಟ್ಟ ಎಲ್ಲ ಬೇಡಿಕೆಗಳನ್ನು (ಒಂದನ್ನು ಬಿಟ್ಟು) ಎಲ್ಲವನ್ನು ಒಪ್ಪಿ ಕೊಳ್ಳುವಂತೆ ಮಾಡಿ ಒಬ್ಬ ಮುಖ್ಯ ಮಂತ್ರಿಯನ್ನು "ಛಪರಾಶಿ" ಸ್ಥಿತಿಗೆ ಬಿ.ಜೆ.ಪಿ. ವರಿಷ್ಠರು ತಂದಿದ್ದಾರೆ. ಅಂದರೆ ಕ್ರಿಮಿನಲ್ ದಂಧೆಗಳಿಂದ ರಾತ್ರೋರಾತ್ರಿ ಶ್ರೀಮಂತರಾದ ಬಂಡವಾಳಗಾರರ ಎದುರು ಈ ದೇಶದ ರಾಷ್ಟ್ರೀಯ ಪಕ್ಷವೊಂದು ಮೊಣಕಾಲು ಊರಿ ಡೊಗ್ಗುಸಲಾಮ ಹೊಡೆಯುವ ಸ್ಥಿತಿಗೆ, ಅತ್ಯಂತ ಕ್ರಿಯಾಶೀಲ ಪ್ರಜಾಪ್ರಭುತ್ವದಲ್ಲಿನ ರಾಜಕೀಯ ಪಕ್ಷವೊಂದು ಬಂದಿದೆ ಎಂದರೆ, ಬಂಡವಾಳಗಾರರ ವರ್ಗದ ಎದುರು ಪ್ರಜಾಪ್ರಭುತ್ವವೆಂಬ ಪಾರ್ಲಿಮೆಂಟರಿ ವ್ಯವಸ್ಥೆಯೊಂದು ಏನಾಗುತ್ತದೆ ಎಂಬುದರ ಮುನ್ಸೂಚನೆಯೊಂಬುದು ನಿಶ್ಚಲ. ದೇಶದ ಸರ್ಕಾರಗಳು ಹೇಗೆ ಹಂತ ಹಂತವಾಗಿ ಕಾರ್ಪೊರೇಟ್ ಕಂಪನಿಗಳ ಹಿಡಿತಕ್ಕೆ ಹೊಗುತ್ತಿವೆ ಎಂಬುದನ್ನು ಗಮನಿಸಿದರೆ, ಈ ಅಭಿಪ್ರಾಯಕ್ಕೆ ಖಂಡಿತ ಬಲ ಸಿಕ್ಕತ್ತದೆ. ಅದೇ ರಿತೀಯಲ್ಲೆ ಇಂದಿನ ಪಾರ್ಲಿಮೆಂಟಿನಲ್ಲಿ 300 ಕ್ಕೂ ಹೆಚ್ಚು ಜನರು ಕೋಟ್ಯಾಧಿಪತಿಗಳು ತುಂಬಿರುವಾಗ ಆ ಸಂಖ್ಯೆಯಲ್ಲಿ 18ಕ್ಕೂ ಕರ್ನಾಟಕದ ಹೆಚ್ಚು ಜನ ಭೂಗಳ್ಳರು, ಗಣಿ ಮಾಫಿಗಳು ಮತ್ತು ಕೋಟ್ಯಾಧಿಪತಿಗಳು ತುಂಬಿರುವುದನ್ನು ನೋಡಿದರೆ, ಈ ದೇಶದ ಬಂಡವಾಳ ಶಾಹಿ ರಾಜಕೀಯ ಪಕ್ಷಗಳು ಅವುಗಳ

ಪುಟ 11 ಕ್ಕೆ

ಜನರ ಜೀವನಾವಶ್ಯಕ ಆಹಾರ ಧಾನ್ಯಗಳ ಬೆಲೆ ವಿಪರೀತ ಏರಿವೆ. ಅದಕ್ಕೆ ಕಾರಣವೇನು? ದುಡಿದು ದುಡಿದು ಧೂಳಾಗುತ್ತಿರುವ ದುಡಿವ ಜನರ ಬೆವರಿನ ಪ್ರತಿಫಲ ಯಾರ ತಿಜೋರಿಯಲ್ಲಿ ಶೇಖರವಾಗುತ್ತಿದೆ.

ಆಹಾರದ ಮಾರುಕಟ್ಟೆಯಲ್ಲಿ ಜೂಜಾಟ ಜನರಿಗೆ ಪ್ರಾಣ ಸಂಕಟ

ಅಮೇರಿಕಾ ಮೊದಲಾದ ದೇಶಗಳಲ್ಲಿ ಕೊಳೆಯುವಷ್ಟು ಹಣಕಾಸು ಬಂಡವಾಳದ ಶೇಖರಣೆ

ಶೇರು ಮಾರುಕಟ್ಟೆಯ ಜೊತೆಗೇ ಆಹಾರ ಮತ್ತಿತರ ಮಾರುಕಟ್ಟೆಯನ್ನು ತೆರೆಯಲು ವಿಶ್ವ ಬಂಡವಾಳದ ಒತ್ತಾಯ

ಆಹಾರದ ಮಾರುಕಟ್ಟೆಯಲ್ಲಿ ಸ್ವಾತಂತ್ರ್ಯಾನಂತರ ನಿಷೇಧಿಸಲಾಗಿದ್ದ ಜೂಜಾಟದ ವ್ಯಾಪಾರ ಮುಂಗಡ ಅಥವಾ ಭವಿಷ್ಯದ ಮಾರುಕಟ್ಟೆ ಆರಂಭಿಸಲು ನರಸಿಂಹರಾವ್-ಮನಮೋಹನ್‌ಸಿಂಗ್ ಸರ್ಕಾರದ ತೀರ್ಮಾನ

1993 ರಲ್ಲಿ 17 ವಸ್ತುಗಳಲ್ಲಿ ಭವಿಷ್ಯದ ಮಾರುಕಟ್ಟೆ ಆರಂಭ

1998 ರಲ್ಲಿ ಆಹಾರ ವಸ್ತುವಿನಲ್ಲಿ ಭವಿಷ್ಯದ ಮಾರುಕಟ್ಟೆ ವಿಸ್ತರಿಸಲು ವಿಶ್ವಬ್ಯಾಂಕ್ ಒತ್ತಾಯ ಮತ್ತು ಸಾಲ ನೀಡಿಕೆ

1998 ರಿಂದ 2002 ರ ಅವಧಿಯಲ್ಲಿ ಬಿಜೆಪಿ ನೇತೃತ್ವದ ಸರ್ಕಾರದಿಂದ ಎಲ್ಲಾ ಕೃಷಿ ಉತ್ಪನ್ನಗಳಲ್ಲಿ ಭವಿಷ್ಯದ ಮಾರುಕಟ್ಟೆ ಆರಂಭ

ಸೋನಿಯಾಗಾಂಧಿ, ಮಹಮೋಹನ ಸಿಂಗ್ ಸರ್ಕಾರದಿಂದ ಭವಿಷ್ಯದ ಮಾರುಕಟ್ಟೆಗೆ ಉತ್ತೇಜನ. ಎಡಪಕ್ಷಗಳ ವಿರೋಧದಿಂದ ಒಂದೆರಡು ವಸ್ತುವಿನಲ್ಲಿ ತಾತ್ಕಾಲಿಕ ನಿಷೇಧ.

ಈಗ 3 ರಾಷ್ಟ್ರಮಟ್ಟದ, 21 ಪ್ರಾದೇಶಿಕ ವಸ್ತುಗಳ ಭವಿಷ್ಯದ ಮಾರುಕಟ್ಟೆ (commodity excharge) 80 ವಸ್ತುಗಳಲ್ಲಿ ಜೂಜುಕೋರ ವ್ಯಾಪಾರ

2006 ರಲ್ಲಿ ಬಾಂಬೆ ಸ್ಟಾಕ್ ಎಕ್ಸ್‌ಚೇಂಜ್‌ಗಿಂತ (9,20,000 ಕೋಟಿಗೂ ಹೆಚ್ಚು ರಾಷ್ಟ್ರೀಯ ವಸ್ತು ಮಾರುಕಟ್ಟೆಯಲ್ಲಿ ಹೆಚ್ಚು ವಹಿವಾಟು (11,30,000 ಕೋಟಿ ರೂ)

ಶೇರು ಮಾರುಕಟ್ಟೆ ಕುಸಿತದಿಂದ ವಸ್ತುಗಳ ಭವಿಷ್ಯದ ಮಾರುಕಟ್ಟೆ ವಹಿವಾಟಿನಲ್ಲಿ 2009 ರಲ್ಲಿ ದಿಢೀರ್ ಏರಿಕೆ.

ಆಹಾರದ ವಸ್ತುಗಳ ದಿಢೀರ್ ಬೆಲೆ ಏರಿಕೆ ನೂರಾರು ಕೋಟಿ ಜನಗಳಿಗೆ ಪ್ರಾಣ ಸಂಕಟ

ಜಿ.ಎನ್.ನಾಗರಾಜ್

ಬೆಲೆ ಏರಿಕೆ-ಸರ್ಕಾರ, ವಿರೋಧ ಪಕ್ಷಗಳು, ಪತ್ರಿಕೆ-ಮಾಧ್ಯಮಗಳು

ಆಹಾರದ ಬೆಲೆಗಳು ದಿಢೀರನೆ ವಿಪರೀತವಾಗಿ ಏರಿವೆ. ಏರುತ್ತಲೇ ಇವೆ. ಇದರಿಂದ ನೂರಾರು ಕೋಟಿ ಜನರು ಸಂಕಟಕ್ಕೆ ತುತ್ತಾಗಿದ್ದಾರೆ. ಆದರೆ ಈ ಬೆಲೆ ಏರಿಕೆ ಏಕಾಗಿದೆ ಎಂಬುದನ್ನು ಸರ್ಕಾರ ವಿವರಿಸುತ್ತಿಲ್ಲ. ಬೆಲೆ ಏರಿಕೆಯನ್ನು ನಿಯಂತ್ರಿಸಲು ಯಾವ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಮುಂದಿನ ತಿಂಗಳುಗಳಲ್ಲಿ ಬೆಲೆಗಳು ನಿಯಂತ್ರಣಕ್ಕೆ ಬರುತ್ತವೆ ಎಂದು ಸರ್ಕಾರ ಹೇಳುತ್ತಿದೆಯೇ ಹೊರತು ಯಾವ ನಿರ್ದಿಷ್ಟ ಕ್ರಮವನ್ನೂ ಕೈಗೊಳ್ಳುವುದೂ ಕಾಣುತ್ತಿಲ್ಲ.

ಸರ್ಕಾರವಿರಲಿ ವಿರೋಧ ಪಕ್ಷಗಳಾಗಿ ಜನರ ಬದುಕಿನ ಬಗ್ಗೆ ಜವಾಬ್ದಾರಿಯಿರುವ ಬಿಜೆಪಿ ಪಕ್ಷ ಇತರ ಅನೇಕ ಬಂಡವಾಳಶಾಹಿ ಪಕ್ಷಗಳೂ ಕೂಡ ಬೆಲೆ ಏರಿಕೆಯ ಬಗ್ಗೆ ಅದರ ಕಾರಣ ನಿವಾರಣೆಗಳ ಬಗ್ಗೆ ಸರ್ಕಾರಕ್ಕೆ ನಿರ್ಧಿಷ್ಟವಾಗಿ ಒತ್ತಾಯ ಮಾಡುತ್ತಿಲ್ಲ. ಸರ್ಕಾರ ನಿರ್ದಿಷ್ಟ ಕ್ರಮಗಳನ್ನು ಕೈಗೊಂಡು ಬೆಲೆ ಏರಿಕೆ ನಿಯಂತ್ರಣ ಮಾಡುವಂತೆ ಜನಾಭಿಪ್ರಾಯವನ್ನು ರೂಢಿಸುತ್ತಿಲ್ಲ.

ಮಾಧ್ಯಮಗಳು, ಪತ್ರಿಕೆಗಳು ಪ್ರಜಾಪ್ರಭುತ್ವದಲ್ಲಿ ಜನರ ಸಮಸ್ಯೆಯ ಬಗ್ಗೆ ವಿರೋಧ ಪಕ್ಷಗಳ ಪಾತ್ರ ವಹಿಸುವ ಹೊಣೆಯುಳ್ಳದ್ದಾಗಿವೆ. ಬೆಲೆ ಏರಿಕೆಯ ಬಗ್ಗೆ ಮಾಧ್ಯಮ-ಪತ್ರಿಕೆಗಳು ಮಾಡಿರುವ ಕೆಲಸವೆಂದರೆ ಬೆಲೆ ಏರಿಕೆ ಎಷ್ಟಾಗಿದೆ. ಯಾವ ರೀತಿಯಲ್ಲಿ ಕೆಲ ಜನರಿಗೆ ತೊಂದರೆಯಾಗಿದೆ ಎಂಬ ವಿವರಗಳನ್ನು ನೀಡಿ ಕೈತೊಳೆದುಕೊಂಡುಬಿಟ್ಟಿವೆ. ಇದಕ್ಕೆ ನಿರ್ದಿಷ್ಟ ಕಾರಣಗಳನ್ನು, ಪರಿಹಾರಗಳನ್ನು ಸೂಚಿಸುತ್ತಿಲ್ಲ. ಜನರ ಮುಂದೆ ಮಂಡಿಸಿ ಜನಾಭಿಪ್ರಾಯ ರೂಪಿಸುತ್ತಿಲ್ಲ. ಹಾಗಾದರೆ ಬೆಲೆ ಏರಿಕೆ ದಿಢೀರನೆ ಏರಲು ಕಾರಣವೇನು, ಅದಕ್ಕೆ ಪರಿಹಾರಗಳೇನು? ಎಂಬ ಬಗ್ಗೆ ವಿವರಿಸುವ , ವಿಶ್ಲೇಷಿಸುವ ಸಾಮರ್ಥ್ಯವುಳ್ಳವರು ದೇಶದಲ್ಲಿ ಯಾರು ಇಲ್ಲವೇ?

ಸಿಪಿಐಂ(ಎಂ) ಪಕ್ಷ ಹಾಗೂ ಎಡಪಕ್ಷಗಳು ಈಗ್ಗೆ ನಾಲ್ಕು ವರ್ಷಗಳಿಂದಲೂ ನಿರಂತರವಾಗಿ ಕೇಂದ್ರ ಸರ್ಕಾರದ ಮುಂದೆ ಬೆಲೆ ಏರಿಕೆಯ ಮೂಲ ಕಾರಣವನ್ನು ಗುರುತಿಸಿ ಅವುಗಳಿಗೆ ತಕ್ಕ ಪರಿಹಾರವನ್ನು ಸೂಚಿಸುತ್ತಲೇ ಇವೆ. ಈ ಪರಿಹಾರವನ್ನು ಕೇಂದ್ರ ಸರ್ಕಾರ ಮಾನ್ಯ ಮಾಡಿಲ್ಲ ಮಾತ್ರವಲ್ಲ ಪತ್ರಿಕೆ ಮಾಧ್ಯಮಗಳೂ ಜನರ ಮುಂದಿಡದೆ ತಮ್ಮ ಕರ್ತವ್ಯ ವಂಚನೆ ಮಾಡಿವೆ. ಅನೇಕ ಎಡಪಂಥೀಯ ಆರ್ಥಿಕ ತಜ್ಞರ ಬರಹಗಳನ್ನು ಪ್ರಕಟಿಸಲು ನಿರಾಕರಿಸುತ್ತಿವೆ. ಫ್ರಂಟ್‌ಲೈನ್ ಪತ್ರಿಕೆ ಮಾತ್ರ ಇದಕ್ಕೆ ಅಪವಾದವಾಗಿದೆ. ಏಕೆ ಹೇಗೆ?







ಆಹಾರ, ಕೃಷಿ ಉತ್ಪನ್ನಗಳಲ್ಲಿ ಜೂಜಾಟ

ಅಮೇರಿಕಾ ಮೊದಲಾದ ಸಾಮ್ರಾಜ್ಯಶಾಹಿ ದೇಶಗಳಲ್ಲಿ ಬಡ, ಅಭಿವೃದ್ಧಿಶೀಲ ದೇಶಗಳನ್ನು ಶೋಷಿಸಿದ ಹಣ, ಪೆಟ್ರೋಲ್ ಬೆಲೆ ದಿಢೀರನೆ ಏರಿದ್ದರ ಫಲವಾದ ಹಣದ ಹೊಳೆ, ಕೋರಿಯಾ, ವಿಯೆಟ್ನಾಂ ಮೊದಲಾದ ದೇಶಗಳ ಮೇಲೆ ಯುದ್ಧ ಹೂಡಿ ಗಳಿಸಿದ ಹಣ, 'ಡಾಲರ್' ಎಂಬ ನಾಣ್ಯವನ್ನೇ ಮಾರಾಟ ಮಾಡಿ ಗಳಿಸಿದ ಹಣ ಕೆಲವೇ ಜನರ ಕೈಯಲ್ಲಿ ವಿಪರೀತವಾಗಿ ಶೇಖರವಾಗಿ ಕೊಳೆಯುವುದಕ್ಕೆ ಆರಂಭಿಸಿತು. ವಿಶ್ವದ ಬಡದೇಶಗಳ ಒಳಗೆ ನುಗ್ಗಿ ಲಾಭ ಪಡೆಯಲು ಶೇರು ಮಾರುಕಟ್ಟೆಗಳಲ್ಲಿ ಅಪಾರ ಪ್ರಮಾಣದಲ್ಲಿ ಹೂಡಲ್ಪಟ್ಟಿತು ಎಂಬ ಬಗ್ಗೆ ಜನರ ಶಕ್ತಿಯಲ್ಲಿ ಓದಿದ್ದೀರಿ. ಶೇರು ಮಾರುಕಟ್ಟೆ ಮಾತ್ರ ಸಾಲದು ವಸ್ತುಗಳ ಮಾರುಕಟ್ಟೆಯಲ್ಲಿಯೂ ಅಪಾರ ಪ್ರಮಾಣದ ಹಣ ಹೂಡಲು ಅವಕಾಶವಿರಬೇಕೆಂದು ವಿಶ್ವದ ಹಣಕಾಸು ಬಂಡವಾಳ ವಿಶ್ವಬ್ಯಾಂಕ್ ಮೂಲಕ ಭಾರತವನ್ನು ಒತ್ತಾಯಿಸಿತು.. ಜಾಗತೀಕರಣ, ಖಾಸಗೀಕರಣ, ಉದಾರೀಕರಣ ನೀತಿಗಳನ್ನು ಜಾರಿಗೆ ತಂದ 1991 ರ ನರಸಿಂಹರಾವ್ ಮನಮೋಹನ್ ಸಿಂಗ್ ಸರ್ಕಾರ ಆಹಾರ, ಕೃಷಿ ಉತ್ಪನ್ನಗಳೂ ಸೇರಿದಂತೆ ವಸ್ತುಗಳ ಬಗ್ಗೆ ಬಾಂಬೆಸ್ಟಾಕ್ ಎಕ್ಸ್‌ಚೇಂಜ್ ಎಂಬ ಶೇರು ಮಾರುಕಟ್ಟೆಯ ರೀತಿಯಲ್ಲಿ ಕಮಾಡಿಟೀಸ್ ಎಕ್ಸ್‌ಚೇಂಜ್ ಮಾರುಕಟ್ಟೆಯನ್ನು ಆರಂಭಿಸಲು ನಿರ್ಧರಿಸಿತು.

1993 ರಲ್ಲಿ ಕೆ.ಎನ್. ಕ್ರಾಬ್ರಾ ಎಂಬುವರ ಅಧ್ಯಕ್ಷತೆಯಲ್ಲಿ ಭವಿಷ್ಯದ ಮಾರುಕಟ್ಟೆಯನ್ನು ಪುನರಾರಂಭಿಸುವ ಬಗ್ಗೆ ಒಂದು ಸಮಿತಿಯನ್ನು ನೇಮಿಸಿತು. ಸ್ವಾತಂತ್ರ್ಯಕ್ಕೆ ಮೊದಲು ಬ್ರಿಟಿಷರ

ವಳಿತದಲ್ಲಿ ಯಥೇಚ್ಛವಾಗಿ ಅವಕಾಶ ೀಡಲಾಗಿದ್ದ ಈ ಭವಿಷ್ಯದ ಮಾರುಕಟ್ಟೆ ಾರತದ ರೈತರ ಪರಿಸ್ಥಿತಿಯನ್ನು ಕಂಗೆಡಿಸುವಲ್ಲಿ ೕಕಷ್ಟು ದೊಡ್ಡ ಪಾತ್ರ ವಹಿಸಿತ್ತು. ಆ ಾರಣಕ್ಕಾಗಿಯೇ ಸ್ವಾತಂತ್ರ್ಯ ಬಂದ ಮೇಲೆ ಈ ಭವಿಷ್ಯದ ಮಾರುಕಟ್ಟೆಯನ್ನು ಭಾರತದಲ್ಲಿ ಷೇಧಿಸಲಾಗಿತ್ತು. ಸ್ವಾತಂತ್ರ್ಯ ಳುವಳಿಯ ಈ ೌಲ್ಯವನ್ನು ಾಳಿಗೆ ತೂರಿ ಾಂಗ್ರೆಸ್ ರ್ಕಾರ ಭವಿಷ್ಯದ ಮಾರುಕಟ್ಟೆಗೆ ಅವಕಾಶ ಮಾಡಿಕೊಡಲು ನಿರ್ಧರಿಸಿತು.



ಾಬ್ರಾ ಕಮಿಟಿ ಬಹಳ ಎಚ್ಚರಿಕೆಯ ನೀತಿಯನ್ನು ಅನುಸರಿಸಬೇಕೆಂದು, ಸಂಬಂಧಪಟ್ಟ ಾಯಿದೆಗಳನ್ನು ಬಿಗಿಗೊಳಿಸಬೇಕೆಂದು ಸೂಚಿಸಿ 7 ವಸ್ತುಗಳಲ್ಲಿ ಭವಿಷ್ಯದ ಮಾರುಕಟ್ಟೆಗೆ ಅವಕಾಶ ನೀಡಿತು.

ನಂತರ 1998 ರಲ್ಲಿ ಬಿಜೆಪಿ ನೇತೃತ್ವದ ವಾಜಪೇಯಿ ಸರ್ಕಾರ 'ಎಚ್ಚರಿಕೆ'ಯನ್ನೆಲ್ಲಾ ಗಾಳಿಗೆ ತೂರಿ ಭರದಿಂದ ಭವಿಷ್ಯದ ಮಾರುಕಟ್ಟೆಯನ್ನು ವಿಸ್ತರಿಸಲು ನಿರ್ಧರಿಸಿತು. ಭವಿಷ್ಯದ ಮಾರುಕಟ್ಟೆಗಳನ್ನು ಸ್ಥಾಪಿಸಲು ವಿಶ್ವಬ್ಯಾಂಕ್‌ನಿಂದ ವಿಶೇಷ ಸಾಲವೊಂದನ್ನೂ ಪಡೆಯಿತು. ಹೀಗೆ ವಾಜಪೇಯಿ ಸರ್ಕಾರ ಅಡಿಗೆ ಎಣ್ಣೆ, ಎಣ್ಣೆಬೀಜ, ಮತ್ತು ತಿಂಡಿಗಳಿಂದ ಆರಂಭಿಸಿ 2002, 2003ರ ಬಜೆಟ್‌ನಲ್ಲಿ ಎಲ್ಲಾ ಉತ್ಪನ್ನಗಳನ್ನು ಈ ಜೂಜುಕೋರ ಮಾರುಕಟ್ಟೆಗೆ ಒಳಗು ಮಾಡಿತು. ಈ



ಜೂಜುಕೋರ ಮಾರುಕಟ್ಟೆಗೆ ಅನುಕೂಲವಾಗುವಂತೆ ಹಣಕಾಸು ಬಂಡವಾಳಗಾರರು ದೊಡ್ಡ ಪ್ರಮಾಣದಲ್ಲಿ ಲಾಭ ಪಡೆಯಲು ಅನುಕೂಲವಾಗುವಂತೆ ಆಹಾರದ ವ್ಯಾಪಾರದ ವಿಷಯಗಳಲ್ಲಿದ್ದ ನಿರ್ಬಂಧಗಳನ್ನು ತೆಗೆದುಹಾಕಿತು. ಆಹಾರ ಪಡಿತರ ವ್ಯವಸ್ಥೆಯನ್ನು ನಾಶ ಮಾಡಲು ಕ್ರಮಗಳನ್ನು ಆರಂಭಿಸಿತು.

ಇದರಿಂದಾಗಿ ಗೋಧಿ ಮತ್ತು ಅದರ ಉತ್ಪನ್ನಗಳ ಬೆಲೆಗಳು ತೀವ್ರವಾಗಿ ಏರಿತು. ಭಾರತ ಸರ್ಕಾರ ಗೋಧಿಯನ್ನು ದುಬಾರಿ ಬೆಲೆಯಲ್ಲಿ ಆಮದು ಮಾಡಿಕೊಳ್ಳಬೇಕಾಗಿ ಬಂತು.

ಇಂದು ಭಾರತದಲ್ಲಿ3 ರಾಷ್ಟ್ರಮಟ್ಟದ ಕಮಾಡಿಟೀಸ್ ಎಕ್ಸ್‌ಚೇಂಜ್‌ಗಳು 21 ಪ್ರಾದೇಶಿಕ ಎಕ್ಸ್‌ಚೇಂಜ್‌ಗಳು ಭರದಿಂದ ಕಾರ್ಯ ನಿರ್ವಹಿಸುತ್ತಿವೆ.


1991 ಮತ್ತು 96 ರ ಸಮಯದಲ್ಲಿ ಆಹಾರ ಕೃಷಿ ಉತ್ಪನ್ನಗಳ ಜೂಜುಕೋರ ಮಾರುಕಟ್ಟೆಗೆ ಅವಕಾಶ ಮಾಡಿದ ಆಗಿನ ಅರ್ಥಸಚಿವ ಮನಮೋಹನ್‌ಸಿಂಗ್ ರವರಿಗೆ 2004 ರಲ್ಲಿ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ಮರಳಿ ಪ್ರಧಾನಿಯಾದಾಗ ಬಿಜೆಪಿ ಸರ್ಕಾರ ಕೈಗೊಂಡ ಕ್ರಮಗಳ ಬಗ್ಗೆ ಅಪಾರ ಸಮತೋಷವೇ ಆಗಿತ್ತು. ಈ ಜೂರುಕೋರ ಮಾರುಕಟ್ಟೆಗೆ ಮತ್ತಷ್ಟು ಉತ್ತೇಜನ ನೀಡಿದರು. ಅದರಿಂದಾಗಿ ವಸ್ತುಗಳ ಜೂಜಾಟದ ಮಾರುಕಟ್ಟೆ ಅಪಾರವಾಗಿ ಬೆಳೆಯಿತು. 2006 ರ ವೇಳೆಗೆ, ರಾಷ್ಟ್ರೀಯ ಕಮಾಡಿಟಿಸ್ ಎಕ್ಸ್‌ಚೇಂಜ್ ಎಂಬ ಆಹಾರ ಕೃಷಿ ಮತ್ತಿತರ ವಸ್ತುಗಳ ಜೂಜುಕೋರ ಮಾರುಕಟ್ಟೆ ಬಾಂಬೆಸ್ಟಾಕ್ ಎಕ್ಸ್‌ಚೇಂಜ್ ಎಂಬ ಶೇರು ಮಾರುಕಟ್ಟೆಯನ್ನೂ ಒಟ್ಟು ವಹಿವಾಟಿನಲ್ಲಿ ಹಿಂದೆ ಹಾಕಿಬಿಟ್ಟಿತು. ಬಾಂಬೆಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ 2006 ರಲ್ಲಿ 9,20,000 ಕೋಟಿ ರೂ.ಗಳಷ್ಟು ವ್ಯವಹಾರವಾದರೆ ವಸ್ತು ಮಾರುಕಟ್ಟೆಯಲ್ಲಿ 11,30,000 ಕೋಟಿ ರೂ.ಗಳಷ್ಟು ವ್ಯವಹಾರವಾಗಿತ್ತು.

ಭವಿಷ್ಯದ ಮಾರುಕಟ್ಟೆ ಎಂದರೇನು ಅದರ ವ್ಯವಹಾರ ಹೇಗೆ?

ವಸ್ತುಗಳ ವಿನಿಮಯ ಮಾರುಕಟ್ಟೆಯಲ್ಲಿ ವಾಯಿದಾ ವ್ಯಾಪಾರ (forward Trading) ಫಾರ್‌ವರ್ಡ್ ಟ್ರೇಡಿಂಗ್ ಭವಿಷ್ಯದ ವ್ಯಾಪಾರ ಅಥವಾ ಮುಂಗಡ ವ್ಯಾಪಾರ , (futures trading) ಫ್ಯೂಚರ್ಸ್ ಟ್ರೇಡಿಂಗ್), ಆಪ್ಷನ್ಸ್ ಮತ್ತು ಡಿರಿವೇಟಿವ್ಸ್ (options and derivatives) ಎಂಬ ಮೂರು ಮುಖ್ಯ ವಿಧಗಳಿವೆ. ಅವುಗಳನ್ನು ಪ್ರತ್ಯೇಕವಾಗಿ ಇಲ್ಲಿ ವಿವರಿಸಹೋಗುವುದಿಲ್ಲ. ಒಟ್ಟಾರೆಯಾಗಿ ಇವು ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ವಿವರಿಸಲಾಗುವುದು.

ಭವಿಷ್ಯದ ಮಾರುಕಟ್ಟೆ ಕೆಲಸ ಮಾಡುವ ಪರಿ

➡ 2012 ರ ಡಿಸೆಂಬರ್‌ನಲ್ಲಿ 10 ಲಕ್ಷ ಟನ್ ಅಕ್ಕಿ ಒದಗಿಸಲು ಇಂದೇ ವ್ಯಾಪಾರ	➡ ಅಂದಿನ ಬೆಲೆಯ ಬಗ್ಗೆ ಊಹಿಸಿ ಇಂದು ಬೆಲೆಯ ನಿರ್ಧಾರ. ಆ ಬೆಲೆಯ 1/5 ಭಾಗ ಮಾತ್ರ ಹಣ ಪಾವತಿ ಮಾಡಲು ಅವಕಾಶ
➡ ಹೀಗಾಗಿ ಒಬ್ಬರ ಹತ್ತಿರ ಇರುವ ಹಣದ 5 ಪಟ್ಟು ವಸ್ತುಗಳನ್ನು ಕೊಳ್ಳಲು ಅವಕಾಶ	➡ ಈ ಒಪ್ಪಂದದ ಪತ್ರವನ್ನು ಮಾರಾಟಕ್ಕಿಡಲು ಅವಕಾಶ
➡ ಒಪ್ಪಂದದ ಪತ್ರದಲ್ಲಿರುವ ಬೆಲೆಗಿಂತ ಹೆಚ್ಚು ಬೆಲೆಯನ್ನು ನೀಡಲು ಸಿದ್ಧರಾದರೆ ಒಪ್ಪಂದ ಪತ್ರದ ಮಾರಾಟ	➡ ಒಪ್ಪಂದ ಪತ್ರವನ್ನು ಕೊಂಡವರಿಂದ ಮತ್ತೆ ಲಾಭಕ್ಕಾಗಿ ಮತ್ತೊಬ್ಬರಿಗೆ ಮಾರಾಟ. ಅದರಲ್ಲಿ ಮತ್ತೆ ಬೆಲೆ ಹೆಚ್ಚಾಗುತ್ತದೆ
➡ ಈ ಮೂರು ವರ್ಷಗಳಲ್ಲಿ ಹಲವಾರು ಬಾರಿ ಹೀಗೆ ಮಾರಾಟ ಮಾಡಲು ಅವಕಾಶ	➡ ಹಲವಾರು ಬಾರಿ ಬೆಲೆ ಏರಿಕೆಯ ಬಗ್ಗೆ ಜೂಜುಕೋರ ಸ್ಪರ್ಧೆ.
➡ ವಾಸ್ತವಿಕ ಬೆಲೆಗಳು ಈ ಒಪ್ಪಂದಗಳ ಊಹಾತ್ಮಕ ಬೆಲೆಗಳಂತೆಯೇ ಏರಿಸಿದರೆ ಮಾತ್ರ ಹಣ ಹೂಡಿದವರಿಗೆ ಲಾಭ	➡ ವಾಸ್ತವಿಕ ಬೆಲೆಗಳನ್ನು ದುರ್ಲಾಭಗಳ ಗಳಿಕೆಗೆ ಅನುಗುಣವಾಗಿ ಏರಿಸಲು ಪ್ರಯತ್ನ. ಆಹಾರದ ಬೃಹತ್ ಖಾಸಗಿ ದಾಸ್ತಾನು.
➡ ಹಣದ ಹೂಡಿಕೆಯ ಅಪಾರ ಪ್ರಮಾಣಕ್ಕೆ ಅನುಗುಣವಾಗಿ ನಿರಂತರ ಬೆಲೆ ಏರಿಕೆ.	➡ ಜನರ ಪರಿತಾಪ



ಕವಿತೆ

ಹಾವುಗಳೇ ಕಚ್ಚಿ

ಆಕಾಶವ ಎತ್ತಿನಿಲಿಸಿ
ನೀಲಿಯಾಗಿ ನಿಂತವರೆ
ಕಪ್ಪು ನೆಲವ ಕೆಂಪು ಮಾಡಿ
ಬಾಳೆಯಾಗಿ ಅರಳಿದವರೆ

ಮುತ್ತಿನ ಮಳೆ ಹುಯ್ಯುವಾಗ
ಸಿಡಿಲುಬಡಿದು ಸತ್ತವರೆ
ಸೊಕ್ಕಿದವರ ಸುಟ್ಟುಬಿಡಲು
ಬೆಂಕಿಯ ಮಳೆಯಾದವರೆ

ನೆಲನೆಲದಲಿ ಜಲವುಕ್ಕಿಸಿ
ಬೆಳ್ಳಿಯ ಬೆಳೆ ಬೆಳೆದವರೆ

ದುಡಿದುಡಿದು ಧೂಳಾದವರೆ
ಹಸಿವನುಂಡ ಜನಗಳೆ
ಯಜಮಾನರ ಬೆತ್ತಗಳಿಗೆ
ಭುಜಬೆನ್ನನು ತೆತ್ತವರೆ
ಬಂದೂಕದ ತುದಿಗೆದೆಯನು
ಒಡ್ಡುವವರೆ ಬನ್ನಿರಿ

ಮಂತ್ರಗಳಲಿ ಮಲಗಿದವರೆ
ಸತ್ಯಗಳಲಿ ಸತ್ತವರೆ ಕಿಚ್ಚುಗಳೇ ಕೆರಳಿ
ಎಚ್ಚರವನು ತಪ್ಪಿದವರೆ
ಮಚ್ಚರವನು ಮುಚ್ಚಿದವರೆ
ಹಾವುಗಳೇ ಕಚ್ಚಿ

ಡಾ. ಸಿದ್ಧಲಿಂಗಯ್ಯ

ಅಸಂಘಟಿತ ವಲಯದ ದುಡಿವ ಜನರು ತಮ್ಮ ವೇತನ - ಕೂಲಿಯ ಎಷ್ಟು ಪಾಲನ್ನು ಅನ್ನಕ್ಕಾಗಿ ಖರ್ಚು ಮಾಡಬೇಕಾಗಿದೆ ಎಂದು ನೋಡುತ್ತಾ ಹೋದರೆ... ಹಲವು ವಿಭಾಗಗಳಲ್ಲಿ ಇಡೀ ದುಡಿಮೆಯೂ ಅನ್ನಕ್ಕೆ ಸಾಲುವುದಿಲ್ಲ.

ಸಾಲದ ಕೂಲಿ ತುಂಬದ ಹೊಟ್ಟೆ

ಕೈ ಕೆಸರಾದರೆ ಬಾಯಿ ಮೊಸರು ಎನ್ನುತ್ತದೆ ಒಂದು ಗಾದೆ. ದುಡಿಯುವವರು ದುಡಿಸಿಕೊಳ್ಳುವವರೂ ಎಂಬ ಆಧಾರದಲ್ಲಿ ವರ್ಗ ವಿಭಜಿತವಾದ ಈ ಸಮಾಜದಲ್ಲಿ ಯಾರ ಕೈ ಕೆಸರು. ಯಾರ ಬಾಯಿ ಮೊಸರು'ಂಬ ಪ್ರಶ್ನೆಯನ್ನು ಕೇಳಲೇಬೇಕಾಗುತ್ತದೆ. ರಾಜ್ಯದಲ್ಲಿ ಕೋಟಿಗಳ ಸಂಖ್ಯೆಯಲ್ಲಿರುವ ಅಸಂಘಟಿತ ಕಾರ್ಮಿಕರೇನು ಕಡಿಮೆ ದುಡಿಯುತ್ತಾರೆಯೇ?

ಹಮಾಲಿ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಅಕ್ಷರದಾಸೋಹ, ಅಂಗನವಾಡಿ, ಬೀಡಿ, ಆಟೋ ಚಾಲಕರು, ಗ್ರಾಮ ಪಂಚಾಯತ್ ನೌಕರರು, ತೋಟ ಕಾರ್ಮಿಕರು ಹೀಗೆ ಎಷ್ಟೆಷ್ಟೋ ವಿಭಾಗಗಳ ಕಾರ್ಮಿಕರು ಮೈಮುರಿದು ಬೆವರು ಮಾಲಿಕರ, ಸರ್ಕಾರದ ಖಜಾನೆ ತುಂಬುತ್ತಾರೆ. ಆದರೆ ಅವರ ಮತ್ತು ಅವರ ಕುಟುಂಬ ವರ್ಗದ ಗೇಣುದ್ದದ ಹೊಟ್ಟೆ ತುಂಬಿಸಲು ಬೇಕಾದ ವೇತನ, ಕನಿಷ್ಟ ವೇತನ ಅವರಿಗೆ ದೊರೆಯುತ್ತಿದೆಯೇ? ಈ ಬೆಲೆ ಏರಿಕೆಯ ಬೆಂಕಿಯಲ್ಲಿ ಬೇಯುತ್ತಿರುವ ಈ ದುಡಿಯುವ ವರ್ಗ ಜನರು ತಾವು ಗಲಿಸುವ ಕೂಲಿ ವೇತನ ಎಷ್ಟು? ಅವರ ಆಹಾರಕ್ಕಾಗಿ ಖರ್ಚು ಮಾಡಬೇಕಾಗಿರುವ ಹಣವೆಷ್ಟು?

ಅವರ ಹೆಸರು ಮಾಲತಿ. ಊರು ದೊಡ್ಡನಗುಡ್ಡೆ. ಉಡುಪಿ ತಾಲ್ಲೂಕು, ನವೆಂಬರ್ 17, 2009 ರ ಬೆಳಿಗ್ಗೆ ಅವರು ತರಕಾರಿ ತರಲು ಅಂಗಡಿಗೆ ತೆರಳುತ್ತಾರೆ. ಒಂದು ಕೆ.ಜಿ. ಹುರುಳಿಕಾಯಿ 34 ರೂಪಾಯಿಗಳು !! ಅವರಿಗೆ ಆಘಾತ. ತರಕಾರಿ ಕೊಳ್ಳದೇ ಅವರು ವಾಪಸ್ ಬರುತ್ತಾರೆ.

ಆಕೆ ಸಾಮಾನ್ಯ ಗೃಹಿಣಿಯಲ್ಲ. ದುಡಿಯುವ ಮಹಿಳೆ. ಬೀಡಿ ಕಾರ್ಮಿಕ ಮಹಿಳೆ ಆಕೆ. ಆಕೆಯ ಗಂಡ ಸಹ ದುಡಿಯುತ್ತಾರೆ. ಆದರೂ ಅವರಿಗೆ ತರಕಾರಿ ಕೊಳ್ಳಲು ಧೈರ್ಯ ಬರಲಿಲ್ಲ ಯಾಕೆ?.

ಮಾಲತಿಯವರ ಕುಟುಂಬದಲ್ಲಿ ಒಟ್ಟು 5 ಜನ ಇದ್ದಾರೆ. ಗಂಡ, ಹೆಂಡತಿ, ಮಾವ, 2 ಮಕ್ಕಳು, ಮನೆ ಕೆಲಸಗಳನ್ನು ಮುಗಿಸಿ ಪ್ರತಿದಿನ ಮಾಲತಿ ಬೀಡಿ ಕಟ್ಟುವ ಕಾಯಕ ಶುರು ಮಾಡುತ್ತಾರೆ. ಅವರು ಪ್ರತಿದಿನ ಸುಮಾರು 150 ಬೀಡಿ ಕಟ್ಟುತ್ತಾರೆ. ಮಾವನವರ ಆರೋಗ್ಯ ಚೆನ್ನಾಗಿಲ್ಲ. ಆಗಾಗ್ಗೆ ಅವರ ಶುಶ್ರೂಶೆಗೆ ಗಮನ ನೀಡಬೇಕು. ಇಲ್ಲವಾದರೆ 8 ರಿಂದ 9 ಗಂಟೆ ಬೀಡಿ ಕಟ್ಟಿದರೆ 300 ಬೀಡಿ ಕಟ್ಟಬಹುದು. ಇತರರು ಕಟ್ಟುತ್ತಾರೆ. ಪ್ರತಿದಿನ 4 ರಿಂದ 5 ತಾಸಿನಂತೆ ಒಂದು ತಿಂಗಳ ದುಡಿಮೆಯ ಶ್ರಮಕ್ಕೆ ಇವರಿಗೆ ಸಿಗುವ ಕೂಲಿ ಎಷ್ಟು ಗೊತ್ತೆ. 600 ರೂಪಾಯಿ. ದಿನಕ್ಕೆ 300 ರೂಪಾಯಿ ಬೀಡಿ ಕಟ್ಟುವವರು 1200 ರೂಪಾಯಿ ಗಳಿಸುತ್ತಾರೆ.

ಬೀಡಿಯೊಳಗೆ ತುಂಬುವ ಹೊಗೆಸೊಪ್ಪು ಕಡಿಮೆ ಬಿದ್ದರೆ ಕಾರ್ಮಿಕರ ಕೂಲಿಯಲ್ಲಿಯೇ ಕಡಿತ. ಇಂತಹ



ಹಲವು ಸಮಸ್ಯೆಗಳು ಬೇರೆ ಇವೆ. ಅಂದರೆ ಒಂದು ತಿಂಗಳು ಸತತ ಶ್ರಮ ವಹಿಸಿ ದುಡಿದರೂ ಬೀಡಿ ಕಾರ್ಮಿಕರು ತಿಂಗಳಿಗೆ ಒಂದು ಸಾವಿರ ರೂಪಾಯಿ ಗಳಿಸಬೇಕಾದರೆ ಸಾಕುಸಾಕಾಗುತ್ತದೆ.

ಇಂತಹ ಒಂದು ಕುಟುಂಬ ತಿಂಗಳಲ್ಲಿ ಆಹಾರಕ್ಕೆಂದು ಎಷ್ಟು ಖರ್ಚು ಮಾಡುತ್ತಿರಬಹುದು. ಅದೃಷ್ಟವಶಾತ್ ಈ ಕುಟುಂಬಕ್ಕೆ ಬಿಪಿಎಲ್ ಕಾರ್ಡ್ ಸಿಕ್ಕಿರುವುದರಿಂದ ಕೊಂಚ ನಿಟ್ಟುಸಿರು ಬಿಡುವಂತಾಗಿದೆ. ಎಷ್ಟೋ ಜನಕ್ಕೆ ಆ ಅವಕಾಶವೂ ಇಲ್ಲ. ರೇಷನ್ ಡಿಪೋನಲ್ಲಿ 3 ರೂಪಾಯಿಗೆ ಕೇ.ಜಿ.ಯಂತೆ 20 ಅಕ್ಕಿ, 3 ಕೆ.ಜಿ ಗೋಧಿ ದೊರೆಯುತ್ತದಂತೆ. ಸಕ್ಕರೆ ಲೆಕ್ಕವಾಗಿ ಸಿಗಬೇಕಾದದ್ದು 3 ಕೆ.ಜಿ., ಕೆ.ಜಿ.ಗೆ13 ರೂಪಾಯಿಯಂತೆ. ಆದರೆ ಅವರಿಗೆ ಸಿಗುವುದು ಒಂದೂ ಕಾಲು ಕೆ.ಜಿ, ಒಂದೂ ಮುಕ್ಕಾಲು ಕೆ.ಜಿ.... ಹೀಗೆ ಬಂದಷ್ಟು ಸಕ್ಕರೆಯನ್ನು ಕಾರ್ಡುದಾರರಿಗೆ ವಿಭಾಗಿಸಿ ಹಂಚುತ್ತಾರೆ. ರೇಷನ್, ಡಿಪೋದಲ್ಲಿ ತಿಂಗಳಿಗೆ ಒಂದುನೂರು ರೂ. ಖರ್ಚಾದರೆ ಇನ್ನು ದಿನಸಿ ಅಂಗಡಿಯಲ್ಲಿ ಬೇಳೆಕಾಳು, ಇತ್ಯಾದಿ ಆಹಾರಧಾನ್ಯ ಕೊಳ್ಳಲು ಕನಿಷ್ಟ 800 ರೂಪಾಯಿ ಖರ್ಚಾಗುತ್ತದೆ. ಇನ್ನು ತರಕಾರಿ ಕೊಳ್ಳಲು ಎಷ್ಟೇ ಕಡಿಮೆ ಎಂದರೂ 500 ರಿಂದ 600 ರೂಪಾಯಿ ಈ ದುಬಾರಿ ಬೆಲೆಗಳ ಕಾಲದಲ್ಲಿ ಬೇಕೇಬೇಕು. ಅಂದರೆ ಬೀಡಿ ಕಾರ್ಮಿಕರು ಇಡೀ ತಿಂಗಳು ದುಡಿಯುವ ಕೂಲಿ ಪುಟ್ಟ ಸಂಸಾರಕ್ಕೆ ಆಹಾರಧಾ[...] ಕೊಂಡುಕೊಳ್ಳಲು ಕೂಡ ಸಾಲುವುದಿಲ್ಲ. ತಿನ[...] ಅನ್ನಕ್ಕೆ ಈ ಪಾಟಿ ಖರ್ಚು ಮಾಡಬೇಕಾಗಿ ಬಂದ[...] ಔಷಧಿ ಮಾತ್ರೆ, ಬಟ್ಟೆಬರೆ, ಮಕ್ಕಳ, ಶಾಲಾಕಾಲೇ[...] ಶುಲ್ಕಗಳು, ಮೀನು ಮಾಂಸ, ಮನೆಬಾಡ[...] ಇದಕ್ಕೆಲ್ಲಾ ಏನು ಮಾಡುವುದು? ಹೇಗೆ ಸಂಸಾ[...] ನಿಬಾಯಿಸುವುದು ಎಂಬುದು ಒಂದು ದೊ[...] ಸವಾಲಾಗಿದೆ.

ಅಬ್ಬಬ್ಬ ಬೇಡ ಹಬ್ಬದ ಸಹವಾಸ

32 ವರ್ಷ ವಯಸ್ಸಿನ ರವಿಕುಮಾರ್ [...] ವರ್ಷಗಳಿಂದ ಪಂಚಾಯ್ತಿ ನೌಕರರಾಗಿದ್ದಾ[...] ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂ[...] ಶಿವಪುರ ಪಂಚಾಯ್ತಿಯಲ್ಲಿ ನೌಕರಿ. ನೀರಗಂ[...] 14 ವರ್ಷಗಳ ದುಡಿಮೆಯ ನಂತರ ಇವ[...] ವೇತನ ತಿಂಗಳಿಗೆ 2630.

ಒಬ್ಬ ವಯಸ್ಸಾದ ಅಜ್ಜಿ. ಹೆಂಡತಿ, ಇಬ್ಬ[...] ಮಕ್ಕಳು ಹೀಗೆ ಒಟ್ಟು 5 ಜನರ ಕುಟುಂಬವಿದ[...] ಈ ಕುಟುಂಬಕ್ಕೆ ರೇಷನ್ ಕಾರ್ಡೇ [...] ರೇಷನ್ ಕಾರ್ಡ್‌ನಲ್ಲಿ ಬಹುತೇಕ ಏ[...] ದೊರೆಯುವುದಿಲ್ಲ ಎಂಬ ಭಾವ[...] ಬಂದಿರುವುದರಿಂದ ಅದನ್ನು ಪಡೆಯ[...] ಇವರು ಮುಗಿಬಿದ್ದಿಲ್ಲ. ಎಲ್ಲವನ್ನು ಅಂಗಡಿಯಿಂ[...] ಕೊಂಡು ತರಬೇಕು. 5 ಜನರ ಕುಟುಂಬಕ್ಕೆ ಸಾಧಾರ[...] ಆಹಾರಧಾನ್ಯ ಖರೀದಿಗೆ ಎಷ್ಟಾಗಬಹುದ[...] ಯಾರಾದರೂ ಅಂದಾಜು ಮಾಡಬಹುದು. 26[...] ರೂಪಾಯಿ ಸಂಬಳವನ್ನು ಇಡಿಯಾಗಿ ಹಸಿ[...] ನೀಗಿಸಲು ಅಂತ ಕೊಡಬೇಕಾದ ಪರಿಸ್ಥಿತಿ. ಉಹ[...] ಆಗಲೂ ಹಸಿವು ನೀಗುವುದು ಕಷ್ಟ. ಹಾಗಿದ್ದರೆ ಇ[...] ಉಳಿದ ಅಗತ್ಯಗಳಿಗೆ ಏನು ಮಾಡಬೇಕು? ಒಂದ[...] ಲೆಕ್ಕದಲ್ಲಿ ರವಿಕುಮಾರರ ಬದುಕಾದರೂ ವಾಸಿ. ಇ[...] ಪಂಚಾಯ್ತಿಯಲ್ಲಿ ತಿಂಗಳು ತಿಂಗಳಿಗೆ ವೇತನವಾದರ[...] ಸಿಗುತ್ತದೆ. ಆದರೆ ಎಷ್ಟೋ ಪಂಚಾಯ್ತಿಗಳ[...] ಕೊಡುವ ವೇತನವೂ ನಿಕೃಷ್ಟ. ಅದು ಕೂಡ 6[...] 8 ತಿಂಗಳು ದೊರೆಯುತ್ತಿದ್ದಿಲ್ಲ. ಯುಗಾದಿಯೋ[...] ದೀಪಾವಳಿಯೋ ಯಾವುದಾದರೂ ಹಬ್ಬ ಬಂ[...] ಎಂದರೆ ಇವರು ಬೆಚ್ಚಿ ಬೀಳುತ್ತಾರೆ. [...] ಮಾಡುವುದು ಹೇಗೆ? ಅಥವಾ ಮಾಡದೇ ಬಿಡುವು[...] ಹೇಗೆ? ಇದು ರವಿಕುಮಾರರ ಸಂಕಟ. ಬಿಡಲಾಗದ[...] ಹಬ್ಬ ಎಂದುಕೊಂಡರೆ ಸಾಲದ ಹೊರೆ ಹೆಗಲಿ[...] ಏರಿತು ಅಂತಲೇ ಅರ್ಥ. ಜನರಿಗೆ ಹಬ್ಬ ಎಂದ[...] ಸಂಭ್ರಮ ಎನ್ನುವ ಬದಲಿಗೆ ಬೆಚ್ಚಿ ಬೀಳುವಂತಾದ[...] ಇಂತಹ ಬದುಕಿಗೆ ಏನು ಅರ್ಥ!!


ಯಾವ ಮೂಲೆಗೆ ಈ 'ಗೌರವಧನ'

ಬಳ್ಳಾರಿ ಜಿಲ್ಲೆಯ ನಾಗರತ್ನಮ್ಮ ಅಂಗನವಾ[...] ನೌಕರರು. ಹಲವಾರು ವರ್ಷಗಳ ಸೇವೆಯ ನಂತ[...] ಅವರಿಗೆ ತಿಂಗಳಿಗೆ ಸಿಗುವ ವೇತನ 255[...] ರೂಪಾಯಿ. ಅದು ಕೂಡ ಬಹಳ ಹೋರಾಟಗಳ[...] ನಂತರ ಗಳಿಸಿಕೊಂಡಿರುವುದು. ಈ ವೇತನದ[...] ಕೇಂದ್ರ ಸರ್ಕಾರ ಕೊಡುವುದು 1500 ರೂ. ಉಳಿದ[...] ರಾಜ್ಯ ಸರ್ಕಾರ ಕೊಡುವುದು. ಕೇಂದ್ರ ಸರ್ಕಾರ[...] ವೇತನ ಬಂದರೆ ರಾಜ್ಯ ಸರ್ಕಾರದ ವೇ[...] ಬಿಡುಗಡೆಯಾಗುವುದಿಲ್ಲ. ರಾಜ್ಯ ಸರ್ಕಾರದ ವೇತ[...] ಬಿಡುಗಡೆಯಾದರೆ ಕೇಂದ್ರದಿಂದ ವೇತ[...]

ದುಡಿದದ್ದೆಲ್ಲಾ ರೇಷನಂಗಡಿ ಗಲ್ಲಾ ಪೆಟ್ಟಿಗೆಗೆ

ಶ್ರೀನಿವಾಸ ಪೂಜಾರಿ ಕುಂದಾಪುರ ತಾಲ್ಲೂಕಿನ ಗಂಗೊಳ್ಳಿ ಸಮೀಪದ ನಾಯಕವಾಡಿ ನಿವಾಸಿ. ಕಟ್ಟಡ ನಿರ್ಮಾಣ ಕಾರ್ಮಿಕ. ನುರಿತ ಕೆಲಸಗಾರ ಆಗಿರುವುದರಿಂದ ದಿನಕ್ಕೆ 150 ರಿಂದ 160 ಕೂಲಿ ಸಿಗುತ್ತದೆ. ಆದರೆ ತಿಂಗಳಿಡಿ ಕೂಲಿ ದೊರೆಯುವ ಖಾತ್ರಿಯಿಲ್ಲ. ಸರಾಸರಿ ತಿಂಗಳಿಗೆ 20 ರಿಂದ 22 ದಿನ ಮಾತ್ರ ಕೆಲಸ. ಅನಾರೋಗ್ಯ ಮತ್ತೇನಾದರೂ ಆದರೆ ಆವತ್ತಿನ ಸಂಪಾದನೆಗೆ ಕತ್ತರಿಯೇ. ಇರಲಿ. 160 ರೂ. ಕೂಲಿಯಂತೆ 22 ದಿನಕ್ಕೆ ಲೆಕ್ಕ ಹಾಕಿದರೂ ತಿಂಗಳಿಗೆ ಈ ಕಾರ್ಮಿಕನ ಸಂಪಾದನೆ ತಿಂಗಳಿಗೆ 3,520 ರೂಪಾಯಿಗಳು ಮಾತ್ರ. ಶ್ರೀನಿವಾಸ್‌ರವರ ಕುಟುಂಬದಲ್ಲಿ ಒಟ್ಟು 8 ಜನ. ಗಂಡ ಹೆಂಡತಿ, ತಾಯಿ, ಇಬ್ಬರು ತಮ್ಮಂದಿರು, ಒಬ್ಬ ತಂಗಿ, ಇಬ್ಬರು ಮಕ್ಕಳು.

ಕುಟುಂಬಕ್ಕೆ ಸಿಕ್ಕಿರುವುದು ಎ.ಪಿ.ಎಲ್. ಕಾರ್ಡ್. ಬಿಪಿಎಲ್ ಕಾರ್ಡ್ ಕೊಟ್ಟಿಲ್ಲ. ಏಕೆಂದರೆ ಇವರು ಸರಕಾರದ ಮಾನದಂಡದಂತೆ ಬಡವರಲ್ಲ. ಬಡವರಲ್ಲದ ಈ ಕುಟುಂಬದ ಎಲ್ಲರಿಗೂ ಹೊಟ್ಟೆ ಇದೆ. ಅದು ಎಲ್ಲರಂತೆಯೇ ಇದೆ. ಎ.ಪಿ.ಎಲ್ ರೇಷನ್ ಕಾರ್ಡ್‌ನಲ್ಲಿ ಬಹುತೇಕ ಏನು ಸಿಗದು ಎಂಬುದು ಜೀವನಾನುಭವವಾಗಿರುವುದರಿಂದ ಇವರು ರೇಷನ್ ಡಿಪೋಗೆ ಹೋಗುವುದೇ ಇಲ್ಲ. ಅಂಗಡಿಯಲ್ಲಿ ಆಹಾರಧಾನ್ಯ ಖರೀದಿ ಮಾಡಿದರೆ ತಿಂಗಳಿಗೆ 8 ಜನರ ಈ ಕುಟುಂಬಕ್ಕೆ ಏನಿಲ್ಲವೆಂದರೂ 3000 ರೂಪಾಯಿ ಆಗುತ್ತದೆಯಂತೆ. ಇನ್ನು ತರಕಾರಿಗೆ ವಾರಕ್ಕೆ 350 ರಿಂದ 400 ರೂಪಾಯಿ ಬೇಕು. ಸಣ್ಣ ಮಕ್ಕಳಿರುವ ಮನೆ, ಹಾಲು, ಶಿಶು ಆಹಾರ ಅಂತ ತಿಂಗಳಿಗೆ ಅದಕ್ಕೂ ಒಂದಷ್ಟು ಖರ್ಚು ಇದೆ. ಇವೆಲ್ಲಾ ಸೇರಿದರೆ ಕುಟುಂಬದ ಹಸಿವು ನೀಗಲು ತಿಂಗಳಿಗೆ ಏನಿಲ್ಲೆಂದರು ಬರೋಬರಿ 4500 ರಿಂದ 5000 ರೂಪಾಯಿ ಬೇಕು. ಶ್ರೀನಿವಾಸ ಪೂಜಾರಿಯವರ ಇಡೀ ದುಡಿಮೆ ಅನ್ನಕ್ಕೆ ಬೇಕು ಮತ್ತು ಅದು ಸಾಲುವುದಿಲ್ಲ. ತಮ್ಮಂದಿರಿಬ್ಬರ ದುಡಿಮೆ ಅಷ್ಟಿಷ್ಟು ಜೊತೆಗೂಡುವುದರಿಂದ ಹೇಗೋ ಜೀವನ ದೂಡಿಕೊಂಡು ಮುಂದೆ ಸಾಗುತ್ತಿದೆ. ಆದರೆ ಬೆಳಿಗ್ಗೆ 8.30 ಕ್ಕೆ ಆರಂಭಿಸಿ ಸಂಜೆ ಸೂರ್ಯ ಮುಳುಗುವವರೆಗೆ ದುಡಿಯುವ ಈ ಕಟ್ಟಡ ಕಾರ್ಮಿಕ ತನ್ನ ಆತಂಕಕಾರಿಯಾದ ಭವಿಷ್ಯಕ್ಕಾಗಿ ಉಳಿಸುವುದೇನು? ಮಕ್ಕಳ ವಿದ್ಯಾಭ್ಯಾಸ, ಆರೋಗ್ಯಕ್ಕಾಗಿ ವೆಚ್ಚ ಮಾಡುವುದೇನು?





ಡುಗಡೆಯಾಗಿರುವುದಿಲ್ಲ. ಸಿಗುವುದೇ ನಿಕೃಷ್ಟ ೇತನ. ಅದನ್ನು ಪಡೆದುಕೊಳ್ಳಲೂ ಮುಗಿಲು ೋಡುತ್ತಾ ಕೂರುವ ಪರಿಸ್ಥಿತಿ ತಪ್ಪಿದ್ದೇ ಅಲ್ಲ.

ನಾಗರತ್ನಮ್ಮ ಅವರ ಕುಟುಂಬ ರೈತ ಕುಟುಂಬ. ದರೆ 'ವ್ಯವಸಾಯ ಮನೆ ಮಂದಿಯೆಲ್ಲಾ ಸಾಯ' ಬಂತಹ ಪರಿಸ್ಥಿತಿ ಹೆಚ್ಚಿನ ಕೃಷಿಕರದ್ದು. ಅದೂ ಳೆಯಾಶ್ರಿತ ಭೂಮಿ. ಈ ವರ್ಷ ಮೊದಲು ರ ಕಾಡಿತು. ಆಮೇಲೆ ಪ್ರವಾಹ ಬದುಕನ್ನು ಚ್ಚಿಹಾಕಿದೆ. ಇಂತಹ ಸ್ಥಿತಿಯಲ್ಲಿ ಅಂಗನವಾಡಿಯ 'ಗೌರವಧನ'ವನ್ನು ನಂಬಿಕೊಂಡು ಜನ ಾಡುವುದೇನು? ಕಿರಾಣಿ ಅಂಗಡಿಗೆ ತಿಂಗಳಿಗೆ ಬಿಟ್ಟು ಉಳಿದ ಪದಾರ್ಥಗಳಿಗೆ ಏನಿಲ್ಲವೆಂದರೂ 00 ಕೊಡಬೇಕು ಎನ್ನುತ್ತಾರೆ ನಾಗರತ್ನಮ್ಮ ಮತ್ತೆ ಯೇನು? ತರಕಾರಿಯೇನು? ಯಾವ ಮೂಲೆಗೆ 'ಗೌರವಧನ' ಎಂಬ ಪ್ರಶ್ನೆ ಅಂಗನವಾಡಿ ಕರರನ್ನು ದಿನದಿನವೂ ಕಾಡುವ ಒಂದು ಬ್ರಹತ್ ್ನೆ.



ಬಿಸಿಯೂಟ-ಟೈಲರಿಂಗ್ ಎರಡು ದುಡಿಮೆಯೂ ಸಾಲದು

ಅಕ್ಷರ ದಾಸೋಹದ ನೌಕರರಾಗಿ ದುಡಿಯುತ್ತಿರುವ ಸಿದ್ದಮ್ಮರವರಿಗೆ 40 ವರ್ಷ. ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಇಳಕಲ್‌ನ ಸರ್ಕಾರಿ ಶಾಲೆಯಲ್ಲಿ ಅವರು ಮಕ್ಕಳಿಗೆ ಬಿಸಿಯೂಟ ಬಡಿಸುವವರಾಗಿದ್ದಾರೆ. 400 ಮಕ್ಕಳಿಗೆ ನಿತ್ಯ ಊಟ ಬಡಿಸುವುದು ಸುಮ್ಮನೆ ಏನಲ್ಲ. ಪ್ರತಿದಿನ 6 ರಿಂದ 7 ಗಂಟೆಗಳ ಶ್ರಮ. 2 ಸಹಾಯಕಿಯರಿದ್ದಾರೆ. ತಿಂಗಳಿಗೆ 800 ರೂಪಾಯಿ ಮಾತ್ರ ವೇತನ. ಆರೇಳು ಗಂಟೆ ಅಡುಗೆ ಮಾಡಿ ಬಡಿಸಿ ಬಂದ ಮೇಲೆ ಬೇರೇನಾದರೂ ಉದ್ಯೋಗ ಮಾಡಲು ತ್ರಾಣ ಉಳಿದಿರುತ್ತದೆಯೇ? ಕಷ್ಟ. ಏಕೆಂದರೆ ಅಂತಹ ಪೌಷ್ಟಿಕ ಆಹಾರವನ್ನಾದರೂ ಪಡೆಯಲು ಈ ವೇತನದಲ್ಲಿ ಸಾಧ್ಯವೇ? ಆದರೆ ಹೊಟ್ಟೆ ಕೇಳುವುದಿಲ್ಲ. ಸಂಸಾರದ ಬಾರ ಹೊರಲೇಬೇಕು. ಹೀಗಾಗಿ ಸಿದ್ದಮ್ಮ ಉಳಿದ ಸಮಯ್ಯದಲ್ಲಿ ಟೈಲರಿಂಗ್ ಕೆಲಸ ಮಾಡುತ್ತಾರೆ. ಹೇಗೋ ಬದುಕಿನ ಬಂಡಿ ಎಳೆಯಬೇಕು. ಎಳೆಯುತ್ತಾ ಬದುಕು ಸಾಗಿಸುತ್ತಿದ್ದಾರೆ. ಶಾಲಾ ಮಕ್ಕಳಿಗೆ ಬಿಸಿಯೂಟ ಮಾಡಿ ಬಡಿಸುವ ಸಿದ್ಧಮ್ಮನ ಮನೆಯಲ್ಲಿ ಮಕ್ಕಳು ಅರೆಹೊಟ್ಟೆ ಉಣ್ಣಬೇಕಾದ ಪರಿಸ್ಥಿತಿ. ಇವರ ಪುಟ್ಟ ಕುಟುಂಬಕ್ಕೆ ಕನಿಷ್ಟ ರೇಷನ್‌ಗೆ 1500 ರೂ ಆದರೂ ಬೇಕು ಅನ್ನುತ್ತಾರೆ ಅವರು.

ಸಿದ್ದಮ್ಮ ಅವರಿಗಾದರೂ 800 ರೂಪಾಯಿ ವೇತನ ಸಿಗುತ್ತದೆ. ಆದರೆ ಸಹಾಯಕಿಯರಿಗೆ ಅಷ್ಟೂ ಇಲ್ಲ. ತಿಂಗಳಿಗೆ ಕ್ರಮವಾಗಿ 650, ಒಬ್ಬರಿಗೆ 500 ರೂ ಮಾತ್ರ ವೇತನ. ಇನ್ನು ಅವರು ಬದುಕುವುದು ಹೇಗೆ? ತಿನ್ನುವುದು ಏನು? ಹೊಟ್ಟೆಯ ಮೇಲೆ ತಣ್ಣೀರಬಟ್ಟೆ.

ರಟ್ಟೆಯನ್ನೇ ನಂಬಿ ಬದುಕುವ ಈ ಜನ ಈಗ ಹೋರಾಟದ ಬಾವುಟ ಎತ್ತಿದ್ದಾರೆ. ಯಾವುದೇ ಕೆಲಸ ಇರಲಿ ಕನಿಷ್ಟ 6000 ವೇತನ ಸಿಗಬೇಕು. ಬಿಬಿಎಂಪಿ ವ್ಯಾಪ್ತಿಯಲ್ಲಿ 10000 ಸಿಗಬೇಕು. ಸಂಘರ್ಷ ಸಾಗಿದೆ.

ಮೂಟೆ ಎಷ್ಟೊಂದು ಭಾರ, ಕೂಲಿ ಎಷ್ಟೊಂದು ಹಗುರ

ನಾಗಪ್ಪ ನಾಯಕ್ ಉತ್ತರಕನ್ನಡ ಜಿಲ್ಲೆಯ ಶಿರಸಿಯಲ್ಲಿ ಅಡಿಕೆ ಮಂಡಿಯಲ್ಲಿ ಹಮಾಲಿ ಕೆಲಸ ಮಾಡುವ ಕಾರ್ಮಿಕರು. ಅಂದರೆ ಮಂಡಿಗೆ ಬರುವ ಮೂಟೆಗಳನ್ನು ಹೊತ್ತು ಹಾಕುವುದು. ನಾಗಪ್ಪ ನಾಯಕ್ ದಿನಕ್ಕೆ ಸರಾಸರಿ 10 ಗಂಟೆ ಕೆಲಸ ಮಾಡುತ್ತಾರಂತೆ. ಅಂದರೆ ಸುಮಾರು 200 ರಿಂದ 300 ಚೀಲಗಳನ್ನು ಇಳಿಸುವ ಎತ್ತಿಹಾಕುವ ಕೆಲಸ. ಚೀಲದ ತೂಕ 10, 20 ಕೆ.ಜಿ.ಯಿಂದ ಆರಂಭಿಸಿ 110, 115 ಕೆ.ಜಿ. ಇರುವುದೂ ಇದೆ. ಶೇ.80 ರಷ್ಟು ಚೀಲಗಳು ಸುಮಾರು 80 ಕೆ.ಜಿಯ



ಚೀಲಗಳು. ಇಷ್ಟು ಕೆಲಸ ಮಾಡಿದರೆ ಇಷ್ಟು ತೂಕ ಹೊತ್ತರೆ, ಅಭ್ಯಾಸವಿಲ್ಲದ ಜನರಿಗೆ ಮೈ ಮೂಳೆಗಳು ಲಟಲಟ ಎಂದು ಮುರಿಯಬಹುದೇನೋ.

ಇಷ್ಟು ಶ್ರಮಕ್ಕೆ ಇವರಿಗೆ ದಿನಕ್ಕೆ ದೊರೆಯುವ ಕೂಲಿ 100 ರಿಂದ 150 ರೂಪಾಯಿ. ಅದು ಕೂಡ ನಿಗದಿಯಾಗಿ ಇಷ್ಟೇ ಎಂದು ಹೇಳುವಂತಿಲ್ಲ. ಹಮಾಲಿ ಮಾಡುವುದು ಹೆಂಗಸಾದರೆ 50 ರೂಪಾಯಿ ಮಾತ್ರ ಕೂಲಿ. ಆಯಾಯ ಕೆಲಸದ ತೂಕದ ಆಧಾರದಲ್ಲಿ ನೀಡಲಾಗುವ ತುಂಡು ಹಮಾಲಿ ಪದ್ಧತಿಯೂ ಹಲವೆಡೆ ಚಾಲ್ತಿಯಲ್ಲಿದೆ. ಅದೇನಿದ್ದರೂ ಕೂಲಿಯಲ್ಲಿ ಬಹಳ ವ್ಯತ್ಯಾಸವೇನೂ ಆಗಲಾರದು.

ಕೇವಲ 2 ವರ್ಷಗಳ ಹಿಂದೆ ಕೆ.ಜಿ.ಗೆ 26 ರಿಂದ 28 ರೂ ಇದ್ದ ಹೆಸರು ಬೇಳೆಗೆ ಈಗ ಬೆಲೆ ಕೆ.ಜಿಗೆ 84.00 (17 ನವೆಂಬರ್ 2009 ರಂದು) ಅಕ್ಕಿ, ಬೇಳೆಕಾಳು ಎಲ್ಲಾ ಆಹಾರಧಾನ್ಯಗಳ ಕತೆಯೂ ಹೀಗೆ ಇದೆ. ಇಂತಹ ಪರಿಸ್ಥಿತಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಕೂಲಿ ಹೆಚ್ಚದೇ ಹೋದರೆ ನಾವು ಬದುಕುವುದು ಹೇಗೆ ಎಂದು ಪ್ರಶ್ನಿಸುತ್ತಾರೆ ನಾಗಪ್ಪ ನಾಯ್ಕ.

ಎಪಿಎಂಸಿಯಲ್ಲಿ ಕೆಲಸ ಮಾಡುವ ಹಮಾಲರಿಗೆ ಎಪಿಎಂಸಿಗೆ ಬರುವ ದವಸ ಧಾನ್ಯಗಳಿಗೆ 1 ಕ್ವಿಂಟಾಲ್ ತೂಕ ಹೊರಲು 5 ರೂ ಕೂಲಿ ನೀಡಲಾಗುವುದಂತೆ. ಅಂದರೆ ಒಂದು ದಿನಕ್ಕೆ 100 ರೂ ಸಂಪಾದಿಸಬೇಕಾದರೆ 2 ಟನ್ ಬಾರ ಹೊರಬೇಕು. (2000 ಕೆ.ಜಿ) ಖರೀದಿದಾರರಿಂದ ಹಮಾಲಿಗಳಿಗೆ ಪ್ರತಿ ಕ್ವಿಂಟಾಲ್‌ಗೆ ಕೊಡಬೇಕೆಂದಿರುವ ತಲಾ 2 ರೂ. ಕೂಲಿ ಹಣ ಯಾರಿಗೂ ದೊರೆಯುತ್ತಲೇ ಇಲ್ಲವಂತೆ.

ಶ್ರಮಿಕರಾದ ಹಮಾಲಿಗಳ ಬೆನ್ನ ಮೇಲಿನ ತೂಕ ಎಷ್ಟೊಂದು ಭಾರ! ಆದರೆ ಅವರ ಕೈಗೆ ದಕ್ಕುವ ಕೂಲಿ ಎಷ್ಟೊಂದು ಹಗುರ!!

2 ಮಕ್ಕಳು ಸೇರಿದಂತೆ 4 ಜನರ ಕುಟುಂಬವನ್ನು ಈ ಕೂಲಿಯಲ್ಲಿ ಸಾಕುವುದು ಹೇಗೆ? 800 ರೂ ಬಾಡಿಗೆ ಕಟ್ಟಿ ವಿದ್ಯುತ್ ಬಿಲ್ಲು 250 ರೂ. ಕಟ್ಟಿ. ಬಟ್ಟೆ ಬರೆ, ಶಾಲೆಯ ಫೀಸು, ಆಸ್ಪತ್ರೆ ಖರ್ಚು ಇತ್ಯಾದಿ ಇತ್ಯಾದಿ ಹೊಂದಿಸುವುದು ಹೇಗೆ ಎಂಬುದು ನಾಗಪ್ಪ ನಾಯಕ್ ಕುಟುಂಬದ ದೈನಂದಿನ ಜಂಜಡ.

ಸಂಸಾರವನ್ನು ತೂಗಿಕೊಂಡು ಹೋಗುವುದು ಹಗ್ಗದ ಮೇಲಿನ ನಡಿಗೆಯಂತೆ. ಇನ್ನೊಂದು ಬಗೆಯಲ್ಲಿ ಹೇಳುವುದಾದರೆ ದೊಂಬರಾಟ.

ಆರೆಸ್ಸೆಸ್-ಬಿಜೆಪಿ ಹೊಲಸುಮುಖ...

7 ರಿಂದ

ಬಪತ್ಯದಲ್ಲಿರುವ ಪಾರ್ಲಿಮೆಂಟು, ಅಸೆಂಬ್ಲಿ ತ್ತು ಸರ್ಕಾರಗಳು ಬಂಡವಾಳಗಾರರ ಂಬೆಗಳಾಗುವುದು ನಿಶ್ಚಯ. ಇಂತಹ ಸ್ಥಿತಿಯಲ್ಲಿ ್ಟಕದ ಸರ್ಕಾರ ಅದನ್ನು ನಡೆಸುತ್ತಿರುವ .ಪಿ ಮತ್ತು ಸರ್ಕಾರದ ನಾಯಕತ್ವವನ್ನು ಕೊಂಡಿರುವ ಮುಖ್ಯಮಂತ್ರಿ ಯಡಿಯೂರಪ್ಪ ರಾಜ್ಯವನ್ನು ಎಂತಹ ಸ್ಥಿತಿಗೆ ತೆಗೆದುಕೊಂಡು ಗಬಹುದೆಂದು ಊಹಿಸಿ ಕೊಂಡರೆ ಭವಿಷ್ಯ ಅಪಾಯಕಾರಿ ಯಾಗಿದೆ ಎಂಬುದು ುತ್ತದೆ.

ಗ ಬಿ.ಜೆ.ಪಿ. ಮುಖ್ಯಮಂತ್ರಿ ಯಡಿಯೂರಪ್ಪ ಬಫೂನ್‌ತರ ಕಾಣುತ್ತಿದ್ದಾರೆ. ಆದರೆ ಅವರಿಗೆ ... ಮುಖ್ಯಮಂತ್ರಿಯಾಗಿ ಯಾವ ಅಧಿಕಾರವೂ ಉಳಿದಿಲ್ಲ. ಕಡೆಗೆ ಒಬ್ಬ ಐ.ಎ.ಎಸ್. ಅಧಿಕಾರಿಯನ್ನು ಸ್ವತಂತ್ರವಾಗಿ ವರ್ಗಾವಣೆ ಮಾಡುವ ಅಧಿಕಾರವೂ ಇಲ್ಲ. ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುವ ಅಧಿಕಾರವೂ ಇಲ್ಲಾ ಅಂದರೆ ಆಡಳಿತ ಏನಾಗುತ್ತದೆ. ಇಂದು ಕರ್ನಾಟಕದಲ್ಲಿ ಯಾವ ಅಧಿಕಾರಿಗೂ ಮುಕ್ತವಾಗಿ ಆಡಳಿತ ನಡೆಸುವ ಶಕ್ತಿ ಮತ್ತು ಅವಕಾಶ ಇಲ್ಲ. ಇಂತಹ ಸ್ಥಿತಿಯಲ್ಲಿ ಜನರ ಸ್ಥಿತಿ ಏನಾಗುತ್ತದೆ ಎಂಬುದೆ ಒಂದು ದೊಡ್ಡ ಪ್ರಶ್ನೆಯಾಗಿದೆ. ಇನ್ನೂ ಅಭಿವೃದ್ಧಿಯ ಪಶ್ನೆಯಂತ್ತೂ ಶೂನ್ಯ. ಇದೆಲ್ಲವು ಮುಗಿಯಿತು. ಇನ್ನು ಮುಂದೆಯಾದರು ಕರ್ನಾಟಕದಲ್ಲಿನ ಬಿ.ಜೆ.ಪಿ.ಯಲ್ಲಿನ ಭಿನ್ನಮತ ಮುಗಿಯಿತೆ? ಖಂಡಿತಾ ಇಲ್ಲಾ, ಭಿನ್ನಮತದ ಒಂದು ಅಂಶವು ಬಗೆಹರಿದಿಲ್ಲಾ, ಯಾರೆಲ್ಲಾ ಶಾಸಕರು ಯಾವ ಕಾರಣಕ್ಕಾಗಿ ಭಿನ್ನಮತೀಯರಾಗಿದ್ದರೋ ಅವರ ಬಹುತೇಕ ಬೇಡಿಕೆಗಳು ಈಡೇರಿಲ್ಲ. ಬದಲಿಗೆ ಜನಾರ್ದನರೆಡ್ಡಿ ಮತ್ತವರ ಬೇಡಿಕೆಗಳು ಕೆಲವು ಈಡೇರಿವೆ. ಇಲ್ಲಿ ಬಹಳ ಮುಖ್ಯವಾಗಿ ಗಮನಿಸಬೇಕಾದಂತಹ ವಿಷಯ ಯಾವ ಯಾವ ಶಾಸಕರು ಜನಾರ್ದನರೆಡ್ಡಿ ಜೊತೆಗೂಡಿದ್ದರೋ ಅವರೆಲ್ಲರು ಜನಾರ್ದನರೆಡ್ಡಿ ಮುಂದಿನ ಎಲ್ಲಾ ಬೇಡಿಕೆಗಳನ್ನು ಈಡೇರಿಸಿಲಿಕ್ಕಾಗಿ ಅವರ ಜೊತೆ ಹೋಗಿರಲಿಲ್ಲ. ಬದಲಿಗೆ ತಮ್ಮದೆ ಆದಂತಹ ಪ್ರಮುಖ ಬೇಡಿಕೆಗಳಿದ್ದವು ಅವು ಯಾವುದು ಬಗೆಹರಿದಿಲ್ಲಾ. ಕೆಲವರಿಗೆಲ್ಲಾ ಮಂತ್ರಿಯಾಗಬೇಕು, ನಿಗಮದ ಅಧ್ಯಕ್ಷರಾಗಬೇಕು, ತಮ್ಮ ಹಲವು ವೈಯಕ್ತಿಕ ಬೇಡಿಕೆಗಳು ಎಲ್ಲವೂ ಹಾಗೆ ಇವೆ. ಆದರಿಂದ ಭಿನ್ನ ಮತ ಮುಗಿದಿಲ್ಲ. ಬೂದಿ ಮುಚ್ಚಿದ ಕೆಂಡದ ರೀತಿಯಲ್ಲಿದೆ. ಇನ್ನು ಸಮನ್ವಯ ಸಮಿತಿಯೊಂದು ರಚನೆಯಾಗಿದೆ, ಈ ಸಮನ್ವಯ ಸಮಿತಿ ರಚನೆ ಆಗಿರುವುದೆ ಒಂದು ವಿಪರ್ಯಾಸ. ಒಂದೇ ಪಕ್ಷದ ಸರ್ಕಾರವಿದ್ದು ಸಮನ್ವಯ ಸಮಿತಿ ರಚನೆಯಾಗಿದೆ ಎಂದರೆ ಭಿನ್ನಮತ ಜೀವಂತವಿದೆ ಎಂಬುದಕ್ಕೆ ನಿದರ್ಶನ. ಸಮನ್ವಯ ಸಮಿತಿ ರಚನೆ ಆಗಿದೆ ಎಂದರೆ, ಸಭಾನಾಯಕ ಮತ್ತು ಮುಖ್ಯಮಂತ್ರಿಗೆ ಯಾವುದೇ ಪರಮೋಚ್ಚ ಅಧಿಕಾರ ಇಲ್ಲವೆಂದೇ ಅರ್ಥ. ಪರಮೋಚ್ಚ ಅಧಿಕಾರ ಕಳೆದುಕೊಂಡ ಮುಖ್ಯಮಂತ್ರಿಯೊಬ್ಬ ರಾಜ್ಯದ ಅಧಿಕಾರವನ್ನು ನಡೆಸಲಾರ ಮತ್ತು ರಾಜ್ಯದ ಅಭಿವೃದ್ಧಿಯಂತೂ ಸಾಧ್ಯವಿಲ್ಲ. ಹಾಗಾಗಿ ಕರ್ನಾಟಕದ ಭವಿಷ್ಯವಂತು ಅಂಧಕಾರದಲ್ಲಿ ಸಿಕ್ಕಿಹಾಕಿಕೊಂಡಿದೆ. ಅಧಿಕಾರಕ್ಕೆ ಬಂದು ಇನ್ನು ಎರಡು ವರ್ಷಗಳು ಪೂರ್ತಿಯಾಗದೆ ಕರ್ನಾಟಕಕ್ಕೆ ಇಂತಹ ದುಸ್ಥಿತಿಯನ್ನು ತಂದ ಬಿ.ಜೆ.ಪಿ. ಗೆ ಅಧಿಕಾರ ಕೊಟ್ಟಿದ್ದು ತಮ್ಮ ತಪ್ಪೆಂದು ಕರ್ನಾಟಕದ ಜನತೆ ಹೇಳಲಾರಂಬಿಸಿದ್ದಾರೆ. ಇದರಿಂದಾಗಿ ಇನ್ನು ಮುಂದೆ ಕರ್ನಾಟಕದ ಜನತೆ "ತಪ್ಪು ನಿಂದಲ್ಲಾ ಯಡಿಯೂರಪ್ಪ ಮತ ಕೊಟ್ಟು ನಿನ್ನನ್ನು ಗೆಲ್ಲಿಸಿದ್ದು ನಮ್ಮ ತಪ್ಪು" ಎಂದು ಹೇಳಲಾರಂಭಿಸಿದ್ದಾರೆ.

ಅನ್ನಕ್ಕಾಗಿ ಪರದಾಡುತ್ತಿರುವ ನೆರೆ ಸಂತ್ರಸ್ತರು

ಪ್ರವಾಹ ಪರಿಹಾರ, ಪುನರ್ವಸತಿಯ ಕುರಿತ ಮಾತು ಬರಿ ಟಿ.ವಿ., ಪತ್ರಿಕೆಗಳಲ್ಲಿ ಕೇಳಿ ಬರುತ್ತಿದೆ. ಆದರೆ ನಿಜಕ್ಕೂ ನೊಂದವರ ಗೋಳನ್ನು ಕೇಳಿ ಸಂತೈಸುವುದರಲ್ಲಿ ಸರ್ಕಾರದ ಆಡಳಿತ ಯಂತ್ರವನ್ನು ಇಳಿಸಲು ಆಗಿಲ್ಲ. ಹೀಗಾಗಿ ಜನರ ಪರದಾಟಕ್ಕೆ ಕೊನೆಯಿಲ್ಲ.

ನಿತ್ಯಾನಂದಸ್ವಾಮಿ

ಕೇಳಿದ ಹಲವು ದಶಕಗಳಿಂದ ಕಂಡರಿಯದಂತಹ ಭಾರೀ ಮಳೆಯಿಂದಾಗಿ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಜನ ಮತ್ತು ಜಾನುವಾರುಗಳು ಸತ್ತಿರುವುದು, ಲಕ್ಷಾಂತರ ಮನೆಗಳು ನೆಲಸಮವಾದದ್ದು ಈಗ ಇತಿಹಾಸ. ಕೊಯ್ಲಿಗೆ ಸಿದ್ಧವಾದ ಬೆಳೆಗಳು ನಾಶವಾಗಿವೆ. ಕಷ್ಟಕಾಲಕ್ಕೆಂದು ಜನರು ಸಂಗ್ರಹಿಸಿಟ್ಟ ಆಹಾರಧಾನ್ಯಗಳು ನೀರುಪಾಲಾಗಿವೆ. ಈ ಅನಿರೀಕ್ಷಿತ ಅನಾಹುತದಿಂದ ಎಲ್ಲವನ್ನೂ ಕಳೆದುಕೊಂಡು ಕಂಗೆಟ್ಟ ನಿರಾಶ್ರಿತರಿಗೆ ಆದ ತೊಂದರೆಯನ್ನು ನಿಭಾಯಿಸುವಲ್ಲಿ ಯಡಿಯೂರಪ್ಪ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಇದಕ್ಕೂ ಪೂರ್ವದಲ್ಲಿ ಉತ್ತರ ಕರ್ನಾಟಕದ ಬಹುತೇಕ ಇವೇ ಜಿಲ್ಲೆಗಳಲ್ಲಿ ವ್ಯಾಪಕವಾದ ಬರ ತಲೆದೋರಿದಾಗಲೂ ಬರಪೀಡಿತ ಪ್ರದೇಶಗಳ ಜನರ ನೆರವಿಗೆ ಧಾವಿಸಲು ಸರ್ಕಾರ ವಿಫಲವಾಗಿತ್ತು. ಯಡ್ಡಿ ಬಣ ಮತ್ತು ರೆಡ್ಡಿ ಬಣಗಳಾಗಿ ಹೋಳಾದ ಈ ಸರ್ಕಾರಕ್ಕೆ ನೆರೆ, ಬರಗಳಿಂದ ಕಂಗಾಲಾದ ಜನಗಳ ಗೋಳು ಕಾಣಲೇ ಇಲ್ಲ. ಸ್ವಹಿತಕ್ಕಾಗಿ, ಸ್ವಜನಹಿತಕ್ಕಾಗಿ ರಾಜಕೀಯದಲ್ಲಿರುವ ಯಡ್ಡಿ ಬಣ ಮತ್ತು ತಮ್ಮ ಅಕ್ರಮ ದಂಧೆಯ ರಕ್ಷಣೆಗಾಗಿ ರಾಜಕೀಯಕ್ಕೆ ಬಂದಿರುವ ಬಳ್ಳಾರಿ ರೆಡ್ಡಿಗಳ ಬಣಗಳ ನಡುವೆ ಅಧಿಕಾರ ಮೇಲುಗೈಗಾಗಿ ನಡೆದ ಕಿತ್ತಾಟದಿಂದಾಗಿ ನೆರೆ ಸಂತ್ರಸ್ತರು ಒಪ್ಪತ್ತಿನ ಗಂಜಿಗಾಗಿ



ಪರದಾಡುವಂತಾಯಿತು. ಸಂತ್ರಸ್ತರಿಗಾಗಿ ರಾಜ್ಯದ ಜನತೆ ನೀಡಿದ ಪರಿಹಾರ ಸಾಮಗ್ರಿಗಳನ್ನು ಹಾಗೂ ಸರ್ಕಾರದ ಮೂಲಕ ಬಂದ ಹಣವನ್ನು ದೋಚಲು ಆಡಳಿತರೂಢ ಬಿಜೆಪಿ ಪಕ್ಷದ ಪುಡಾರಿಗಳು ಮಾಡಿದ ಕಸರತ್ತುಗಳನ್ನು ಗಮನಿಸಿದ ಸಂತ್ರಸ್ತರು ಈ ಪಕ್ಷದ ಬಗ್ಗೆ ಅಸಹ್ಯ ಪಡುವಂತಾಯಿತು.

ಆರಂಭದ ಒಂದೆರಡು ದಿನ ಸಂತ್ರಸ್ತರಿಗೆ ಅಕ್ಕಿ, ಬೇಳೆ, ಅಡುಗೆ ಎಣ್ಣೆ ವಿತರಿಸುವ 'ಶಾಸ್ತ್ರ' ನಡೆಯಿತು.. ಅಗತ್ಯ ವಸ್ತುಗಳ ವಿತರಣೆಯಲ್ಲಿ ತಾರತಮ್ಯ, ದಲಿತರ ಕೇರಿಗಳಿಗೆ ಅಗತ್ಯ ವಸ್ತುಗಳು ತಲುಪಲೇ ಇಲ್ಲ. ಅಲ್ಪಸಂಖ್ಯಾತ ಮುಸಲ್ಮಾನರೇ ಅಧಿಕ ಸಂಖ್ಯೆಯಲ್ಲಿರುವ ಗ್ರಾಮಗಳಿಗೆ ಇವುಗಳ ವಿತರಣೆ ಆಗಲೇ ಇಲ್ಲ. ಆಹಾರ ಪೊಟ್ಟಣಗಳ ವಿತರಣೆಯಲ್ಲಿಯು ಅದಕ್ಷತೆ ಮತ್ತು ಭ್ರಷ್ಟಾಚಾರ ಎದ್ದುಕಾಣುತ್ತಿತ್ತು.

ಸಾರ್ವಜನಿಕ ಒತ್ತಾಯಕ್ಕೆ ಮಣಿದು ಸರ್ಕಾರ ನೂರಾರು ಗಂಜಿಕೇಂದ್ರಗಳನ್ನು ತೆರೆಯಿತು. ಆದರೆ ಅವುಗಳು ಹೆಚ್ಚು ದಿನ ಕಾರ್ಯ ನಿರ್ವಹಿಸಲಿಲ್ಲ. ಅಲ್ಲಿಯೂ ಅಧಿಕಾರಿಗಳ ಅದಕ್ಷತೆ, ಗಂಜಿ ಕೇಂದ್ರಗಳಲ್ಲಿ ಆಶ್ರಯ ಪಡೆದಿದ್ದ ಸಂತ್ರಸ್ತರನ್ನು ಭಿಕ್ಷುಕರಿಗಿಂತಲೂ ಕಡೆಯಾಗಿ ನೋಡಿಕೊಳ್ಳಲಾಯಿತು. ಶುದ್ಧ ಕುಡಿಯುವ ನೀರಿನ ಪೂರೈಕೆಯನ್ನು ಸಹ ಮಾಡಲಾಗಿರಲಿಲ್ಲ. ನೊಂದ ನಿರಾಶ್ರಿತರು ಕುಸಿದು ಬಿದ್ದ ತಮ್ಮ ಮನೆಗಳನ್ನೇ ಹುಡುಕಿಕೊಂಡು ತಮ್ಮ ಗ್ರಾಮಗಳಿಗೆ ಹಿಂತಿರುಗಬೇಕಾಯಿತು.

ಆಹಾರ - ಸಮಸ್ಯೆ

ಮನೆಗಳನ್ನು ಕಳೆದುಕೊಂಡವರಿಗೆ ತಕ್ಷಣದ ಪರಿಹಾರ ಒದಗಿಸುವ ವಿಷಯದಲ್ಲಿಯೂ ವ್ಯಾಪಕವಾದ ಭ್ರಷ್ಟಾಚಾರ ಮತ್ತು ತಾರತಮ್ಯ ಎಸಗಲಾಗಿದೆ ಪರಿಹಾರ ನೀಡುವ 'ಪಕ್ಕಾ ಮನೆ' ಮತ್ತು 'ಕಚ್ಚಾ' ಮನೆ ಎಂದು ತಾರತಮ್ಯ ಮಾಡಲಾಗುತ್ತಿದೆ. ಮನೆಗಳ ಪುನರ್ ನಿರ್ಮಾಣದ ಕಾರ್ಯವಾಗಲಿ, ಪ್ರವಾಹಕ್ಕೆ ಸಿಕ್ಕಿಕೊಂಡ ಗ್ರಾಮಗಳನ್ನು ಸ್ಥಳಾಂತರಿಸುವ ಕಾರ್ಯ ಆಮೆ ವೇಗದಿಂದ ನಡೆಯುತ್ತಿದ್ದು ಸರ್ಕಾರದೊಳಗಿನ ಬಿಕ್ಕಟ್ಟು ಒಳಗೊಳಗೆ ಮುಂದುವರೆಯುತ್ತಿರುವುದರಿಂದ ಸಂತ್ರಸ್ತರ ಪರಿಹಾರ ಪುನರ್ವಸತಿ ಕಾರ್ಯ ಸದ್ಯದಲ್ಲಿ ಚುರುಕಾಗುವ ಲಕ್ಷಣಗಳಿಲ್ಲ. ಆಹಾರವೇ ಸಂತ್ರಸ್ತರ ತುರ್ತು ಸಮಸ್ಯೆಯಾಗಿದೆ. ಯಾರಾದರೂ ಆಪತ್ಬಾಂಧವರು ಬಂದು ತಮಗೆ ಒಂದಿಷ್ಟು ಆಹಾರವನ್ನು ಕೊಡುವರೇ' ಎಂಬ ನಿರೀಕ್ಷೆಯಲ್ಲಿ ಇವರು ಕಾಲ ಕಳೆಯುತ್ತಿದ್ದಾರೆ. ಅಗತ್ಯ ವಸ್ತುಗಳ ಬೆಲೆಗಳು ನಾಗಾಲೋಟದಿಂದ ಏರುತ್ತಿರುವುದು ಇವರ ಸಂಕಷ್ಟಗಳನ್ನು ಇಮ್ಮಡಿಗೊಳಿಸಿದೆ. ಸರ್ಕಾರ ಈ ಜನರಿಗೆ ಕನಿಷ್ಠ 6 ತಿಂಗಳಿಗೆ ಆಗುವಷ್ಟು ಆಹಾರ ಪದಾರ್ಥಗಳನ್ನು ಒದಗಿಸಿ ಅವರನ್ನು ಹಸಿವಿನ ದವಡೆಯಿಂದ ಪಾರು ಮಾಡುವುದು ಅತ್ಯಗತ್ಯವಾಗಿದೆ. ಅದೇ ಸಮಯದಲ್ಲಿ ಎಲ್ಲಾ ಪುನರ್ವಸತಿ ಕಾಮಗಾರಿಗಳನ್ನು ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ನಿರ್ವಹಿಸಿ ಸಂತ್ರಸ್ಥರಿಗೆ ಉದ್ಯೋಗವನ್ನು ಒದಗಿಸಬೇಕಾಗಿದೆ. ಬಿಜೆಪಿಯೊಳಗಿನ ಕಿತ್ತಾಟದಿಂದಾಗಿ ಸರ್ಕಾರಿ ಇಲಾಖೆಗಳಲ್ಲಿ ಭ್ರಷ್ಟಾಚಾರ ಭುಗಿಲೆದ್ದಿದೆ. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಲಭ್ಯವಿರುವ ಹಣವನ್ನು ಕೊಳ್ಳೆ ಹೊಡೆಯಲು ಅಧಿಕಾರಿಗಳು, ಗುತ್ತಿಗೆದಾರರು ಮತ್ತು ಬಿಜೆಪಿ/ಕಾಂಗ್ರೆಸ್ ಪುಡಾರಿಗಳು ಒಂದಾಗಿದ್ದಾರೆ. ಬಲವಾದ ಜನ ಚಳುವಳಿಯ ಮೂಲಕ ಮಾತ್ರ ಈ ಅನಾಹುತವನ್ನು ತಡೆಗಟ್ಟಬಹುದಾಗಿದೆ. ನೆರೆ ಸಂತ್ರಸ್ತರಿಗೆ ಕನಿಷ್ಟ ಬದುಕಿ ಉಳಿಯಲು ಬೇಕಾಗಿರುವ ಆಹಾರಧಾನ್ಯಗಳನ್ನು ಮತ್ತು ಅಗತ್ಯ ವಸ್ತುಗಳನ್ನು ಸರ್ಕಾರ ಪೂರೈಸುವಂತೆ ಮಾಡಲು ರಾಜ್ಯಾದ್ಯಂತ ಎಲ್ಲರೂ ಸೇರಿ ಧ್ವನಿ ಎತ್ತಬೇಕಾಗಿದೆ. ○

ಆಹಾರವೇ ಸಂತ್ರಸ್ತರ ತುರ್ತು ಸಮಸ್ಯೆಯಾಗಿದೆ. 'ಯಾರಾದರೂ ಆಪತ್ಬಾಂಧವರು ಬಂದು ತಮಗೆ ಒಂದಿಷ್ಟು ಆಹಾರವನ್ನು ಕೊಡುವರೇ' ಎಂಬ ನಿರೀಕ್ಷೆಯಲ್ಲಿ ಇವರು ಕಾಲ ಕಳೆಯುತ್ತಿದ್ದಾರೆ.

ಬಿಜೆಪಿಯ ಅನೈತಿಕ ಬೆಸುಗೆ...

ಪುಟ 5 ರಿಂದ

ಮುಂದುವರಿಸಿತು. ಇತ್ತ ಕರ್ನಾಟಕದಲ್ಲಿ ಬಿಜೆಪಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಕರ್ನಾಟಕ ಸರಕಾರವನ್ನು (ಭಕ್ಷಕ) ದರೋಡೆಕೋರ ಗಣಿಮಾಲಿಕರ ಕೈಗೊಂಬೆಯನ್ನಾಗಿ ವರ್ತಿಸಲು ಮುಂದಾಗಿದೆ.

ರಾಜಕೀಯದಲ್ಲಿ ಉದ್ಯಮದ ಈ ಆಕ್ರಮಣ ಪ್ರವೃತ್ತಿ ಈಗೀಗ ಚುನಾವಣೆಗಳಲ್ಲಿ ಅಭೂತಪೂರ್ವ ರೀತಿಯಲ್ಲಿ ಹಣದ ಬಳಕೆಯಾಗುತ್ತಿರುವುದರಲ್ಲಿ ಪ್ರತಿಬಿಂಬಿತವಾಗುತ್ತಿದೆ. ಮತದಾರರಿಗೆ 1000 ರೂಪಾಯಿ ನೋಟನ್ನು ನೀಡಿದ್ದಕ್ಕೆ ಬಳ್ಳಾರಿ (ಕು) ಖ್ಯಾತಿ ಪಡೆದಿದೆ. ಆದೇ ರೀತಿ ಕಾಂಗ್ರೆಸ್ ಆಡಳಿತದ ಆಂಧ್ರ ಪ್ರದೇಶದಲ್ಲೂ ನಡೆದಿದೆ. ತಮಿಳುನಾಡು ಕೂಡ ಇಂಥ ನೋಟು ಹಂಚಿಕೆ ಪ್ರವೃತ್ತಿಯನ್ನು ಕಂಡಿದೆ. ಅಲ್ಲೆಲ್ಲಾ ಒಂದು ಓಟಿಗೆ 500 ರಿಂದ 100 ರೂಪಾಯಿ ನೋಟುಗಳನ್ನು ಮತದಾರರಿಗೆ ನೀಡಲಾಗಿತ್ತು. ವ್ಯವಸ್ಥೆ ಈ ರೀತಿಯಾಗಿ ನೀತಿಗೆಟ್ಟಿರುವುದನ್ನು ಸಾರ್ವಜನಿಕ ಜೀವನದ ಎಲ್ಲಾ ರಂಗಗಳಲ್ಲಿ ಕಾಣಬಹುದಾಗಿದೆ. ಚುನಾವಣೆಗಳ ವೇಳೆ ಅಭ್ಯರ್ಥಿಗಳು ಮತ್ತು ಪಕ್ಷಗಳಿಗೆ ಪ್ಯಾಕೇಜ್‌ಗಳ ಮೂಲಕ ಸುದ್ದಿಗಳನ್ನು ಮಾಡಿ ಹಣ ಮಾಡಿಕೊಳ್ಳುವುದು ಕಾರ್ಪೊರೇಟ್ ಮಾಧ್ಯಮದಲ್ಲಿನ ಈಚಿನ ವ್ಯಾಪಕ ಪ್ರವೃತ್ತಿಯಾಗಿದೆ. ರಾಜ್ಯಗಳ ಶಾಸನಸಭೆಗಳು ಮತ್ತು ಸಂಸತ್ತಿಗೆ ಕೂಡ ದೊಡ್ಡ ಉದ್ಯಮಿಗಳು, ಮಧ್ಯವರ್ತಿಗಳು ಮತ್ತು ಕಂಟ್ರಾಕ್ಟರ್‌ಗಳ ಪ್ರತಿನಿಧಿಗಳು ಹೆಚ್ಚೆಚ್ಚಾಗಿ ಈಗ ಆಯ್ಕೆಯಾಗುತ್ತಿದ್ದಾರೆ. ನೀತಿಗಳನ್ನು ನಿರೂಪಿಸಬೇಕಾದ ಸಂಸದೀಯ ಸಮಿತಿಗಳಲ್ಲಿ ದೊಡ್ಡ ದೊಡ್ಡ ಉದ್ಯಮಿಕುಳಗಳೇ ಇರುತ್ತಾರೆ. ವಾಸ್ತವವಾಗಿ ವೃತ್ತಿಪರ ವ್ಯಾಪಾರಿಗಳು, ಉದ್ಯಮಿಗಳಾಗಿರುವ ಎಷ್ಟೋ ಜನರು ಈಗ ಕೇಂದ್ರ ಸರಕಾರ ಮತ್ತು ರಾಜ್ಯಗಳಲ್ಲಿ ಮಂತ್ರಿಗಳಾಗಿದ್ದಾರೆ.

ರಾಜಕಾರಣವನ್ನು ವ್ಯಾಪಾರವನ್ನಾಗಿಸುವ ಹಾಗೂ ರಾಜಕೀಯದ ಮೂಲಕ ವ್ಯಾಪಾರ ವರ್ಧಿಸುವ ಪ್ರವೃತ್ತಿ ಈಗ ಸಾಮಾನ್ಯವಾಗುತ್ತಿದೆ. ಪ್ರಜಾಪ್ರಭುತ್ವದ ಮೇಲಿನ ಈ ಆಕ್ರಮಗಳನ್ನು ತಡೆಯಬೇಕಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬುಡಮೇಲು ಮಾಡಲು ಹಣಬಲಕ್ಕೆ ಅವಕಾಶ ನೀಡಬಾರದು. ಖಾಸಗಿ ಹಿತಗಳು ಮತ್ತು ಸಾರ್ವಜನಿಕ ನೀತಿ ನಿರೂಪಣೆಯ ವಿಲೀನ ಪ್ರವೃತ್ತಿ ಹೀಗೆ ಮುಂದುವರಿದರೆ, ಅದರಿಂದ ರಾಜಕೀಯ ಮತ್ತು ಪ್ರಜಾಪ್ರಭುತ್ವ ಪಥಭ್ರಷ್ಟವಾಗುತ್ತದೆ, ನೀತಿಭ್ರಷ್ಟವಾಗುತ್ತದೆ. ಈ ಪ್ರಕ್ರಿಯೆಯನ್ನು ತಡೆಯಲು ಎಲ್ಲಾ ಪ್ರಜಾಪ್ರಭುತ್ವವಾದಿ ಶಕ್ತಿಗಳು ಹಾಗೂ ಸಂಬಂಧಪಟ್ಟ ನಾಗರಿಕರು ಒಂದಾಗಿ ಕಾರ್ಯಪ್ರವೃತ್ತರಾಗಬೇಕು. ಹೊಚ್ಚ ಹೊಸ ನಿಯಮಾವಳಿಗಳನ್ನು ಜಾರಿಗೊಳಿಸಬೇಕಿದೆ. ಎಡಪಕ್ಷಗಳು ವ್ಯಾಪಾರಿ ರಾಜಕಾರಣದಲ್ಲಿ ತೊಡಗಿಲ್ಲವಾದ್ದರಿಂದ ಈ ಹೋರಾಟವನ್ನು ಆರಂಭಿಸುವ ಅರ್ಹತೆ ಹೊಂದಿವೆ.

ತೆರಿಗೆ ಜರಡಿಯಲ್ಲಿ ಶ್ರೀಮಂತರಿಗಾಗಿ ದೊಡ್ಡ ತೂತುಗಳು

ಯುಪಿಎ II ದರ್ಬಾರ್‌ನಲ್ಲಿ



ಕೇಂದ್ರ ಯುಪಿಎ ಸರ್ಕಾರವು ಸಾರ್ವಜನಿಕ ಚರ್ಚೆಗಾಗಿ ತನ್ನ ನೇರ ತೆರಿಗೆ ಮಸೂದೆಯನ್ನು ಈಗಾಗಲೇ ಬಿಡುಗಡೆ ಮಾಡಿದೆ. ಒಂದೊಮ್ಮೆ ಇದು ಕಾಯ್ದೆಯಾಗಿ ಜಾರಿ ಬಂದಿದ್ದೇ ಆದರೆ ಕೇಂದ್ರ ಸರ್ಕಾರಕ್ಕೆ ಆದಾಯದಲ್ಲಿ ಬಾರಿ ದೊಡ್ಡ ಖೋತಾ ಆಗಲಿದೆ. ರೈತರು ಕಾರ್ಮಿಕರು ದುಡಿಯುವ ಜನ, ಬಡವರಿಗೇನಾದರೂ ಅನುಕೂಲ ಮಾಡಿಕೊಟ್ಟು ಹೀಗಾದರೆ ಅದು ಬೇರೆ ಮಾತು. ಆದರೆ ಇಲ್ಲಿ ರಿಯಾಯಿತಿ ಸಿಗುತ್ತಿರುವುದು ಶ್ರೀಮಂತ ವಿಭಾಗಗಳಿಗೆ ಮತ್ತು ದೊಡ್ಡ ದೊಡ್ಡ (ಕಾರ್ಪೊರೇಟ್) ಕಂಪನಿಗಳಿಗೆ. ಆದಾಯ ತೆರಿಗೆಗೆ ಸಂಬಂಧಿಸಿದಂತೆ ಸರ್ಕಾರದ ಹೊಸ ಸೂಚನೆ ಹೀಗಿದೆ. 10 ಲಕ್ಷ ದವರೆಗಿನ ವಾರ್ಷಿಕ ಆದಾಯಕ್ಕೆ ಶೇ.10 ರಷ್ಟು ತೆರಿಗೆ ಸೂಚಿಸಲಾಗಿದೆ. 10 ಲಕ್ಷದಿಂದ 25 ಲಕ್ಷದವರೆಗೆ ಆದಾಯವಿದ್ದಲ್ಲಿ ಶೇ.20 ಆದಾಯ ತೆರಿಗೆ. ವಾರ್ಷಿಕ ಆದಾಯ 25 ಲಕ್ಷಕ್ಕಿಂತ ಹೆಚ್ಚಿದ್ದರೆ, ಶೇ.30 ತೆರಿಗೆ ವಿಧಿಸುವ ಸೂಚನೆ ಇದೆ.

ಈ ಮಸೂದೆ ಜಾರಿಗೆ ಬಂದರೆ ಸದ್ಯ ಭಾರತದಲ್ಲಿ ಆದಾಯ ತೆರಿಗೆ ಪಾವತಿಸುವ 3 ಕೋಟಿ ತೆರಿಗೆದಾರರಲ್ಲಿ ಶೇ.97ಜನ 10 ಲಕ್ಷದೊಳಗಿನ ಆದಾಯಕ್ಕೆ ವಿಧಿಸಲಾಗುವ ಶೇ.10 ತೆರಿಗೆ ಮಾತ್ರ ಪಾವತಿಸುತ್ತಾರೆ. ಇದರಿಂದಾಗಿ ಕೇಂದ್ರ ಸರ್ಕಾರದ ಖಜಾನೆಗೆ ಸಹಸ್ರಾರು ಕೋಟಿ ರೂಪಾಯಿಗಳ ಕಡಿತವಾಗಲಿದೆ ಎಂಬ ಅಂದಾಜಿದೆ. ಅದು ಶ್ರೀಮಂತ ವಿಭಾಗಗಳಿಂದ ಬರಬೇಕಿದ್ದ ತೆರಿಗೆ ತಪ್ಪುವುದರಿಂದ ಆಗುವ ನಷ್ಟ.

ಇದು ಮಾತ್ರವಲ್ಲ ಕೇಂದ್ರ ಯುಪಿಎ ಸರ್ಕಾರ ಸಂಪತ್ತಿನ ತೆರಿಗೆ ನೀತಿಯಲ್ಲೂ ಬದಲಾವಣೆ ಸೂಚಿಸುತ್ತಿದೆ. ಈಗ ಜಾರಿಯಲ್ಲಿರುವ ನೀತಿಯಂತೆ 30 ಲಕ್ಷದವರೆಗಿನ ಸಂಪತ್ತಿಗೆ ಶೇ.1 ರಷ್ಟು ಸಂಪತ್ತಿನ ತೆರಿಗೆ ಇದೆ. ಈ ತೆರಿಗೆ ದರವನ್ನು 0.25ಕ್ಕೆ ಇಳಿಸುವ ಬಗೆಗೆ ಮಸೂದೆಯಲ್ಲಿ ಸೂಚಿಸಲಾಗಿದೆ. ಅಷ್ಟು ಮಾತ್ರವಲ್ಲ ಈ ಪ್ರಮಾಣದ ತೆರಿಗೆ ವಿಧಿಸಲು ಇರುವ ಸಂಪತ್ತಿನ ಪ್ರಮಾಣದ ಮಿತಿಯನ್ನು 30 ಲಕ್ಷ ರೂ.ಗಳಿಂದ 50 ಕೋಟಿ ರೂ.ಗಳಿಗೆ ಹೆಚ್ಚಿಸಲು ಉದ್ದೇಶಿಸಲಾಗಿದೆ. ಕಾರ್ಪೊರೇಟ್ ತೆರಿಗೆಯನ್ನು ಶೇ.30 ರಿಂದ ಶೇ.25ಕ್ಕೆ ಇಳಿಸುವ ಬಗೆಗೆ ಸೂಚಿಸಲಾಗಿದೆ. ಹೇಗಿದೆ ಆಮ್ ಆದ್ಮಿಯ ಜಪ ಮಾಡುವ ಯುಪಿಎ ನೀತಿ?

ಖಾಸಗೀಕರಣ

ದೇಶದ ಆರ್ಥಿಕತೆಯಲ್ಲಿ ಬಿಹೆಚ್ಇಎಲ್, ಬಿಇಎಲ್, ಬಿಇಎಂಎಲ್ ಮುಂತಾದ ಸರ್ಕಾರದ ಒಡೆತನದ ಸಾರ್ವಜನಿಕ ಉದ್ದಿಮೆಗಳ ಪಾತ್ರವನ್ನು ಕುಗ್ಗಿಸುವ ಯುಪಿಎ ಸರ್ಕಾರದ ಉದ್ದೇಶಕ್ಕೆ ಅವಕಾಶ ಕೊಡದೇ ಈ ಸಂಸ್ಥೆಗಳ ಷೇರು ಮಾರಾಟ ಮಾಡುವುದಕ್ಕೆ ಎಡಪಕ್ಷಗಳು ತಡೆಹಾಕಿದ್ದರಿಂದ ದೇಶಕ್ಕೆ ಆದ ಲಾಭವೇನು? ಅಮೇರಿಕಾದ ಮಹಾ ಆರ್ಥಿಕ ಬಿಕ್ಕಟ್ಟಿನಿಂದ ಜಗತ್ತಿನ ಹಲವಾರು ಬಂಡವಾಳಶಾಹಿ ದೇಶಗಳು ಎದುರಿಸಿದಷ್ಟು ಕೆಟ್ಟ ಪರಿಣಾಮಗಳನ್ನು ಭಾರತ ಎದುರಿಸಬೇಕಾಗಲಿಲ್ಲ. ಆದರೆ ಈಗ, ಕಳೆದ ಮಹಾಚುನಾವಣೆಯ ನಂತರದ ಸನ್ನಿವೇಶದಲ್ಲಿ ಎಡಪಕ್ಷಗಳ ಬೆಂಬಲ ಅಗತ್ಯವಾಗಿಲ್ಲದಿರುವಾಗ ದೇಶದ ಹಿತಾಸಕ್ತಿಯನ್ನು ಗಾಳಿಗೆ ತೂರಿ ಯುಪಿಎ-2 ಸರ್ಕಾರ ಮುಂದುವರಿಯುತ್ತಿದೆ.

ದೇಶದ ಎಲ್ಲಾ ಲಾಭದಾಯಕ ಸಾರ್ವಜನಿಕ ಉದ್ದಿಮೆಗಳಲ್ಲಿ ಬಂಡವಾಳವನ್ನು ಹಿಂತೆಗೆಯಲು, ಸರ್ಕಾರ ನಿರ್ಧರಿಸಿದೆ. ಪಟ್ಟಿಮಾಡಲಾದ, ಹಾಗೂ ಪಟ್ಟಿ ಮಾಡಿಲ್ಲದ ಅಂದರೆ ಎಲ್ಲಾ ಲಾಭದಾಯಕ ಉದ್ದಿಮೆಗಳಲ್ಲೂ ಶೇ.10ರಷ್ಟು ಬಂಡವಾಳವನ್ನು ಕೇಂದ್ರ ಸರ್ಕಾರ ವಾಪಸ್ ಪಡೆಯಲು ನಿರ್ಧರಿಸಿದೆ.

ಇಷ್ಟು ಮಾತ್ರವಲ್ಲ ಈ ಎಲ್ಲಾ ಉದ್ದಿಮೆಗಳಲ್ಲಿ ಸರ್ಕಾರದ ಷೇರನ್ನು ಕೇವಲ ಶೇ.51ಕ್ಕೆ ಇಳಿಸುವ ಉದ್ದೇಶವಿದೆಯೆಂದು ಯುಪಿಎ ಸರ್ಕಾರ ಘೋಷಿಸಿದೆ.

ದೇಶದ ಆರ್ಥಿಕತೆಯ ಅಮೂಲ್ಯ ನವರತ್ನಗಳು ಎಂದು ಹೆಸರಾದ 9 ಸಾರ್ವಜನಿಕ ಉದ್ದಿಮೆಗಳ ಬಂಡವಾಳ ಹಿಂತೆಗೆಯುವುದಿಲ್ಲ ಎಂಬುದು ಹಿಂದಿನ ಯುಪಿಎ ಸರ್ಕಾರ ಜನತೆಗೆ ಕೊಟ್ಟ ವಚನವಾಗಿತ್ತು. ಈಗ ಅದನ್ನೂ ಉಲ್ಲಂಘಿಸಲಾಗುತ್ತಿದೆ. ಕೇಂದ್ರ ಸರ್ಕಾರ ತನ್ನ ಬಜೆಟ್ ಕೊರತೆ ತುಂಬಿಕೊಳ್ಳಲು ಈ ಹಣವನ್ನು ಬಳಸಿಕೊಳ್ಳಲಿದೆ. ಸಾರ್ವಜನಿಕ ಉದ್ದಿಮೆಗಳ ಷೇರು ಮಾರಾಟದಿಂದ ಬರುವ ಹಣವನ್ನು ಬಜೆಟ್ ಕೊರತೆ ತುಂಬಿಕೊಳ್ಳಲು ಬಳಸುವುದಿಲ್ಲ. ಈ ಹಣದಿಂದ ಬರುವ ಬಡ್ಡಿಯನ್ನು ಮಾತ್ರ ಬಳಸಿಕೊಳ್ಳಲಾಗುವುದು ಎಂಬ ಹಿಂದಿನ ವಚನವನ್ನು ಯುಪಿಎ ಸರ್ಕಾರ ತಾನೇ ಉಲ್ಲಂಘಿಸಿದೆ.

ವಿದೇಶಿ ನೇರ ಬಂಡವಾಳ

ಚಿಲ್ಲರೆ ವ್ಯಾಪಾರ, ಮಾಧ್ಯಮ ಸೇರಿದಂತೆ ದೇಶದ ಹಲವಾರು ರಂಗಗಳಲ್ಲಿ ವಿದೇಶಿ ನೇರ ಬಂಡವಾಳ (ಎಫ್‌ಡಿಐ)ಅನ್ನು ಆಹ್ವಾನಿಸಬೇಕೆಂಬುದು ಯುಪಿಎ ಸರ್ಕಾರ ನಿಜವಾದ ತುಡಿತ. ಹಿಂದೆ ಅದಕ್ಕೆ ಮುಕ್ತ ಅವಕಾಶ ಆಗಿರಲಿಲ್ಲ. ಈಗ ಸರ್ಕಾರದ ಕ್ರಮಗಳು ಮಾಧ್ಯಮ ಕ್ಷೇತ್ರ ಸೇರಿದಂತೆ ದೇಶದ ವಿವಿಧ ಆಯಕಟ್ಟಿನ ರಂಗಗಳಲ್ಲೂ ವಿದೇಶಿ ನೇರ ಬಂಡವಾಳಕ್ಕೆ ಅವಕಾಶ ಮಾಡಿಕೊಡುವ ನಿಟ್ಟಿನಲ್ಲಿ ಸಾಗಿದೆ. ○

ಜನರ ಗತಿ ಅಧೋಗತಿ



ಬಿಜೆಪಿ ದರ್ಬಾರ್

ಬರೀ ಕಂಬ ಸುತ್ತಿದೆ

ರಾಜ್ಯದಲ್ಲಿ ದುಡಿಯುವ ಜನರ ಪರಿಸ್ಥಿತಿ, ಜನರ ಪರಿಸ್ಥಿತಿ ಯಾವ ರೀತಿಯಿದೆ ಎನ್ನುವುದರ ಬಗ್ಗೆ ಇಲ್ಲೊಂದು ಹೇಳಿಕೆ ಇದೆ. ನವೆಂಬರ್ 17 ರಂದು ಇದು ಪ್ರಕಟವಾಗಿದೆ. ಈ ಹೇಳಿಕೆ ನೀಡಿರುವುದು ಯಾವುದೇ ವಿರೋಧ ಪಕ್ಷದ ಮುಖಂಡರಲ್ಲ, ಹೋರಾಟಗಾರರೋ ಅಥವಾ ಕಾರ್ಮಿಕ ಚಳುವಳಿಯ ಮುಖಂಡರೋ ಅಲ್ಲ, ರಾಜ್ಯದ ಬಿಜೆಪಿ ಸರ್ಕಾರದ ಘನತೆವೆತ್ತ ಸಚಿವರೊಬ್ಬರು ಈ ಮಾತನ್ನು ಹೇಳಿದ್ದಾರೆ. ಉಳಿದ ತೀರ್ಮಾನ ನಿಮಗೆ ಬಿಟ್ಟದ್ದು. ಸಚಿವರ ಹೇಳಿಕೆ ಹೀಗಿದೆ.

"ಜವಳಿ ಇಲಾಖೆ ಸಂಕಷ್ಟದಲ್ಲಿರುವ ನೇಕಾರರ ...ವಾಗಿ ಕೆಲವು ಯೋಜನೆಗಳನ್ನು ರೂಪಿಸಿದೆ. ...ದರೆ ಆರ್ಥಿಕ ಇಲಾಖೆ ಸಣ್ಣ ಪ್ರಮಾಣದ ...ಅನುದಾನವನ್ನು ನೀಡುವುದಿಲ್ಲ. ಕಾವೇರಿ ... ತಿಂಗಳಿಂದ ಸಂಬಳವಿಲ್ಲ. ಅವರ ಸಂಬಳಕ್ಕಾಗಿ ಮುಖ್ಯಮಂತ್ರಿಗಳ ಬಳಿ ಕಡತ ತೆಗೆದುಕೊಂಡು ಹೋದಾಗ ತಕ್ಷಣ 2 ಕೋಟಿ ರೂ.ಗಳನ್ನು ಬಿಡುಗಡೆ ಮಾಡುವಂತೆ ಆರ್ಥಿಕ ಇಲಾಖೆಗೆ ಸೂಚನೆ ನೀಡಿದರು. ಆದರೆ ಇದುವರೆಗೂ ಬಿಡುಗಡೆಯಾಗಲಿಲ್ಲ. ಅನೇಕ ನೌಕರರು ಆತ್ಮಹತ್ಯೆ ಮಾಡಿಕೊಳ್ಳುವ ಮಟ್ಟಕ್ಕೆ ಬಂದಿದ್ದಾರೆ.

ನೆರೆ ಪೀಡಿತ ಪ್ರದೇಶಗಳಲ್ಲಿ ನೌಕರರು ಸಾಕಷ್ಟು ತೊಂದರೆಗೆ ಒಳಗಾಗಿದ್ದಾರೆ. ಅನೇಕರ ಮಗ್ಗಗಳಿಗೆ ನೀರು ನುಗ್ಗಿದೆ. ವಿದ್ಯುತ್ ಸಂಪರ್ಕ ಹಾಳಾಗಿದೆ. ಇಂತಹ ನೇಕಾರರ ನೆರವಿಗೆ ಹೋಗಲು 5 ಕೋಟಿ ರೂ.ಗಳ ಪ್ರಸ್ತಾವನೆ ಸಲ್ಲಿಸಿದ್ದರೂ ಉಪಯೋಗವಾಗಿಲ್ಲ.

ಮಾಜಿ ಫೈಲ್ವಾನರಿಗೆ ಮಾಶಾಸನ ಹೆಚ್ಚಳ ಮಾಡಲು ಸಲ್ಲಿಸಿದ್ದ ಪ್ರಸ್ತಾವನೆಯೂ ಆರ್ಥಿಕ ಇಲಾಖೆಯಲ್ಲಿ ಕೊಳೆತು ಹೋಯಿತು. ಇಲಾಖೆಯ ಕಂಬ ಸುತ್ತಿ ಸುತ್ತಿ ಬೇಸರವಾಗಿದೆ."

ಗೂಳಿಹಟ್ಟಿ ಚಂದ್ರಶೇಖರ್
ಯುವಜನ ಸೇವೆ ಮತ್ತು ಕ್ರೀಡೆ ಹಾಗೂ
ಜವಳಿ ಸಚಿವರು
ಕರ್ನಾಟಕ ಸರ್ಕಾರ

★ ★ ★

ತೇಪೆಗಳ ಮೇಲೆ ತೇಪೆ

ಬಿಜೆಪಿ ಭಿನ್ನಮತ ಸ್ಫೋಟಿಸಿದ ನಂತರ ಬಿಜೆಪಿ ವರಿಷ್ಠರು ಮತ್ತೆ ಏನೆಲ್ಲಾ ತೇಪೆ ಹಚ್ಚಿದರೂ ತೇಪೆ ಪದೇ ಪದೇ ಕಿತ್ತು ಬರುವ ಲಕ್ಷಣ ಎದ್ದು ಕಾಣುತ್ತದೆ. ಭಿನ್ನಮತದ ಕತೆ ಮುಗಿಯಿತು ಇನ್ನು ಬರೀ ಅಭಿವೃದ್ಧಿಯ ಕೆಲಸ, ಪ್ರವಾಹ ಪರಿಹಾರದ ಕೆಲಸ ಎಂದ ಮುಖ್ಯಮಂತ್ರಿ ಯಡಿಯೂರಪ್ಪ ಹೇಳಿದ ಕೆಲಸಕ್ಕಿಂತ ರಾಜ್ಯದ ಗುಡಿ ಗುಂಡಾರಗಳಿಗೆ ಭೇಟಿ ಮಾಡಿ ಖರ್ಚು ಭದ್ರತೆಗಾಗಿ ಹೋಮ ಹವನ ಮಾಡುವುದೇ ಹೆಚ್ಚಾಗಿದೆ.

ನವೆಂಬರ್ 16ರಂದು ಹೊನ್ನಾವರ ತಾಲ್ಲೂಕಿನ ಬಂಗಾರ ಮಕ್ಕಿಯ ವೀರಾಂಜನೇಯ ದೇವರಿಗೆ ಸುವರ್ಣ ಕವಚ ಸಮರ್ಪಣೆ, ಚಾಮುಂಡಿ ಬೆಟ್ಟ ಮುಂತಾದ ಕಡೆ ಮತ್ತಷ್ಟು ಪೂಜೆ, ಹೋಮ ಇವುಗಳು ಬಿಡುವಿಲ್ಲದಂತೆ ನಡೆದಿದೆ. ಇದೇ ರೀತಿ ಎರಡು ಗುಂಪುಗಳ ತಿಕ್ಕಾಟವು ಮುಂದುವರಿಯುತ್ತಿದೆ. ಎಲ್ಲಾ ಸರಿಹೋಯ್ತು ಅಂದ ಮೇಲೂ ಮೊನ್ನೆ ಜನಾರ್ಧನ ರೆಡ್ಡಿ ಹೈದರಾಬಾದಿನಲ್ಲಿ ಪತ್ರಿಕಾಗೋಷ್ಠಿ ನಡೆಸಿ ಯಡಿಯೂರಪ್ಪ ಅತ್ತಿದ್ದು ಒಬ್ಬರಿಗಾಗಿ, ರಾಜ್ಯದ ಜನತೆಗಾಗಿ ಅಲ್ಲ. ಆ ಒಬ್ಬರು ಯಾರು ಅಂತ ಎಲ್ಲರಿಗೂ ಗೊತ್ತಿದೆ ಅಂದಿದ್ದಾರೆ. ಬಸವರಾಜ ಬೊಮ್ಮಾಯಿ ಅವರನ್ನು ಸಚಿವ ಸಂಪುಟದಿಂದ ಕೈ ಬಿಡಲೇಬೇಕು ಅಂತ ಅವರು ಹಠ ಹಿಡಿದ ವರದಿಗಳಿವೆ.

ನವೆಂಬರ್ 18 ರಂದು ಬೆಂಗಳೂರಿನಲ್ಲಿ 4 ಜನ ಬಿಜೆಪಿ ವರಿಷ್ಠರ ಸಮ್ಮುಖದಲ್ಲಿ ನಡೆದ 'ಸಮನ್ವಯ' ಸಮಿತಿ ಸಭೆಗೆ ಮುಂಚೆ ಎರಡು ಗುಂಪುಗಳು ಪ್ರತ್ಯೇಕ, ಪ್ರತ್ಯೇಕ ಸಭೆ ಸೇರಿದ್ದರಂತೆ, ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಪಟ್ಟು ಹಿಡಿದು ಸಮನ್ವಯ ಸಭೆಗೆ ಬರಲು ನಿರಾಕರಿಸಿದ್ದರಂತೆ, ರೆಡ್ಡಿ ಸಹೋದರರು. ವರಿಷ್ಠರು ತೇಪೆಗಳ ಮೇಲೊಂದು ತೇಪೆ ಹಾಕಿ ಅವರನ್ನು ಸಭೆಗೆ ಕರೆ ತಂದರಂತೆ.

ಕರೆಂಟ್ ಶಾಕ್

ಬರ, ಪ್ರವಾಹದ ಭೀಕರತೆಯಲ್ಲಿ ರಾಜ್ಯದ ಜನತೆ ತತ್ತರಿಸುತ್ತಿರುವಾಗ ಜನತೆಗೆ ಇನ್ನೊಂದು ಆಘಾತಕಾರಿ ಸುದ್ದಿ ಬಂದಿದೆ. ಸದ್ಯದಲ್ಲೇ ರಾಜ್ಯದಲ್ಲಿ ವಿದ್ಯುತ್ ದರಗಳು ಏರಿಕೆಯಾಗುವ ಸಾಧ್ಯತೆ ಇದೆಯೆಂಬ ಖಚಿತ ಮಾಹಿತಿಗಳು ಕೇಳಿಬರುತ್ತಿವೆ. ಬಿಜೆಪಿ ದರ್ಬಾರ್‌ನಲ್ಲಿ ಜನರಿಗೆ ಇನ್ನು ಏನೇನು ಆಘಾತಗಳು ಕಾದಿವೆಯೋ?

ಸಾರಿಗೆ ನೌಕರರಿಗೆ ಬರೆ

ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆ ಕೆಎಸ್‌ಆರ್‌ಟಿಸಿ ಹಾಗೂ ಬಿಎಂಟಿಸಿ ನೌಕರರು ಇನ್ನು ಮುಂದೆ ತಮ್ಮದೇ ಸಂಸ್ಥೆಯ ಬಸ್‌ಗಳಲ್ಲಿ ಓಡಾಡಬೇಕಾದರೂ ಟಿಕೆಟ್ ಖರೀದಿಸಿ ಪ್ರಯಾಣಿಸಬೇಕೆಂದು ಸಾರಿಗೆ ಇಲಾಖೆ ತೀರ್ಮಾನ ಮಾಡಿದೆ. ವಿಪರೀತ ಕೆಲಸದ ಒತ್ತಡ, ಸತತ ಕೆಲಸದ ಪಾಳಿಗಳ ನಿಗದಿ, ನಿಕೃಷ್ಟ ವೇತನಗಳಿಂದ ಈಗಾಗಲೇ ಸಾರಿಗೆ ಸಂಸ್ಥೆಯ ಸಿಬ್ಬಂದಿ ನರಳುತ್ತಿದ್ದಾರೆ. ಪ್ರಯಾಣ ವೆಚ್ಚದಲ್ಲಿ ಸಿಗುತ್ತಿದ್ದ ಒಂದು ರಿಯಾಯಿತಿಯನ್ನು ಸಾರಿಗೆ ಸಂಸ್ಥೆ ಕಿತ್ತುಕೊಳ್ಳಲು ಹೊರಟಿದೆ. ಉಳ್ಳವರಿಗೆ, ಶ್ರೀಮಂತರಿಗೆ, ಗಣಿ ಲೂಟಿಕೋರರಿಗಾದರೆ ಹತ್ತು ಹಲವು ರಿಯಾಯಿತಿ ಕೊಡಬಹುದು. ಕಾರ್ಮಿಕರು ನೌಕರರಿಗೆಲ್ಲ ಯಾಕೆ ರಿಯಾಯಿತಿ, ಅದೂ ಬಿಜೆಪಿ ನೇತೃತ್ವದ ಸರ್ಕಾರದಲ್ಲಿ ಅಲ್ಲವೇ?

ಜಗದಗಲ

ಶರತ್‌ಚಂದ್ರ

ಆಹಾರ ಭದ್ರತೆಗೆ ಲ್ಯಾಟಿನ್ ಅಮೆರಿಕದ ದಾರಿ ದೀಪಗಳು

'ಅಮ್ ಆದ್ಮಿ'ಯ ಪ್ರಧಾನಿಯವರೇ, ಅಮೆರಿಕದಿಂದ ಅಲ್ಲ, ಲ್ಯಾಟಿನ್ ಅಮೆರಿಕದಿಂದ ನೀವು ಬಹಳ ಕಲಿಯುವುದು ಇದೆ.

ವೆನೆಜುವೇಲಾದಲ್ಲಿ 1998 ರಲ್ಲಿ ಚವೇಝ್ ಅಧಿಕಾರಕ್ಕೆ ಬಂದಾಗ ಆಹಾರ ಪರಿಸ್ಥಿತಿ ಬಹಳ ಕೆಟ್ಟದಿತ್ತು. ದೇಶದ ಮತ್ತು ಬಹು ಸಂಖ್ಯಾತ ಬಡವರು ತೀವ್ರ ಆಹಾರ ಅಭದ್ರತೆ ಎದುರಿಸುತ್ತಿದ್ದರು. ಈ ಕೆಳಗಿನ ಅಂಶಗಳು ಅದರ ಸ್ಥೂಲ ಚಿತ್ರಣ ನೀಡಬಹುದು

ದೇಶದ ಆಹಾರ ಅವಶ್ಯಕತೆಯ ಶೇ. 70 ರಷ್ಟನ್ನು ಆಮದು ಮೂಲಕ ಪೂರೈಸಬೇಕಾಗಿತ್ತು. ಇದು ತೈಲ ಸಂಪತ್ತು ತಂದ ದುರಂತವಾಗಿತ್ತು. ಆಹಾರ ಬೆಳೆಗಳ ಕೃಷಿಯನ್ನು ಪೂರ್ಣವಾಗಿ ನಿರ್ಲಕ್ಷಿಸಲಾಗಿದ್ದು, ಗ್ರಾಮೀಣ ಜನಸಂಖ್ಯೆ ಶೇ.12 ಕ್ಕೆ ಕುಸಿದು, ಗ್ರಾಮೀಣ ಪ್ರದೇಶಗಳು ಬಿಕೋ ಎನ್ನುತ್ತಿದ್ದವು. ತೈಲ ಸಂಪತ್ತಿನಿಂದ ಆಹಾರ ಆಮದು ಮಾಡುವುದು ಸುಲಭ ಹಾದಿ ಎಂದು ದೇಶದ ಸರ್ಕಾರ ನಿರ್ಧರಿಸಿತ್ತು.

ಕೇವಲ ಶೇ. 5 ದೊಡ್ಡ ಎಸ್ಟೇಟ್ ಮಾಲಕರು ಮುಕ್ಕಾಲು ಭಾಗ ಭೂಮಿಯ ಒಡೆಯರಾಗಿದ್ದರು. ಅತ್ಯಂತ ಕಡಿಮೆ ಭೂಮಿ ಹೊಂದಿದ್ದ ಮುಕ್ಕಾಲು ಭಾಗ ರೈತರು ಕೇವಲ ಶೇ. 6 ರಷ್ಟು ಭೂಮಿ ಹೊಂದಿದ್ದರು. ಲತಿಫಂದೋ ಎನ್ನುವ ಈ ಭಾರೀ ಎಸ್ಟೇಟ್‌ಗಳಲ್ಲಿ ಕೃಷಿ ನಡೆಯದೆ ಹೆಚ್ಚಾಗಿ ಪಾಳು ಬಿದ್ದಿರುತ್ತಿತ್ತು. ಕೃಷಿಯ ತೀವ್ರ ಹಿನ್ನಡೆಗೆ ಈ ಭೂ ಒಡೆತನದ ಸಾಂದ್ರೀಕರಣ ಸಹ ಒಂದು ಕಾರಣ.


ಗ್ರಾಮೀಣ ಮತ್ತು ಕೃಷಿಯ ಈ ಪರಿಸ್ಥಿತಿಯಿಂದಾಗಿ ಜನ ನಗರಗಳಿಗೆ ವಲಸೆ ಹೋಗಿ ಅಲ್ಲೂ ಉದ್ಯೋಗ, ಆದಾಯ ಇಲ್ಲದೆ ಬಡತನ ಹೆಚ್ಚಿತ್ತು. ಅರ್ಧಕ್ಕೂ ಹೆಚ್ಚು ಜನ ಬಡವರಾಗಿದ್ದು, ಶೇ. 42 ಕ್ಕಿಂತ ಹೆಚ್ಚು ಜನ ಅತೀ ಬಡತನ ಎದುರಿಸುತ್ತಿದ್ದರು. ಅತ್ಯಂತ ಕನಿಷ್ಟ ಅವಶ್ಯಕತೆಯಾದ ಆಹಾರ ಸಹ ಅವರಿಗೆ ದೊರೆಯದ ಪರಿಸ್ಥಿತಿ ಇತ್ತು.

ಅಧ್ಯಕ್ಷ ಚವೇಝ್ ದೇಶದ ಮತ್ತು ಬಹು ಸಂಖ್ಯಾತ ಬಡವರ ಆಹಾರ ಭದ್ರತೆ ಉತ್ತಮ ಪಡಿಸುವ ಕಾರ್ಯಕ್ರಮಕ್ಕೆ ಆದ್ಯತೆ ಕೊಟ್ಟರು. 'ಆಹಾರಕ್ಕಾಗಿ ಭೂಮಿ, ಜನರಿಗಾಗಿ ಆಹಾರ' ಈ ಕಾರ್ಯಕ್ರಮದ ಪ್ರಮುಖ ಧ್ಯೇಯ ವಾಕ್ಯವಾಯಿತು. 1999 ರಲ್ಲಿ ಅಂಗೀಕರಿಸಲಾದ ಸಂವಿಧಾನದಲ್ಲಿ ಹಲವು ಅಂಶಗಳ ಆಹಾರ ಸಾರ್ವಭೌಮತೆಯನ್ನು ಅಂಗೀಕರಿಸಲಾಯಿತು. ಲತಿಫಂದೋಗಳನ್ನು ಒಡೆದು ಕೃಷಿಗೆ, ಬಡ ರೈತರಿಗೆ ಹಂಚುವ ಭೂ ಸುಧಾರಣೆಯ ಕಾರ್ಯಕ್ರಮವನ್ನು ಅಂಗೀಕರಿಸಿ ದೊಡ್ಡ ಪ್ರಮಾಣದಲ್ಲಿ ಅದನ್ನು ಜಾರಿ ಮಾಡಲಾಯಿತು. ಪಾಳು ಬಿದ್ದ ಭೂಮಿಯನ್ನು ಕೃಷಿಗೆ ಅಳವಡಿಸುವ ಆಸಕ್ತಿ ಇರುವ ರೈತರ ಸಮುದಾಯಗಳಿಗೆ ಆ ಭೂಮಿ ವಹಿಸಿ ಕೊಡುವ ಕಾನೂನು ಚೌಕಟ್ಟು ರೂಪಿಸಲಾಯಿತು.

ವೆನೆಜುವೇಲಾದ 'ಆಹಾರಕ್ಕಾಗಿ ಭೂಮಿ, ಜನರಿಗಾಗಿ ಆಹಾರ' ಬ್ರೆಜಿಲ್‌ನ 'ಶೂನ್ಯ ಹಸಿವು' ಕಾರ್ಯಕ್ರಮಗಳು

ಲ್ಯಾಟಿನ್ ಅಮೆರಿಕದ ಹಲವು ದೇಶಗಳಲ್ಲಿ ಕಳೆದ ಕೆಲವು ವರ್ಷಗಳಲ್ಲಿ ಅಧಿಕಾರಕ್ಕೆ ಬಂದಿರುವ ಎಡಪಂಥೀಯ ಸರ್ಕಾರಗಳು ಹಲವು ರಂಗಗಳಲ್ಲಿ, ಸಾಮ್ರಾಜ್ಯಶಾಹಿ ಮತ್ತು ಆ ದೇಶಗಳ ಸಿರಿವಂತರ-ಪರ ನೀತಿಗಳನ್ನು ಬದಲಾಯಿಸಿ ಜನಪರ ನೀತಿಗಳನ್ನು ಜಾರಿ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿವೆ. ಆಹಾರ ಭದ್ರತೆ ಇಂತಹ ರಂಗಗಳಲ್ಲಿ ಒಂದು. ವೆನೆಜುವೇಲಾ, ಬ್ರೆಜಿಲ್, ಬೊಲಿವಿಯ ಇದರ ಮುಂಚೂಣಿಯಲ್ಲಿವೆ. ವೆನೆಜುವೇಲಾದ 'ಆಹಾರಕ್ಕಾಗಿ ಭೂಮಿ, ಜನರಿಗಾಗಿ ಆಹಾರ' ಮತ್ತು ಬ್ರೆಜಿಲ್ ನ 'ಶೂನ್ಯ ಹಸಿವು ಕಾರ್ಯಕ್ರಮ' ಮೂಲಕ ಈ ನಿಟ್ಟಿನಲ್ಲಿ ಅನುಸರಿಸಿದ ನೀತಿಗಳು ಮತ್ತು ಸಾಧಿಸಿದ ಅದ್ಭುತ ಪ್ರಗತಿ ನಮಗೆ ಮಾದರಿಯಾಗಬೇಕು. ವಿಶ್ವ ಆರೋಗ್ಯ ಸಂಸ್ಥೆ ಈ ಕಾರ್ಯಕ್ರಮಗಳನ್ನು ಬಹುವಾಗಿ ಶ್ಲಾಘಿಸಿವೆ. ವೆನೆಜುವೇಲಾದ 'ಆಹಾರಕ್ಕಾಗಿ ಭೂಮಿ, ಜನರಿಗಾಗಿ ಆಹಾರ' ಕಾರ್ಯಕ್ರಮದ ಕೆಲವು ಪ್ರಮುಖ ವಿವರಗಳು ಇಲ್ಲಿವೆ.

ಸ್ವಾಭಾವಿಕವಾಗಿಯೇ ಪಾಳು ಬಿದ್ದ ಲತಿಫಂದೋಗಳ ಭಾಗಗಳಲ್ಲಿ ನೆಲೆಸಿ ರೈತರು ಕೃಷಿ ಮಾಡಲಾರಂಭಿಸಿದರು. ಇದು ಲತಿಫಂದೊ ದೊರೆಗಳು ಮತ್ತು ಭೂಹೀನ ರೈತರ ನಡುವೆ ಹಲವಾರು ಘರ್ಷಣೆಗಳ ರೂಪ ತಾಳಿತು. ಲತಿಫಂದೊ ದೊರೆಗಳ ಬಾಡಿಗೆ ಗೂಂಡಾಗಳ ದಾಳಿಗಳಲ್ಲಿ 200 ಕ್ಕೂ ಹೆಚ್ಚು ರೈತರ ಕೊಲೆಗಳು ನಡೆದಿವೆ. ಆದರೆ ಸರ್ಕಾರ ಭೂಹೀನ ರೈತರ ಬೆಂಬಲಕ್ಕೆ ನಿಂತಿತು. ಅದರ ಫಲವಾಗಿ 1998 ರಲ್ಲಿ ಇದ್ದ ಲತಿಫಂದೋಗಳ ಮೂರನೇ ಒಂದು ಭಾಗ



ಆಹಾರ ಉತ್ಪಾದನಾ ಘಟಕದಲ್ಲಿ ಚವೇಝ್

(ಅಂದರೆ ದೇಶದ ಸುಮಾರು ಕಾಲು ಭಾಗ) ಭೂಮಿಯನ್ನು ಭೂಹೀನ ರೈತರು ಉಳುತ್ತಿದ್ದಾರೆ. ಇದರ ಫಲವಾಗಿ ಸುಮಾರು 80 ಸಾವಿರ ಕುಟುಂಬಗಳು ಆಹಾರ ಉತ್ಪಾದನೆಯಲ್ಲಿ ತೊಡಗಿವೆ.

ಭೂಹೀನ ರೈತರಿಗೆ ಭೂಮಿ ಒದಗಿಸುವುದಲ್ಲದೆ, ಕೃಷಿ ನಡೆಸಲು ಬೇಕಾದ ಸಾಲ, ಲಾಗುವಾಡುಗಳು, ಯಂತ್ರಗಳು, ಮಾರಾಟ ವ್ಯವಸ್ಥೆ, ಪರಿಸರ-ಸಮ್ಮತ ಕೃಷಿ ಸಲಹೆ - ಇತ್ಯಾದಿಗಳನ್ನು ಸರ್ಕಾರ ಒದಗಿಸಿತು. ಕೃಷಿಗೆ ಒದಗಿಸುವ ಸುಲಭ ದರ ಸಾಲ ಹತ್ತು ವರ್ಷಗಳಲ್ಲಿ 58 ಪಟ್ಟು ಹೆಚ್ಚಿತು ! ಇದರ ಫಲವಾಗಿ ಕಳೆದ ಹತ್ತು ವರ್ಷಗಳಲ್ಲಿ ವೆನೆಜುವೇಲಾ ಆಹಾರ ರಂಗದಲ್ಲಿ ಅದ್ಭುತ ಪ್ರಗತಿ ಸಾಧಿಸಿದೆ.

ವೆನೆಜುವೇಲಾದ ಆಹಾರ ಉತ್ಪಾದನೆ ಶೇ. 24 ರಷ್ಟು ಹೆಚ್ಚಿತು. ಪ್ರಮುಖ ಆಹಾರಗಳಾದ ಅಕ್ಕಿ (ಶೇ. 132 ರಷ್ಟು ಏರಿಕೆ), ಜೋಳ (ಶೇ. 71); ಹಂದಿಮಾಂಸ (ಶೇ. 77) - ಉತ್ಪಾದನೆಯಲ್ಲಿ ಭಾರೀ ಏರಿಕೆ ಆಗಿ ದೇಶದ ಜನತೆಯ ಅಗತ್ಯ ಪೂರೈಸುವಲ್ಲಿ ಪೂರ್ಣ ಸ್ವಾವಲಂಬನೆ ಸಾಧಿಸಿದೆ. ಕೆಲವು ವರ್ಷಗಳಲ್ಲಿ ಇತರ ಲ್ಯಾಟಿನ್ ಅಮೆರಿಕನ್ ದೇಶಗಳಿಗೆ ಇವನ್ನು ರಫ್ತು ಮಾಡುವ ಸಿದ್ಧತೆಯಲ್ಲಿ ಇದೆ.

ಇತರ ಆಹಾರ ವಸ್ತುಗಳ ಉತ್ಪಾದನೆಯಲ್ಲೂ ಸ್ವಾವಲಂಬನೆ ಸಾದಿಸುವ ಹಾದಿಯಲ್ಲಿದೆ. ದನದ ಮಾಂಸ(ದೇಶದ ಶೇ. 70 ಅಗತ್ಯ ಪೂರೈಸುವಷ್ಟು), ಚಿಕನ್ (ಶೇ. 85), ಮೊಟ್ಟೆ (ಶೇ. 80) ಮತ್ತು ಹಾಲು (ಶೆ.55) - ದೇಶದ ಹೆಚ್ಚಿನ ಅಗತ್ಯ ಪೂರೈಸುವಷ್ಟು ಉತ್ಪಾದನೆ ಆಗುತ್ತಿದೆ. ಹಾಲು ಉತ್ಪಾದನೆ 9 ಪಟ್ಟು ಆಯಿತು.

ಆಹಾರ ವಿತರಣೆಯಲ್ಲೂ ಸರ್ಕಾರ ಮತ್ತು ಸಮುದಾಯಗಳು ಸಮಗ್ರ ಕ್ರಮಗಳನ್ನು ಕೈಗೊಂಡಿತು, ಇದರ ಪರಿಣಾಮವಾಗಿ ಹಸಿದವರ ಮತ್ತು ಕುಪೋಷಣೆಯಿಂದ ಸಾಯುವವರ ಸಂಖ್ಯೆಯನ್ನು 2015 ರೊಳಗೆ ಅರ್ಧಕ್ಕೆ ಇಳಿಸುವ ವಿಶ್ವಸಂಸ್ಥೆಯ ಸಹಸ್ರಮಾನ ಗುರಿಯನ್ನು ಈಗಾಗಲೇ ಸಾಧಿಸಿದ ಬೆರಳೆಣಿಕೆಯ ದೇಶಗಳಲ್ಲಿ ಒಂದಾಗಿದೆ.

1998 ರ ಮೊದಲು ಆಹಾರ ಆಮದು ಮತ್ತು ವ್ಯಾಪಾರ ದೊಡ್ಡ ಉದ್ಯಮವಾಗಿ ಬಿಟ್ಟಿತ್ತು. ವಿದೇ ಕಂಪನಿಗಳು ಇದರಲ್ಲಿ ಸಿಂಹಪಾಲು ಪಡೆದಿದ್ದ ಸ್ವಾಭಾವಿಕವಾಗಿಯೇ ಅವು ಆಹಾರ ಭದ್ರತೆ ಕ್ರಮಗಳಿಗೆ ಪ್ರತಿರೋಧ ಒಡ್ಡಿದವು. ಇದನ್ನು ಸರ್ಕಾ ಹಲವು ಬಾರಿ ಬಲಪ್ರಯೋಗದಿಂ ಮುರಿಯಬೇಕಾಯಿತು. ಕಾರ್ಗಿಲ್ ಸರ್ಕಾರದ ಬ ನಿಯಂತ್ರಣ ವಿರೋಧಿಸಿ ಒಂದು ವೆರೈಟಿಯ ಉತ್ಪಾದನೆ, ಮಾರಾಟ ನಿಲ್ಲಿಸಿತು. ಆಗ ಸರ್ಕಾ ಅದರ ಗೋದಾಮುಗಳನ್ನು ವಶ ಪಡಿಸಿಕೊಂಡಿತ ಹಾಲು ಅಭಾವ ಸೃಷ್ಟಿಸುತ್ತಿದ್ದ ನೆಸಲ್ ಕಂಪನಿ ಮೇಲೂ ಇದೇ ರೀತಿ ಕಠಿಣ ಕ್ರಮ ತೆಗೆದಿಕೊಂಡಿತ ಆಹಾರ ವಿತರಣೆಗೆ ಮತ್ತು ಹಸಿವು-ಕುಪೋ ವಿರುಧ್ಧ ವೆನೆಜುವೇಲಾ ಕೈಗೊಂಡ ಪ್ರಮು ಕ್ರಮಗಳೆಂದರೆ

ಅಗ್ಗದ (ಮಾರುಕಟ್ಟೆಯ ಬೆಲೆಗಿಂತ ಶೇ. ರಷ್ಟು ಕಡಿಮೆ ಇರುವ) ಅಗತ್ಯ ಆಹಾರ ವಸ್ತುಗ ದೊರೆಯುವ ಮೆರ್ ಕಾಲ್ ಎಂಬ 16 ಸಾವಿರ ಹೆಚ್ಚು ಆಹಾರ ಅಂಗಡಿಗಳ ರಾಷ್ಟ್ರೀಯ ಜಾ ಆರಂಭಿಸಿತು. ಇದು ಲ್ಯಾಟಿನ್ ಅಮೆರಿಕದ ದೊಡ್ಡ ಇಂತಹ ಜಾಲ ಆಗಿದ್ದು, 1.3 ಕೋಟಿ ಜನ 15 ಲಕ್ಷ ಟನ್‌ಗೂ ಹೆಚ್ಚು ಆಹಾರ ವಸ್ತುಗಳ ಪೂ ಮಾಡುತ್ತಿದೆ.

ಸರ್ಕಾರ ಮತ್ತು ಸ್ಥಳೀಯ ಸಮುದಾಯ ಸಹಕಾರದಲ್ಲಿ ನಡೆಸುವ ಆರು ಸಾವಿರಕ್ಕೂ ಹೆ ಉಚಿತ ಬಿಸಿಯೂಟ ಕೇಂದ್ರಗಳ ತೆರೆಯಲಾಯಿತು. ಊಟದ ಅಗತ್ಯ ಇರು ಎಲ್ಲರಿಗೂ (ಪ್ರಮುಖವಾಗಿ ಬಡ ಮುದುಕ ಮಕ್ಕಳು, ಗರ್ಭಿಣಿ ಮಹಿಳೆಯರು) ಈ ಕೇಂದ್ರ ಬಾಗಿಲು ತೆರೆದಿದ್ದು , ಸುಮಾರು 9 ಲಕ್ಷ ಹಸಿದವ ಇದರ ಪ್ರಯೋಜನ ಪಡೆಯುತ್ತಿದ್ದಾರೆ.

ಎಲ್ಲಾ ಶಾಲಾ ಮಕ್ಕಳಿಗೆ ಉಚಿತ ಉಪ ಮಧ್ಯಾಹ್ನದ ಊಟ ಮತ್ತು ಸಂಜೆಯ ತಿ ಒದಗಿಸುವ ಸಾರ್ವತ್ರಿಕ ರಾಷ್ಟ್ರೀಯ ಕಾರ್ಯಕ್ರ 40 ಲಕ್ಷ ಮಕ್ಕಳನ್ನು ತಲುಪಿದೆ.

2004 ರಲ್ಲಿ ಮಾಡಲಾದ ಕಾನೂನು ಪ್ರ 20 ಕ್ಕೂ ಹೆಚ್ಚು ಕಾರ್ಮಿಕರು ಇರುವ ಎ ಕಾರ್ಖಾನೆಗಳು, ಉದ್ಯಮಗಳು ಕಡ್ಡಾಯವ ಉದ್ಯೋಗದ ಸ್ಥಳದಲ್ಲಿ ಅಥವಾ ಹತ್ತಿ ಹೊಟೇಲುಗಳಲ್ಲಿ ಕೂಪನ್ ಗಳ ಮೂಲಕ ಉ ಊಟ ಒದಗಿಸಬೇಕು.

ವೆನೇಜುವೇಲಾದ ಆಹಾರ ಭದ್ರತೆಯ ಅದ್ಭುತ ಸಾಧನೆಗಳು ಒಂದು ಸಮಗ್ರ ಜನ ಹೋರಾಟ ಮತ್ತು ಸರ್ಕಾರದ ರಾಜಕೀ ಸಾಮಾಜಿಕ - ಆರ್ಥಿಕ ನೀತಿಗಳ ಭಾಗವಾಗಿ ಬಂ ಎಂದು ಇಲ್ಲಿ ಗಮನಿಸಬೇಕು. ವೆನೇಜುವೇಲಾ ಇತರ ಲ್ಯಾಟಿನ್ ಅಮೆರಿಕದ ಮಾದರಿಗಳಿಂದ ನ ಬಹಳ ಕಲಿಯಬಹುದು.

(ಬ್ರೆಜಿಲ್ ನ 'ಶೂನ್ಯ ಹ ಕಾರ್ಯಕ್ರಮ'ದ ಬಗ್ಗೆ ಮುಂದಿನ ವಾ

ರ್ಜ ಜನಾಂಗದ ಶಾಂತಿಯ ತೋಟ ಕರ್ನಾಟಕದ ದಲ್ಲಿ ರಾಜ್ಯದ ಬಿಜೆಪಿ ಸರ್ಕಾರ ತನ್ನ ರಹಸ್ಯ ರ್ಯಸೂಚಿ - ಹಿಡನ್ ಅಜೆಂಡಾವನ್ನು ಾಗೊಳಿಸಲು ಪ್ರಯತ್ನಿಸುತ್ತಿದೆ. ಒಂದೆಡೆ ಹಾವಳಿಗೆ ಜನತೆ ತತ್ತರಿಸುತ್ತಿದೆ. ಇನ್ನೊಂದೆಡೆ ಕಾರದ ಕುರ್ಚಿಗಾಗಿ ಕಾದಾಟ ನಡೆಯುತ್ತಿದೆ. ಲ್ಲದರ ಮಧ್ಯೆ ರಾಜ್ಯದ ಶಾಲೆಗಳ ಎಳೆಯ ಮಕ್ಕಳ ನದಲ್ಲಿ ಮತಾಂಧತೆಯನ್ನು ಬಿತ್ತುವ ಕೆಲಸ ರಂಭಿಸಿರುವ ಸರ್ಕಾರ ಸದ್ದಿಲ್ಲದೆ 'ಭಗವದ್ಗೀತಾ ಠಪಾಠ ಅಭಿಯಾನ' ನಡೆಸಲು ಆದೇಶ ರಡಿಸಿದೆ.

ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಶ್ರೀ ಸೊಂದಾ ರ್ಣವಲ್ಲಿ ಮಹಾ ಸಂಸ್ಥಾನಕ್ಕೆ ಈ ಕಾರ್ಯ ನಡೆಸಲು ಲ್ಲಾ ಶಾಲೆಗಳು ಸಹಕರಿಸುವಂತೆ ಸರ್ಕಾರದ ಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯು ತ್ತೋಲೆ ಹೊರಡಿಸಿ ಇದಕ್ಕೆ ಎಲ್ಲಾ ಅಧಿಕಾರಿಗಳು ರ್ಯಪ್ರವೃತ್ತರಾಗಲು ತಿಳಿಸಿದ್ದು, ಕೆಲ ಶಾಲೆಗಳಿಂದ ಬ್ಬ ಶಿಕ್ಷಕರು ಶಿರಸಿಗೆ ಹೋಗಿ ತರಬೇತಿ ಯಲು ಸೂಚಿಸಲಾಗಿದೆ. ರಾಜ್ಯದ 13 ಜಿಲ್ಲೆಗಳಲ್ಲಿ ಲೆಗಳಲ್ಲಿ ಪ್ರಾರಂಭವಾಗಿರುವ ಈ ಅಭಿಯಾನ ರೆ ಜಿಲ್ಲೆಗಳಿಗೂ ವಿಸ್ತರಣೆಯಾಗಲಿದೆಯಂತೆ.

ಸಗಿ ಸಂಸ್ಥೆಯ ಮೂಲಕ ಕೇಸರೀಕರಣ

ರಾಷ್ಟ್ರೀಯ ಭಾವೈಕ್ಯತೆ, ಸಾಮಾಜಿಕ ಸಾಮರಸ್ಯ, ಲ್ಯ, ಶಿಕ್ಷಣವನ್ನು ಶಾಲಾ ಮಕ್ಕಳಿಗೆ ಕಲಿಸುವ ವಾಗಿ ಭಗವದ್ಗೀತೆಯ 14 ಮತ್ತು 15 ್ಯಾಯವನ್ನು ಕಂಠಪಾಠ ಮಾಡಿಸುವುದು ಈ ಯಾನದ ಉದ್ದೇಶವಂತೆ.ರಾಜ್ಯದ ಶಾಲಾ ಪಠ್ಯ ಕಗಳಲ್ಲಿ ಮೌಲ್ಯ ಶಿಕ್ಷಣ ಕುರಿತು ಪಾಠಗಳು ಾಗಲೇ ಇವೆ. ಇನ್ನು ಅವುಗಳ ತ್ಯವೇನಾದರೂ ಇದ್ದರೆ ಅದಕ್ಕಾಗಿ ಸರ್ಕಾರದ ERT, NCERT ಸೇರಿದಂತೆ ಶಿಕ್ಷಣ ಇಲಾಖೆಯು ಸಿ ಶಿಕ್ಷಣ ತಜ್ಞರ ಸಲಹೆ ಪಡೆದು ಪಠ್ಯವಾಗಿ ಸಬಹುದು. ಆದರೆ ಹಿಂಬಾಗಿಲ ಮೂಲಕ ಯ ಶ್ರೀ ಸೋಂದಾಸ್ವರ್ಣವಲ್ಲಿ ಸಂಸ್ಥಾನ ಎಂಬ ಸಂಸ್ಥೆಗೆ ಈ ಕಾರ್ಯ ವಹಿಸುವುದು ಯಾವ ಕ್ಕಾಗಿ ಎನ್ನುವುದು ಚರ್ಚೆಯಾಗಬೇಕಾಗಿದೆ. ರಿ ಶಾಲೆಗಳಲ್ಲಿ ಖಾಸಗಿ ಸಂಸ್ಥೆಯ ಮೂಲಕ ಯ ಮಕ್ಕಳ ಮನಸ್ಸಿನಲ್ಲಿ 'ಮತಾಂಧತೆಯನ್ನು ದ' ಕಾರ್ಯ ಇದಾಗಿದ್ದು, ಶಿಕ್ಷಣ ರಂಗದ ೀಕರಣದ ಮುಂದುವರಿದ ಭಾಗ ಇದಾಗಿದೆ. ಭಾರತದ ಜಾತ್ಯಾತೀತ ಸಂವಿಧಾನದ ೋಧಿ ಅಭಿಯಾನವಾಗಿದೆ.

ದಲ್ಲಿ ಧಾರ್ಮಿಕ ಹಸ್ತಕ್ಷೇಪ ಸಲ್ಲದು

ಲೆ ಎಂದರೆ ಒಂದು ಧರ್ಮೀಯರ ಲ್ಲ, ಅದು ಬಹುಸಂಸ್ಕೃತಿಯನ್ನು ಆಚರಿಸುವ ುವ ಸುಂದರ ತೋಟ. ಅಲ್ಲಿ ಹಿಂದೂ - - ಕ್ರೈಸ್ತ - ಪಾರ್ಸಿ - ಜೈನ ಇತ್ಯಾದಿಗಳ ಅವುಗಳನ್ನೆಲ್ಲಾ ಮೀರಿ ಬೆಳೆಯುವ ಕನಸು ರುವ ಮನಸುಗಳು ಇರುತ್ತವೆ. ಅಂತಹ ಕಡೆ ರ್ಮವನ್ನು ಪ್ರತಿನಿಧಿಸುವ ಗ್ರಂಥದ ಬೋಧನೆ ಲ್ಲ, ಅಲ್ಲಿ ಬೈಬಲ್, ಕುರಾನ್, ಭಗವದ್ಗೀತೆ ವೇದಗಳು, ಇತ್ಯಾದಿ ಧಾರ್ಮಿಕ ಗ್ರಂಥಗಳನ್ನು ಅಥವಾ ಒಪ್ಪದಿರುವ ಮಕ್ಕಳಿರಬಹುದು. ಕಡೆ ಏಕಮುಖಿ ಧಾರ್ಮಿಕ ಪ್ರಚಾರ ಮತ್ತು

ಶಾಲೆಗಳಲ್ಲಿ ಕುಡಿಯುವ ನೀರಿಲ್ಲ, ಶೌಚಾಲಯಗಳಿಲ್ಲ. ಎಷ್ಟೋ ಕಡೆ ಅಗತ್ಯವಿರುವಷ್ಟು ಶಿಕ್ಷಕರಿಲ್ಲ. ಇಂತಹ ಮೂಲಭೂತ ಸೌಲಭ್ಯಗಳನ್ನು ನೀಡುವ ಬಗೆಗೆ ಗಮನ ನೀಡದ ಸರ್ಕಾರವು ಆರೆಸ್ಸೆಸ್‌ನ ಪ್ರಗತಿವಿರೋಧಿ ಮತಾಂಧ ವಿಚಾರವನ್ನು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಬಿತ್ತಲು ಭಗವದ್‌ಗೀತೆಯ ಕಂಠಪಾಠ ಅಭಿಯಾನ ಯೋಜಿಸಿರುವುದನ್ನು ನಾಡಿನ ಪ್ರಜ್ಞಾವಂತ ಜನತೆ ಎಚ್ಚರದಿಂದ ಗಮನಿಸಬೇಕಿದೆ.

ಶಾಲೆಗಳಲ್ಲಿ ಭಗವದ್ಗೀತೆ ಕಂಠಪಾಠ ಅಭಿಯಾನ

ಶಿಕ್ಷಣ ಕೇಸರೀಕರಣದ ಹುನ್ನಾರ

ಅನಂತ ನಾಯಕ್
ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ


ಬೋಧನೆ ಅನೇಕರನ್ನು ಘಾಸಿಗೊಳಿಸುತ್ತದೆ. ಅಷ್ಟೆ ಅಲ್ಲದೆ ಮನುಷ್ಯ ಪ್ರೀತಿಯ ಬದಲಾಗಿ ಧರ್ಮವೆಂಬ ದ್ವೇಷದ ಗೋಡೆಯನ್ನು ಕಟ್ಟುತ್ತದೆ. ಕೋಮು ವಿಷ ಬೀಜ ಬಿತ್ತುವ ಸಂಘ ಪರಿವಾರ ಪ್ರೇರಿತ ಈ ಅಭಿಯಾನ ನಾಡಿನ ಬಹುಸಂಸ್ಕೃತಿಯನ್ನು ನಾಶಪಡಿಸುತ್ತದೆ.

ಅಷ್ಟಾಗಿ ಭಗವದ್ಗೀತೆ ಸರ್ವ ಸಮ್ಮತವಲ್ಲ

ಬಹು ಹಿಂದಿನಿಂದಲೂ ಭಗವದ್ಗಿತೆಯ ಕುರಿತು ಪರ - ವಿರೋಧದ ಚರ್ಚೆಗಳು ನಡೆಯುತ್ತಲೇ ನಡೆಯುತ್ತಲೇ ಬಂದಿವೆ. ಭಗವದ್ಗೀತೆಯು ಚಾತುವರ್ಣ(ಜಾತಿಪದ್ಧತಿ) ವ್ಯವಸ್ಥೆಯನ್ನು ಸಮರ್ಥಿಸುತ್ತದೆ. ಅವೈಜ್ಞಾನಿಕವಾಗಿರುವ ಪೂರ್ವಜನ್ಮ, ಪಾಪ, ಪುಣ್ಯಗಳನ್ನು ನಂಬುವಂತೆ ಹೇಳುತ್ತದೆ. ಅಷ್ಟೇ ಅಲ್ಲದೆ ಅಸಮಾನತೆ, ಪಾಳೇಗಾರಿ ಮೌಲ್ಯಗಳನ್ನು ಬೆಳೆಸುವಂತಹ ನೀತಿಗಳನ್ನು ಒಳಗೊಂಡಿದೆ. ದುಡಿಯುವವರು ಯಾವುದೇ ಫಲಾಪೇಕ್ಷೆ ಇಲ್ಲದೆ ಗುಲಾಮರಂತೆ ದುಡಿಯಬೇಕೆಂದೂ ಹಾಗೂ ಶ್ರಮಕ್ಕೆ ಪ್ರತಿಫಲ ಕೇಳದೆ ಇರುವಂತೆ ಬೋಧಿಸುತ್ತದೆ. ಆಸ್ತಿಗಾಗಿ ಸಹೋದರ ಸಹೋದರಿಯರನ್ನು ಕೊಲ್ಲು ಎನ್ನುವ ಈ ಗೀತೆಯಸಾರ ಸಮಾಜದ ನೆಮ್ಮದಿ ಕದಡುವುದು ಆಗಿದೆ. ಕ್ರಮವಾಗಿ ತಲೆ - ತೋಳು - ತೊಡೆ - ಪಾದಗಳ ಮೂಲಕ ಬ್ರಾಹ್ಮಣ - ಕ್ಷತ್ರಿಯ - ವೈಶ್ಯ - ಶೂದ್ರರು ಹುಟ್ಟಿದರೆನ್ನುವುದನ್ನು ಸಮರ್ಥಿಸಿಕೊಳ್ಳುವ ಭಗವದ್ಗೀತೆ ಮನುಷ್ಯತ್ವದ ವಿರೋಧಿಯಾಗಿದೆ. ಇದು ದಲಿತರು ಮಹಿಳೆಯರು ಶ್ರಮಿಕರನ್ನು ಮೇಲೆತ್ತುವ ಬದಲು ಸಂಪ್ರದಾಯ ಕಟ್ಟಳೆಗಳಿಗೆ ಸಿಲುಕಿಸಿ ಸಮಾಜದ ಪ್ರಗತಿಗೆ ತಡೆ ನೀಡುತ್ತದೆ. ಇಂತಹ ಗೀತೆಯನ್ನು ಬಹುಧರ್ಮಿಯ ವಿವಿಧ ನಂಬಿಕೆಯನ್ನು ಮಕ್ಕಳಿರುವ ಶಾಲೆಗಳಲ್ಲಿ ಬೋಧಿಸಲು ಹೊರಟಿರುವ ರಾಜ್ಯ ಸರ್ಕಾರದ ಕ್ರಮ ಅತ್ಯಂತ ಸಂವಿಧಾನ ವಿರೋಧಿ ಕೃತ್ಯವಾಗಿದೆ.

ಮಾನವೀಯ ಮೌಲ್ಯಗಳು ಬೇಕಾದರೆ....

ಭಾರತದಲ್ಲಿ ಕೋಮುಸಾಮರಸ್ಯಕ್ಕಾಗಿ ಸಾಮಾಜಿಕ ಅನಿಷ್ಟಗಳಾದ ಜಾತಿ-ಅಸ್ಪೃತ್ಯತೆ ನಾಶಪಡಿಸಲು, ಮೌಲ್ಯಾಧಾರಿತ ಶಿಕ್ಷಣ ವ್ಯವಸ್ಥೆಯ ಜಾರಿಗಾಗಿ ಈ ದೇಶದಲ್ಲಿ ಅನೇಕ ಚಳುವಳಿಗಳು ನಡೆದಿವೆ. ಅವುಗಳಲ್ಲಿ ದುಡಿದ ಅನೇಕ ಗಣ್ಯರ ಆದರ್ಶಗಳ ಕುರಿತು ಪರಿಚಯಿಸಿದರೆ ಸಾಕು. ಬುದ್ಧ, ಬಸವಣ್ಣ, ಕನಕದಾಸ, ಗುರುನಾನಕ್,



ಟಿಪ್ಪುಸುಲ್ತಾನ್, ನಾರಾಯಣಗುರು, ಜ್ಯೋತಿಬಾಫುಲೆ, ಅಂಬೇಡ್ಕರ್, ಶಿಶುನಾಳ ಶರೀಫ, ಕುವೆಂಪು ಹೀಗೆ ಹಲವರು ಈ ಮೌಲ್ಯಗಳನ್ನು ಬೆಳಸಲಿಕ್ಕಾಗಿ ಉಳಿಸಲಿಕ್ಕಾಗಿ ದುಡಿದಿದ್ದಾರೆ. ಇವರ ಕುರಿತು ಪಠ್ಯವಾಗಲಿ. ಆಗ ಶೈಕ್ಷಣಿಕ ಪದ್ಧತಿ ಮೌಲ್ಯಯುತವಾಗಲಿದೆ. ಇದು ಸಂಘಪರಿವಾರ ಪ್ರೇರಿತ ಬಿಜೆಪಿ ಸರ್ಕಾರಕ್ಕೆ ಬೇಕಾಗಿಲ್ಲ. ಏಕೆಂದರೆ ಈ ನಾಡನ್ನು ಪುರೋಹಿತಶಾಹಿಗಳ ಕಪಿಮುಷ್ಠಿಯಲ್ಲಿ ಕಟ್ಟಿಹಾಕಿ ಕೋಮು ರಾಜಕೀಯ ಮಾಡಲು ಹೊರಟಿದ್ದಾರೆ. ಅದಕ್ಕಾಗಿಯೇ ಸುಮಾರು 300 ಕೋಟಿಯಷ್ಟು ಹಣವನ್ನು ಈ ಸರ್ಕಾರ ವಿವಿಧ ಮಠಗಳಿಗೆ ನೀಡಿದ್ದು.

ಕಂಠಪಾಠ ಪ್ರಗತಿಯಲ್ಲ

ಕೆಲವು ಅಭಿಯಾನ ಮಾಡುವ ಮೂಲಕ ಶೈಕ್ಷಣಿಕ ಪ್ರಗತಿ ಸಾಧಿಸಬಹುದು ಎನ್ನುವ ಸರ್ಕಾರ ಭ್ರಮೆಯಿಂದ ನೈಜತೆಯ ಕಡೆಗೆ ತಿರುಗಬೇಕಿದೆ. ಶಾಲಾ ಮಕ್ಕಳಲ್ಲಿ ಪೌಷ್ಠಿಕತೆಯ ಕೊರತೆ ಕಾಡುತ್ತಿದೆ. ಸರ್ಕಾರದ ಬಿಸಿಯೂಟದಲ್ಲಿ ಗುಣಮಟ್ಟ ಇಲ್ಲದಾಗಿದೆ. ಪ್ರತಿ ವಿದ್ಯಾರ್ಥಿಗೆ ದಿನಕ್ಕೆ ಕೇವಲ 1 ರೂ. ಖರ್ಚು ಮಾಡಲಾಗುತ್ತಿದೆ. ಶಾಲೆಗಳಲ್ಲಿ ಶಿಕ್ಷಕರ ಕೊರತೆ, ಕೊಠಡಿ, ನೀರು, ಶೌಚಾಲಯ, ಸೇರಿದಂತೆ ಮೌಲಸೌಲಭ್ಯ ಕೊರತೆ ಕಾಡುತ್ತಿದೆ. ಹೀಗಾಗಿ ಶೈಕ್ಷಣಿಕ ಪ್ರಗತಿಗೆ ಹಿನ್ನಡೆಯಾಗಿದೆ. ಇವುಗಳನ್ನು ಸರಿಪಡಿಸಲು ಕ್ರಮಕೈಗೊಳ್ಳಬೇಕಿರುವ ಸರ್ಕಾರ ಭಗವದ್‌ಗೀತೆಯ ಕಂಠಪಾಠ ಮಾಡಿಸಲು ಅಭಿಯಾನ ನಡೆಸುತ್ತಿರುವುದು ಸಮಸ್ಯೆಗಳನ್ನು ಮರೆಮಾಚುವ ತಂತ್ರವಾಗಿದೆ.

ಕೇಸರೀಕರಣಕ್ಕಾಗಿ ಹಲವು ಮುಖ

ರಾಜ್ಯದಲ್ಲಿ ಅಪರೂಪಕ್ಕೆ ಅಧಿಕಾರ ಹಿಡಿದ ಬಿಜೆಪಿ ಸರ್ಕಾರ ಶಿಕ್ಷಣ ಕೇಸರೀಕರಣಗೊಳಿಸಲಿಕ್ಕಾಗಿ ಹಲವು ದಾರಿಗಳನ್ನು ಹಿಡಿದಿದೆ. ಹಿಂದೆ ಭಯೋತ್ಪಾದನೆಯ ನೆಪಹೇಳಿ ಶಾಲಾ-ಕಾಲೇಜ್ ವಿದ್ಯಾರ್ಥಿಗಳಲ್ಲಿ ಕೋಮುದ್ವೇಷ ಹೆಚ್ಚಿಸುವ ಕಾರ್ಯಕ್ರಮ ನಡೆಯಿತು. ಧಾರ್ಮಿಕ ಆಚರಣೆಯ ಹೆಸರಿನಲ್ಲಿ ಸರ್ಕಾರಿ ಬೊಕ್ಕಸದ ಹಣ ಖರ್ಚು ಮಾಡಿ ಮುಜರಾಯಿ ಇಲಾಖೆಯ ಮೂಲಕ ಲಾಡು, ಗಂಗಾಜಲ ವಿತರಿಸಲಾಗಿತ್ತು. ಶಾಸಕರ ಪ್ರದೇಶಾಭಿವೃದ್ಧಿ ಹಣವನ್ನು ಜೀವ ವಿರೋಧಿ, ಅಭಿವೃದ್ಧಿ ವಿರೋಧಿ ಸಾಹಿತ್ಯವನ್ನು ಪ್ರಕಟಿಸುವ ಸಂಘ ಪರಿವಾರದ 'ರಾಷ್ಟ್ರೋತ್ಥಾನ ಸಾಹಿತ್ಯ ಪರಿಷತ್' ಸುಮಾರು 300 ಪುಸ್ತಕಗಳನ್ನು ರಾಜ್ಯದ ಶಾಲೆಗಳಿಗೆ ಖರೀದಿ ಮಾಡಬೇಕೆಂದು ಸರ್ಕಾರ ಆದೇಶ ಹೊರಡಿಸಿದೆ. ಅಷ್ಟೆ ಅಲ್ಲದೆ ಜನರ ನಡುವೆ ಜೀವಂತವಾಗಿಲ್ಲದ ಭಾಷೆಯೊಂದಕ್ಕಾಗಿ 'ಸಂಸ್ಕೃತ ವೇದ ವಿಶ್ವವಿದ್ಯಾಲಯ 'ತೆರೆಯಬೇಕೆಂದು ಹೊರಟಿದೆ. ಉನ್ನತ ಶಿಕ್ಷಣ ಹಂತದಲ್ಲಿ ಜ್ಯೋತಿಷ್ಯಶಾಸ್ತ್ರ ಬೋಧಿಸಲು ಹೊರಟಿರುವ ಸರ್ಕಾರ ಸಂಪೂರ್ಣವಾಗಿ ಶಿಕ್ಷಣದ ಕೇಸರೀಕರಣ ನಡೆಸಲು ಹಲವು ಮುಖಗಳ ಮೂಲಕ ಮುಂದಾಗುತ್ತಿದೆ.

ದೇಶದ ಸಮಗ್ರತೆಗೆ ಧಕ್ಕೆ ತರಬಹುದಾದ ಸರ್ಕಾರಗಳನ್ನು ಮತ್ತು ಈ ಆಲೋಚನೆಗಳನ್ನು ತಡೆಯಬೇಕಿದೆ. ವೈವಿಧ್ಯತೆಯಲ್ಲಿ ಏಕತೆ ಎನ್ನುವ ಈ ನೆಲದ ಕಾನೂನಿಗೆ ಗೌರವ ಕೊಡದ ಬಿಜೆಪಿ ಸರ್ಕಾರದ ಈ ನೀತಿಗಳು ನಮ್ಮ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿರುವುದರಿಂದ ಇವುಗಳನ್ನು ಹಿಮ್ಮೆಟ್ಟಿಸಬೇಕಿದೆ. ವೈಜ್ಞಾನಿಕ, ವೈಚಾರಿಕ, ಪ್ರಗತಿಪರ ಮೌಲ್ಯಗಳು ಶಿಕ್ಷಣ ಪದ್ಧತಿಯಲ್ಲಿ ಇರುವಂತೆ ಜಾಗರೂಕತೆ ವಹಿಸಬೇಕಿದೆ. ವಿವಿಧ ಅಭಿಯಾನದ ಮೂಲಕ ಕೋಟ್ಯಾಂತರ ಹಣ ವ್ಯಯ ಮಾಡುತ್ತಿರುವ ರಾಜ್ಯ ಸರ್ಕಾರದ ಈ ಶಿಕ್ಷಣ ಕೇಸರೀಕರಣದ ವಿರುದ್ಧ ಎಸ್‌ಎಫ್‌ಐ ಸಂಘಟನೆ ಪ್ರಬಲ ಹೋರಾಟ ರೂಪಿಸುತ್ತಿದ್ದು, ಈ ಚಳುವಳಿ ಬಲಿಷ್ಠಗೊಳಿಸಲು ಶಿಕ್ಷಣ ಪ್ರೇಮಿಗಳು ಭಾಗವಹಿಸಿ ಧರ್ಮನಿರಪೇಕ್ಷ - ಜಾತ್ಯಾತೀತ - ಪರಂಪರೆಯ ನಾಡನ್ನು ಉಳಿಸಿಕೊಳ್ಳಬೇಕಾಗಿದೆ.



ಜಯ

ಬಿಟಿ ಬದನೆ : ಪರವಾನಗಿ ನೀಡಲು ಸರ್ಕಾರದ ತರಾತುರಿ

ವಂಶವಾಹಿನಿಯನ್ನು ಮಾರ್ಪಾಟುಗೊಳಿಸುವ ತಂತ್ರಜ್ಞಾನದಿಂದ ಕೃತಕ ಬಿಟಿ ಬದನೆಕಾಯಿಯನ್ನು ಸಿದ್ದಪಡಿಸಿ ಪೇಟೆಂಟ್ ಪಡೆದಿಕೊಂಡಿರುವ ಮಾನ್ಸಾಂಟೋ ಕಂಪನಿಯ ಹೊಸ ತಳಿಯ ಬದನೆಕಾಯಿಯ ಮೇಲೆ ಎಲ್ಲರ ಕಣ್ಣು ನೆಟ್ಟಿದ್ದು ದೇಶಾದ್ಯಂತ ಗಂಭೀರ ಚರ್ಚೆಗಳು, ಪ್ರತಿಭಟನೆಗಳು ನಡೆಯುತ್ತಿವೆ. ಭಾರತ ಸರ್ಕಾರ ನೇಮಿಸಿದ್ದ ವಂಶವಾಹಿ ತಂತ್ರಜ್ಞಾನ ಅನುಮೋದನಾ ಸಮಿತಿ (ಜೀಇಎಸಿ)ಯು ಬಿಟಿ ಬದನೆಕಾಯಿಯನ್ನು ವ್ಯಾಪಾರ ಬೆಳೆಯಾಗಿ ಬೆಳೆಯಲು ಅನುಮೋದನೆ ನೀಡಲು ಸರ್ಕಾರಕ್ಕೆ ವರದಿ ಮಾಡಿರುವುದು ನಮ್ಮ ರೈತರನ್ನೂ ಒಳಗೊಂಡಂತೆ ಎಲ್ಲರನ್ನೂ ಆತಂಕಕ್ಕೀಡುಮಾಡಿದೆ. ಇದನ್ನು ಭಾರತ ಸರ್ಕಾರವೇನಾದರೂ ಅಂಗೀಕರಿಸಿ ಜಾರಿ ಮಾಡಿದಲ್ಲಿ, ಬಹುರಾಷ್ಟ್ರೀಯ ಕಂಪನಿಗಳಾದ ಮಾನ್ಸಾಂಟೋ/ಮಹಿಕೋ ಗಳು ತಾವು ಅಭಿವೃದ್ಧಿಪಡಿಸಿರುವ ಬಿಟಿ ಬದನೆಕಾಯಿ ಬೀಜಗಳನ್ನು ರೈತರಿಗೆ ಮಾರಾಟ ಮಾಡಬಹುದು. ಬಿಟಿ ಎಂಬುದು ಬ್ಯಾಸಿಲಸ್ ತುರೆಂಜನ್ಸಿಸ್ ಎಂಬ ಬ್ಯಾಕ್ಟೀರಿಯಾದ ಹೆಸರು. ಇದು ಬೆಳೆ ಕೊರೆಯುವ ಕೀಟಗಳನ್ನು ನಾಶ ಮಾಡುವ ಗುಣ ಹೊಂದಿದೆ. ವಿಜ್ಞಾನಿಗಳು ಈ ಬ್ಯಾಕ್ಟೀರಿಯಾದ ವಂಶವಾಹಿಯನ್ನು ಹೊರಸೂಸಿ ಅದನ್ನು ಬದನೆಕಾಯಿಯ ವಂಶವಾಹಿನಿಯ ಜೊತೆ ಸೇರಿಸಿರುತ್ತಾರೆ. ಇದರಿಂದಾಗಿ ಬೆಳೆ ಕೊರೆಯುವ ಕೀಟವನ್ನು ನಾಶ ಮಾಡುವ ಗುಣವನ್ನು ಅಂತರ್ಗತವಾಗಿ ಹೊಂದಿರುವುದರಿಂದ ಬಿಟಿ ಬದನೆಕಾಯಿ ಬೆಳೆಗೆ ಕೀಟನಾಶಕವನ್ನು ಬಳಸಬೇಕಾಗಿಲ್ಲ ಎನ್ನಲಾಗುತ್ತಿದೆ.

ಆದರೆ, ಈ ಬ್ಯಾಕ್ಟೀರಿಯವನ್ನು ಬದನೆಕಾಯಿ ತಳಿಯೊಂದಿಗೆ ಸೇರಿಸಿ ಹೊರತಂದಿರುವ ಬಿಟಿ ತಳಿಯನ್ನು ಬೆಳೆದಾಗ ಅದು ಇತರೆ ಬೆಳೆಗಳ ಮೇಲೆ, ಜೈವಿಕ ಆವರ್ತದ ಮೇಲೆ ಹಾಗೆಯೇ ಪರಿಸರದ ಸಮತೋಲನದ ಮೇಲೆ ಮತ್ತು ಅದನ್ನು ಆಹಾರವಾಗಿ ಉಪಯೋಗಿಸುವ ಮನುಷ್ಯನ ಆರೋಗ್ಯದ ಮೇಲೆ ಅದು ಉಂಟುಮಾಡುವ ಪರಿಣಾಮಗಳ ಕುರಿತು ಹಲವಾರು ಆತಂಕಗಳು ಮತ್ತು ಸಂದೇಹಗಳು ಎದ್ದಿವೆ. ಇದರ ಜೊತೆಗೆ ಇಂಥಹ ಬೀಜಗಳನ್ನು ನಿಯಂತ್ರಣದಲ್ಲಿಟ್ಟು ಕೊಂಡು ಬಹುರಾಷ್ಟ್ರೀಯ ಕಂಪನಿಗಳು ರೈತರಿಂದ ಸಿಕ್ಕಾಪಟ್ಟೆ ಹಣ ವಸೂಲು ಮಾಡುವ ಆತಂಕವೂ ಸೇರಿಕೊಂಡಿದೆ.

ಭಾರತೀಯ ತರಕಾರಿ ಸಂಶೋಧನಾ ಸಂಸ್ಥೆ,



ವಾರಣಾಸಿ, ಕೃಷಿ ವಿಶ್ವವಿದ್ಯಾಲಯ, ಧಾರವಾಡ ಮತ್ತು ತಮಿಳುನಾಡು ಕೃಷಿ ವಿಶ್ವವಿದ್ಯಾಲಯ, ಕೊಯಮತ್ತೂರು ಇವುಗಳು ವಿಶ್ವ ಸಂಸ್ಥೆಯ ಕಾರ್ಯಕ್ರಮದ ಭಾಗವಾಗಿ ಮಾನ್ಸಾಂಟೋ ಮತ್ತು ಮಹಿಕೋ ಕಂಪನಿಗಳೊಂದಿಗೆ ಕೆಲಸ ಮಾಡಿವೆ. ಬಿಟಿ ಬದನೆಕಾಯಿಗೆ ಅನುಮೋದನೆ ನೀಡಿರುವ ಜೀಇಎಸಿ ಯು ಆರಂಭದಿಂದಲೂ ಏಕಸ್ವಾಮ್ಯ ಕಂಪನಿಗಳ ಪರವಾಗಿಯೇ ವರ್ತಿಸುತ್ತಾ ಬಂದಿದೆ. ಜೀಇಎಸಿ ಸಮಿತಿಯೊಳಗೇ ಪರ ವಿರೋಧಾಭಿಪ್ರಾಯಗಳು ಮೂಡಿಬಂದಿದ್ದು ಅವೆಲ್ಲವನ್ನು ಗಣನೆಗೆ ತೆಗೆದುಕೊಂಡಿಲ್ಲ. ಬಿಟಿ ಬದನೆಕಾಯಿಗೆ ಸರ್ಕಾರವೇನಾದರೂ ಅನುಮೋದನೆ ನೀಡಿದಲ್ಲಿ ಇದು ದೇಶದಲ್ಲಿಯೇ ಪ್ರಥಮ ಬಿಟಿ ಬೆಳೆಗೆ ಸಿಕ್ಕ ಅನುಮೋದನೆ ಯಾಗುತ್ತದೆ, ಅಲ್ಲದೆ ಇದರ ಹಿಂದೆಯೇ ಕಾದು ಕುಳಿತಿರುವ ಅಕ್ಕಿ, ಜೋಳ, ಇತ್ಯಾದಿಯಂಥಹ 60 ವಂಶವಾಹಿ ಮಾರ್ಪಾಟಾದ ಆಹಾರ ಬೆಳೆಗಳಿಗೂ ಶುಕ್ರದೆಸೆ ಒದಗಿಬಂದಂತೆ.

ವಿಜ್ಞಾನಿಗಳು, ಸಂಘ ಸಂಸ್ಥೆಗಳಿಂದ ದೇಶದ ನಾನಾಮೂಲೆಗಳಿಂದ ಮೂಡಿಬಂದಿರುವ ಆತಂಕಗಳನ್ನು ನಿವಾರಿಸಲು ಅಗತ್ಯವಾದ ಸಂಶೋಧನಾ ಫಲಿತಾಂಶಗಳ ಆಧಾರದ ಮೇಲೆ ಚರ್ಚಿಸದೆ ಈ ಬೀಜಕ್ಕೆ ಅನುಮೋದನೆ ನೀಡಬಾರದು.



ಸರ್ಕಾರವು ತನ್ನ ಬೀಜ ಉತ್ಪಾದನಾ ಉದ್ದಿಮೆಗಳನ್ನು ಹಂತ ಹಂತವಾಗಿ ಮುಚ್ಚುತ್ತಾ ಮಾನ್ಸಾಂಟೋದಂತಹ ಏಕಸ್ವಾಮ್ಯ ಕಂಪನಿಗಳಿಗೆ ಬೀಜ ಮಾರುಕಟ್ಟೆಯನ್ನು ಹಸ್ತಾಂತರ ಮಾಡತೊಡಗಿದೆ. ಇದರಿಂದ ಈ ಕಂಪನಿಗಳು ಬೀಜವನ್ನು ತಮ್ಮ 'ಬೌದ್ಧಿಕ ಆಸ್ತಿ'ಯಂತೆ ಪರಿಗಣಿಸಿ ಒಂದೊಂದು ಕಾಳಿಗೂ ಸಿಕ್ಕಾಪಟ್ಟೆ ಹಣ ವಸೂಲಿ ಮಾಡಿ ರೈತರನ್ನು ತಮ್ಮ ಗುಲಾಮರನ್ನಾ ಮಾಡಿಕೊಳ್ಳುತ್ತವೆ. ಸರ್ಕಾರ ನಮ್ಮ ಕೃ ಸಂಶೋಧನಾ ಸಂಸ್ಥೆಗಳನ್ನೂ ಕೂಡ ಇಂತ ಬಹುರಾಷ್ಟ್ರೀಯ ಕಂಪನಿಗ ಬಾಲಂಗೋಚಿಯನ್ನಾಗಿ ಮಾಡುತ್ತಿದೆ. 2002 ಮ 2005ರ ನಡುವೆ ಪರವಾನಗಿ ಪಡೆದುಕೊಂಡು ಬಿ ಹತ್ತಿ ಬೀಜಗಳನ್ನು ಪ್ರತಿ 450 ಗ್ರಾಂಗೆ ರು 2000/- ವರೆಗೂ ರೈತರಿಂದ ವಸೂಲಿ ಮಾಡಿ ಇದರ ವಿರುದ್ಧ ಆಂಧ್ರಪ್ರದೇಶದ ಕಿಸಾನ್ ಸಭ ಏಕಸ್ವಾಮ್ಯ ನಿರ್ಬಂಧನಾ ವ್ಯಾಪಾರ ಆಚರ ಆಯೋಗಕ್ಕೆ ದೂರು ನೀಡಿತ್ತು. ಇದರಲ್ಲಿ ಕಂಪನಿಯ ಏಕಸ್ವಾಮ್ಯ ವಿಧಾನಗಳನ್ನ ಅನುಸರಿಸುತ್ತಿದೆಯೆಂದು ಸಾಬೀತಾ ದಂಡ ವಿಧಿಸಲಾಗಿತ್ತು. ಅಲ್ಲ ಯೂರೋಪಿಯನ್ ಒಕ್ಕೂ ರಾಷ್ಟ್ರಗಳು ವಂಶವಾ ಮಾರ್ಪಾಟಾದ ಬೀಜಗಳ ಅನುಮೋದನೆ ನೀಡದೆ ತಿರಸ್ಕರಿಸಿ

ಇವೆಲ್ಲ ಹಿನ್ನೆಲೆಯಲ್ಲಿ ಸರ್ಕಾ ಏಕಾಏಕಿ ಬಹುರಾಷ್ಟ್ರೀಯ ಕಂಪನಿ ಹಿತಕಾಯಲು ಹಾತೊರೆದು ನ ದೇಶದ ರೈತರ ಹಿತಾಸಕ್ತಿ, ಜನತೆ ಆರೋಗ್ಯ ಮತ್ತು ಪರಿಸರ ಹಿತಾಸಕ್ತಿಗಳನ್ನು ಬಲಿಕೊಡಬಾರದು ಈಗಾಗಲೇ ವಿಜ್ಞಾನಿಗಳು, ಸಂಘ ಸಂಸ್ಥೆಗಳಿಂ ದೇಶದ ನಾನಾಮೂಲೆಗಳಿಂದ ಮೂಡಿಬಂದಿರು ಆತಂಕಗಳನ್ನು ನಿವಾರಿಸಲು ಅಗತ್ಯವಾ ಸಂಶೋಧನಾ ಫಲಿತಾಂಶಗಳ ಆಧಾರದ ಮೇ ಚರ್ಚಿಸದೆ ಈ ಬೀಜಕ್ಕೆ ಅನುಮೋದ ನೀಡಬಾರದು.

ಮಾನ್ಸಾಂಟೋ ಕಂಪನಿಯ ಬೆಂಗಳೂರಿನಲ್ಲಿಯೂ ಒಂದು ಸಂಶೋಧನ ಕೇಂದ್ರವನ್ನು ಹೊಂದಿದ್ದು ಅದರಲ್ಲಿ ನ ದೇಶದವರೇ ಆದ 50 ಮಂದಿ ವಿಜ್ಞಾನಿಗಳು ಕೆಲ ಮಾಡುತ್ತಿದ್ದಾರೆ!

ಅಕ್ಕಿಯ ಬೆಲೆ ...

ಪುಟ 2 ರಿಂದ

ಸಮಯದಲ್ಲಿ ಅವರು 6ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಜಾರಿಗೊಳಿಸಿ ಮಧ್ಯಮ ವರ್ಗದವರ ಮನ್ನಣೆ ಗಳಿಸಿಕೊಂಡರು)

ಜನತೆ ಈ ವಿಷಯಗಳಿಂದ ಮಾತ್ರವೇ ಮತ ನೀಡಲಿಲ್ಲವೆಂಬುದೇನೋ ಖಂಡಿತ. ಆದರೆ ಅವು ಕೂಡ ಭಾರೀ ದೊಡ್ಡ ಪಾತ್ರವನ್ನೇ ವಹಿಸಿದವು. (ವೈ.ಎಸ್.ಆರ್. ಮತ್ತು ನವೀನ್ ಪಟ್ನಾಯಕ್ ವಿಚಾರದಲ್ಲಿ ಇವುಗಳ ಜೊತೆ ಸಹಾಯ ಮಾಡಿದ ಮತ್ತೊಂದು ಅಂಶವಿದೆ. ಎರಡು ರಾಜ್ಯಗಳಲ್ಲಿ ಸಕಾರಾತ್ಮಕ ವಿಷಯಗಳು ಇವೆ ಮತ್ತು ಅವು ಕಣ್ಣಿಗೆ ಕಾಣುತ್ತವೆ. ಆದರೆ ದೊಡ್ಡ ಪ್ರಮಾಣದ ನಿರ್ವಸತಿಕರಣ, ಎಸ್‌ಇಜಡ್‌ಗಳು, ಅಪಾಯಕಾರಿ ಗಣಿಗಾರಿಕೆಯಂತಹ ನಕಾರಾತ್ಮಕ ವಿಷಯಗಳು ಸ್ಫೋಟಿಸಲು ಸರಣಿಯಲ್ಲಿ ಕಾದುಕೂತಿವೆ. ಈ ಅವಘಡಗಳು ಸಂಭವಿಸಲು ಇನ್ನೂ 2-3 ವರ್ಷಗಳು ಬೇಕಾಗಬಹುದು.)

ಚತ್ತೀಸ್‌ಗಡದಲ್ಲಿ, ಅನೇಕ ಪ್ರತಿಕೂಲ ಅಂಶಗಳಿದ್ದರೂ, ಮುಖ್ಯಮಂತ್ರಿ ರಮಣಸಿಂಗ್ ರವರು 3 ರೂ.ಗೆ ಕೆ.ಜಿ.ಯಂತೆ ಪ್ರತಿ ಕುಟುಂಬಕ್ಕೆ 35 ಕೆ.ಜಿ. ಅಕ್ಕಿ ನೀಡಲು ವೈಯುಕ್ತಿಕ ಆಸಕ್ತಿವಹಿಸಿದ್ದರು. ಅವರ ಸರ್ಕಾರ ಏಕಾಏಕಿ ಬಿಪಿಎಲ್ ಸಂಖ್ಯೆಯನ್ನು 15 ದಶಲಕ್ಷಕ್ಕೆ ಹೆಚ್ಚಿಸಿತು. ಆ ರಾಜ್ಯದ ಜನಸಂಖ್ಯೆಯೇ 20.8 ದಶಲಕ್ಷ. (2001ರ ಜನಗಣತಿ) ಅಂದರೆ ಹತ್ತಿರ ಹತ್ತಿರ ಶೇ. 70ರಷ್ಟು ಜನರನ್ನು ಬಿಪಿಎಲ್ ಎಂದು ಘೋಷಿಸಲಾಯಿತು. ಇದನ್ನು 2008ರ ಅಸೆಂಬ್ಲಿ ಚುನಾವಣೆಗೆ ಹಲವಾರು ತಿಂಗಳ ಮೊದಲೇ ಮಾಡಲಾಯಿತು. ಇದು ಸರ್ಕಾರಕ್ಕೆ ರಾಜ್ಯ ಮತ್ತು ರಾಷ್ಟ್ರದ ಎರಡೂ ಚುನಾವಣೆಗಳಲ್ಲಿ ಸಹಾಯಕ್ಕೆ ಬಂತು.

ಅಧಿಕಾರದಲ್ಲಿರುವವರು ಈ ಚುನಾವಣಾ ಫಲಿತಾಂಶಗಳಿಂದ ಕಲಿಯ ಬೇಕಾದ್ದೇನು? ಅವರು ಹೆಚ್ಚಿನ ಉದಾರೀಕರಣಕ್ಕೆ, ಖಾಸಗೀಕರಣಕ್ಕೆ, ಬೆಲೆ ಹೆಚ್ಚಳಕ್ಕೆ ಅಥವಾ ಅಂತಹದ್ದೇ ಸುಧಾರಣೆಗಳಿ ಜನಾದೇಶ ಪಡೆದಿದ್ದೇವೆ ಎಂಬುದನ್ನೇ? ಅಥವ ಅಕ್ಕಿಯ ಬೆಲೆ ಅಧಿಕಾರದ ಬೆಲೆಯಾಗಬಹುದ ಎಂಬುದನ್ನೇ? ಉದ್ಯೋಗ ಮತ್ತು ಭದ್ರ ಪ್ರಾಮುಖ್ಯ ಎಂಬುದನ್ನೇ? ಆಹಾರದ ಬೆಲೆ ಮ ಅಗ್ಗದ ಅಕ್ಕಿಗಳೇ ಎಲ್ಲವೂ ಅಲ್ಲವಾದರೂ ಬಹ ಪ್ರಾಮುಖ್ಯವಾದವು. ಈಗಾಗಲೇ ನಿರಂತರವಾ ಲಾಭ ತಂದಿರುವ ಇದೇ ವಿಷಯಗಳ ಮೇ ಸರ್ಕಾರಗಳು ಅವಲಂಬಿತವಾಗಲು ಸಾಧ್ಯವಾಗದು ಆದರೆ ಈ ಇಡೀ ಪ್ರಕ್ರಿಯೆ ಒಂದು ಮುಂದ ಮತ್ತು ಜನತೆಯ ನಿರೀಕ್ಷೆಯ ನೊಗವನ್ನು ಎತ್ತರಿಸಿದ ತದ್ವಿರುದ್ಧವಾದುದು ಆತ್ಮಹತ್ಯಾಕಾರಿಯೆಂದ ಸಾಬೀತಾಗಬಹುದು. ○

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE
Editor: S.Y.GURUSHANTH